ಗುರುವಾರ, ಡಿಸೆಂಬರ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 338 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,410	18,560	₹ 55,300 (ಬೆಂಗಳೂರು)	₹66,500 (ಬೆಂಗಳೂರು)	82.47

ಕಬ್ಬು ದರ ಟನ್‌ಗೆ ₹50 ಹೆಚ್ಚುವರಿ

ಬೆಂಗಳೂರು: 2022–23 ನೇ ಸಕ್ಕರೆ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಕೇಂದ್ರ ಸರ್ಕಾರ ನಿಗದಿ ಮಾಡಿರುವ ದರದ ಜೊತೆಗೆ ಪ್ರತಿ ಟನ್‌ಗೆ ₹50 ಹೆಚ್ಚುವರಿಯಾಗಿ ನೀಡುವ ಸಂಬಂಧ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಅಲ್ಲದೆ, 2022–23 ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮು ಮುಗಿದ ನಂತರ ವಾಸ್ತವಿಕವಾಗಿ ಸಕ್ಕರೆ, ಎಥೆನಾಲ್ ಮತ್ತು ಇತರೆ ಉಪ ಉತ್ಪನ್ನಗಳ ಮಾರಾಟದಿಂದ ಬರುವ ಅಂತಿಮ ಆದಾಯವನ್ನು ಹಂಚಿಕೆ ಸೂತ್ರದ ಪ್ರಕಾರ ಅಂತಿಮ ಕಬ್ಬಿನ ದರವನ್ನು ನಿರ್ಧರಿಸಲಾಗುವುದು ಎಂದು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕ ಶಿವಾನಂದ ಎಚ್. ಕಲಕೇರಿ ಆದೇಶದಲ್ಲಿ ತಿಳಿಸಿದ್ದಾರೆ.

ತುರ್ತಾಗಿ ₹ 1,000 ಕೋಟಿ ಬಿಡುಗಡೆಗೆ ಬೇಡಿಕೆ • ನೆರವಿಗಾಗಿ ಕಾಯುತ್ತಿರುವ ಲಕ್ಷಾಂತರ ಫಲಾನುಭವಿಗಳು

ಅತಿವೃಷ್ಟಿ ಸಂತ್ರಸ್ತರ ಸೂರಿಗೆ ಅನುದಾನದ ಬರ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಪ್ರವಾಹ ಮತ್ತು ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ಪುನಃ ಸೂರು ನಿರ್ಮಿಸಿ ಕೊಳ್ಳಲು ನೆರವು ನೀಡುವ ಯೋಜನೆಗೆ ಅನುದಾನದ ಕೊರತೆ ಎದುರಾಗಿದೆ. ಈ ಯೋಜನೆಗೆ ₹ 2,634.97 ಕೋಟಿ ಅನುದಾನ ಬೇಕಿದ್ದು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಬಳಿ ಲಭ್ಯವಿರುವುದು ಕೇವಲ ₹ 2 ಕೋಟಿ!

2019ರಿಂದ 2022ರವರೆಗೆ ಮಳೆ ಮತ್ತು ಪ್ರವಾಹದಿಂದ 3.03 ಲಕ್ಷ ಮನೆಗಳಿಗೆ ಹಾನಿಯಾಗಿದೆ. ಸಂಪೂರ್ಣ ಹಾಗೂ ಹೆಚ್ಚಿನ ಹಾನಿಯಾದ ಮನೆಗಳ ಪುನರ್ ನಿರ್ಮಾಣಕ್ಕೆ ಹಾಗೂ ಭಾಗಶಃ ಹಾನಿಯಾದ ಮನೆಗಳ ದುರಸ್ತಿಗೆ ನೆರವು ನೀಡಲು ಒಟ್ಟು ₹ 5,009.33 ಕೋಟಿ ಬೇಕಿದೆ. ಮೊದಲ ಮೂರು ವರ್ಷಗಳ ಅವಧಿಯಲ್ಲಿ ₹ 2,374.36 ಕೋಟಿ ಮಾತ್ರ ಬಿಡುಗಡೆಯಾಗಿದೆ.

2022ರಲ್ಲಿ 71,038 ಮನೆಗಳಿಗೆ ಹಾನಿಯಾಗಿದ್ದು, ಮೊದಲ ಕಂತನ್ನು ರಾಷ್ಟ್ರೀಯ ವಿಕೋಪ ಪರಿಹಾರ ನಿಧಿ (ಎನ್ ಡಿಆರ್‌ಎಫ್) ಮತ್ತು ರಾಜ್ಯ ವಿಕೋಪ ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ಅನುದಾನದ ಅಡಿಯಲ್ಲಿ ಕಂದಾಯ ಇಲಾಖೆಯಿಂದ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ.

ಉಳಿದ ಕಂತುಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಪಾವತಿಸಬೇಕಿದೆ. ಉಳಿದ ಕಂತುಗಳ ಪಾವತಿಗೆ ₹ 1,106.22 ಕೋಟಿಯನ್ನು ನಿಗಮಕ್ಕೆ ಒದಗಿಸಬೇಕಿದೆ.

ಅಡಿಪಾಯ, ಗೋಡೆ, ಛಾವಣಿ ಹಾಗೂ ಕಾಮಗಾರಿ ಪೂರ್ಣಗೊಂಡಾಗ ಹಾಗೂ ಶೌಚಾಲಯ ನಿರ್ಮಾಣದ ವೆಚ್ಚವನ್ನು ಐದು ಕಂತುಗಳಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ. ಸಾವಿರಾರು ಫಲಾನುಭವಿಗಳಿಗೆ ಎರಡು, ಮೂರು, ನಾಲ್ಕನೇ ಕಂತಿನ ಅನುದಾನ ಇನ್ನೂ ಬಿಡುಗಡೆಯಾಗಿಲ್ಲ. ಅರ್ಧಂಬರ್ಧ ಕಾಮಗಾರಿ ಮುಗಿಸಿ, ದೀರ್ಘಕಾಲದಿಂದ ಅನುದಾನ ಬಿಡುಗಡೆಗೆ ಕಾಯುತ್ತಿರುವ ಹಲವರು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಕೇಂದ್ರ ಕಚೇರಿಗೂ ಬರುತ್ತಿದ್ದಾರೆ.

‘ಪ್ರವಾಹ ಸಂತ್ರಸ್ತರ ಮನೆ ನಿರ್ಮಾಣ ಯೋಜನೆಯ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಸಂಬಂಧಿಸಿದ ಪ್ರಸ್ತಾವಗಳು ಬೃಹತ್ ಸಂಖ್ಯೆಯಲ್ಲಿ ಬಾಕಿ ಇವೆ. ಆದರೆ, ಈ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಲಭ್ಯವಿರುವುದೇ ₹ 2 ಕೋಟಿ’ ಎನ್ನುತ್ತಾರೆ ನಿಗಮದ ಅಧಿಕಾರಿಗಳು.

₹ 1,000 ಕೋಟಿಗೆ ಬೇಡಿಕೆ: ವಿವಿಧ ಕಂತುಗಳ ಅನುದಾನ ಬಳಕೆ ಮಾಡಿರುವ ಫಲಾನುಭವಿಗಳಿಗೆ ಮುಂದಿನ ಕಂತು ಪಾವತಿಸಲು ತಕ್ಷಣವೇ ₹ 1,000 ಕೋಟಿ ಅನುದಾನ ಒದಗಿಸುವಂತೆ ನಿಗಮ ಹಲವು ದಿನಗಳ ಹಿಂದೆಯೇ ಕಂದಾಯ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ.

5ನೇ ಪುಟ ನೋಡಿ

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಬೇಕಿರುವ ಅನುದಾನದ ವಿವರ (ಮೊತ್ತ ₹ಕೋಟಿಗಳಲ್ಲಿ)

ವರ್ಷ	ಮನೆಗಳ ಸಂಖ್ಯೆ	ನಿಗಮಕ್ಕೆ ಬೇಕಾದ ಮೊತ್ತ	ಬಿಡುಗಡೆ	ವೆಚ್ಚ	ಬಾಕಿ
2019–20	1,39,755	2,316.52	1,775.17	1,775.17	541.35
2020–21	39,171	571.50	355.51	355.51	215.99
2021–22	53,745	1,015.09	243.68	241.68	771.41
2022–23	71,038	1,106.22	00.00	00.00	1,106.22
ಒಟ್ಟು	3,03,709	5,009.33	2,374.36	2,372.36	2,634.96

ಮಹಾರಾಷ್ಟ್ರದ ವಿವಿಧ ಡಿಪೊಗಳಲ್ಲಿಯೇ ನಿಂತ ರಾಜ್ಯದ 250 ಬಸ್‌ಗಳು

ಗಡಿ ಗಲಾಟೆ: ಬಸ್ ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಗಡಿ ವಿವಾದ ತಾರಕಕ್ಕೇರಿರುವ ಕಾರಣ, ಕರ್ನಾಟಕ, ಮಹಾರಾಷ್ಟ್ರ ಮಧ್ಯೆ ಬುಧವಾರ ಬೆಳಿಗ್ಗೆಯಿಂದ ಬಸ್ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಜಿಲ್ಲೆಯಿಂದ ದಿನವೂ 330 ಬಸ್‌ಗಳು ಮಹಾರಾಷ್ಟ್ರಕ್ಕೆ, ಅಲ್ಲಿಂದ 70ಕ್ಕೂ ಹೆಚ್ಚು ಬಸ್‌ಗಳು ಬೆಳಗಾವಿಗೆ ಕಾರ್ಯಾಚರಣೆ ನಡೆಸುತ್ತವೆ. ಏಕಾಏಕಿ ಬಸ್ ಸಂಚಾರ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರು ಪರದಾಡುವಂತಾಯಿತು. ಹಲವರು ಖಾಸಗಿ ವಾಹನಗಳತ್ತ ಮುಖ ಮಾಡಿದರು. ಇದರಿಂದ ಸಾರಿಗೆ ಸಂಸ್ಥೆಗೆ ನಿತ್ಯ ಬರುತ್ತಿದ್ದ ₹ 35 ಲಕ್ಷ ಆದಾಯವೂ ಕಡಿತಗೊಂಡಿತು.

ತಾಲ್ಲೂಕಿನ ಹಿರೇಬಾಗೇವಾಡಿ ಬಳಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಕಾರ್ಯಕರ್ತರು ಮಂಗಳವಾರ ಮಹಾರಾಷ್ಟ್ರದ ವಾಹನಗಳಿಗೆ ಮಸಿ ಬಳಿದಿದ್ದರು. ಇದಕ್ಕೆ ಪ್ರತೀಕಾರವಾಗಿ ಮಹಾರಾಷ್ಟ್ರದ ವಿವಿಧೆಡೆ ಶಿವಸೇನೆ(ಯು) ಹಾಗೂ ಮಹಾರಾಷ್ಟ್ರ ನವನಿರ್ಮಾಣ ಸೇನೆ ಕಾರ್ಯಕರ್ತರು ಬುಧವಾರ ಪ್ರತಿಭಟಿಸಿದರು.

ಕರ್ನಾಟಕದ ಬಸ್‌ಗಳಿಗೆ ಮಸಿ ಬಳಿದು, ಧಿಕ್ಕಾರ ಕೂಗಿದರು. ಕೆಲವು ಬಸ್‌ಗಳ ಮೇಲೆ ಕೆಂಪು ಬಣ್ಣದಿಂದ ‘ಜೈ ಮಹಾರಾಷ್ಟ್ರ’ ಎಂದು ಬರೆದರು.

‘ಕೊಲ್ಹಾಪುರದಲ್ಲಿ 150, ಮೀರಜ್‌ನಲ್ಲಿ 100 ಬಸ್‌ಗಳನ್ನು ನಿಲುಗಡೆ ಮಾಡಲಾಗಿದೆ’ ಎಂದು ಸಾರಿಗೆ ಸಂಸ್ಥೆಯ ಚಿಕ್ಕೋಡಿ ವಿಭಾಗೀಯ ನಿಯಂತ್ರಣಾಧಿಕಾರಿ ಶಶಿಧರ ಹೇಳಿದರು.

‘ಮಹಾರಾಷ್ಟ್ರದ ಬಾರಾಮತಿ ಬಸ್ ನಿಲ್ದಾಣದಲ್ಲಿ ಶಿವಸೇನೆ ಕಾರ್ಯಕರ್ತರು ಬಸ್‌ಗೆ ಮಸಿ ಬಳಿದರು. ಈ ಬೆಳವಣಿಗೆಯಿಂದಾಗಿ, ಮಹಾರಾಷ್ಟ್ರದಲ್ಲಿ ಬಸ್ ಓಡಿಸಲು ಭಯವಾಗುತ್ತಿದೆ’ ಎಂದು ಹಳಿಯಾಳ ಘಟಕದ ಬಸ್ ನಿರ್ವಾಹಕ ಭರಮಪ್ಪ ಅವರು ಬೆಳಗಾವಿ ಬಸ್ ನಿಲ್ದಾಣದಲ್ಲಿ ತಿಳಿಸಿದರು.

ಪೊಲೀಸ್ ಬಂದೋಬಸ್ತ್: ಮಹಾರಾಷ್ಟ್ರದಲ್ಲಿ ಕರ್ನಾಟಕದ ಬಸ್‌ಗಳಿಗೆ ಮಸಿ ಬಳಿದ ಘಟನೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಇಲ್ಲಿನ ಕೇಂದ್ರ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು. ಮಹಾರಾಷ್ಟ್ರ ಸರ್ಕಾರ, ಶಿವಸೇನೆ ಹಾಗೂ ಎಂಇಎಸ್ ವಿರುದ್ಧ ಘೋಷಣೆ ಮೊಳಗಿಸಿದರು.

ಇದೇ ವೇಳೆ ಇಲ್ಲಿನ ಕೇಂದ್ರ ಬಸ್ ನಿಲ್ದಾಣಕ್ಕೆ ಬಂದ ಮಹಾರಾಷ್ಟ್ರದ ಎರಡು ಬಸ್‌ಗಳಿಗೆ ಮುನ್ನೆಚ್ಚರಿಕೆ ದೃಷ್ಟಿಯಿಂದ ಸಂಚಾರಕ್ಕೆ ಅವಕಾಶ ಕೊಡಲಿಲ್ಲ. ನಗರ ಪೊಲೀಸ್ ಆಯುಕ್ತ ಡಾ.ಎಂ.ಬಿ. ಬೋರಲಿಂಗಯ್ಯ ಬಿಗಿಭದ್ರತೆ ಏರ್ಪಡಿಸಿದರು. ಸ್ಥಳದಲ್ಲಿ ಕೆಎಸ್‌ಆರ್‌ಪಿ ತುಕಡಿಯನ್ನು ನಿಯೋಜಿಸಲಾಗಿದೆ.

ಇನ್ನಷ್ಟು ಸುದ್ದಿಗಳು 6



ಬೆಳಗಾವಿಯ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಬುಧವಾರ ಪೊಲೀಸರು ಬಿಗಿ ಭದ್ರತೆ ಕೈಗೊಂಡರು/ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಕೇಂದ್ರಾಡಳಿತ ಪ್ರದೇಶ ಮಾಡಿ: ರಾವುತ್

ಬೆಳಗಾವಿಯಲ್ಲಿ ಮರಾಠಿಗರ ಮೇಲೆ ನಿರಂತರ ದೌರ್ಜನ್ಯ ನಡೆದಿದೆ. ಎಂಇಎಸ್ ಕಾರ್ಯಕರ್ತರನ್ನು ಬಂಧಿಸಲಾಗಿದೆ. ದೆಹಲಿಯವರ ಬೆಂಬಲವಿಲ್ಲದೇ ಬೆಳಗಾವಿಯಲ್ಲಿ ಇಂಥ ದೌರ್ಜನ್ಯ ನಡೆಯಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಧೈರ್ಯವಿದ್ದರೆ ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶ ಮಾಡಲು ಒತ್ತಡ ಹೇರಬೇಕು’ ಎಂದು ಮಹಾರಾಷ್ಟ್ರದ ರಾಜ್ಯಸಭೆ ಸದಸ್ಯ, ಶಿವಸೇನೆ(ಯು) ವಕ್ತಾರ ಸಂಜಯ್ ರಾವುತ್ ಟ್ವಿಟ್ ಮಾಡಿದ್ದಾರೆ.

ಲೋಕಸಭೆಯಲ್ಲಿ ಗಡಿವಿವಾದ ಪ್ರಸ್ತಾಪ

ನವದೆಹಲಿ: ಕರ್ನಾಟಕ–ಮಹಾರಾಷ್ಟ್ರ ಗಡಿವಿವಾದ ವಿಷಯವು ಲೋಕಸಭೆಯಲ್ಲಿ ಬುಧವಾರ ಪ್ರಸ್ತಾಪವಾಯಿತು.

ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಎನ್‌ಸಿಪಿ ಸದಸ್ಯೆ ಸುಪ್ರಿಯಾ ಸುಳೆ, ‘ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಹಾರಾಷ್ಟ್ರದ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ. ಕಳೆದ 10 ದಿನಗಳಿಂದ ಮಹಾರಾಷ್ಟ್ರವನ್ನು ಒಡೆಯಲು ಸಂಚು ರೂಪಿಸಲಾಗಿದೆ’ ಎಂದರು.

‘ಎರಡೂ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರ ಇದೆ. ಕರ್ನಾಟಕದ ಗಡಿಯಲ್ಲಿ ಮಹಾರಾಷ್ಟ್ರದ ಜನರನ್ನು ಥಳಿಸಲಾಗಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೂಡಲೇ ಮಧ್ಯಪ್ರವೇಶಿಸಬೇಕು’ ಎಂದು ಆಗ್ರಹಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಹಾವೇರಿ ಸಂಸದ ಶಿವಕುಮಾರ್ ಉದಾಸಿ, ‘ಗಡಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿದೆ. ಹೀಗಾಗಿ, ಈ ವಿಷಯದ ಕುರಿತು ಮಹಾರಾಷ್ಟ್ರದ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಬಾರದು’ ಎಂದು ಮನವಿ ಮಾಡಿದರು.

ಲೋಕಸಭಾಧ್ಯಕ್ಷ ಓಂ ಬಿರ್ಲಾ, ‘ಗಡಿ ವಿವಾದ ಸೂಕ್ಷ್ಮ ವಿಚಾರವಾಗಿದ್ದು, ಎಲ್ಲ ವಿಷಯವನ್ನು ಸದನದಲ್ಲಿ ಮಾತನಾಡಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದರು.

ಗಡಿ ವಿವಾದದ ಬಗ್ಗೆ ಚರ್ಚಿಸಲು ಅವಕಾಶ ನೀಡಿಲ್ಲ ಎಂದು ಆರೋಪಿಸಿ ಎನ್‌ಸಿಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಕರ್ನಾಟಕ ಬ್ಯಾಂಕ್ ಫಲಕಕ್ಕೆ ಮಸಿ

ನಾಸಿಕ್ (ಪಿಟಿಐ): ಸ್ವರಾಜ್ಯ ಸಂಘಟನೆಯ ಕಾರ್ಯಕರ್ತರು ನಾಸಿಕ್‌ನಲ್ಲಿರುವ ಕರ್ನಾಟಕ ಬ್ಯಾಂಕ್‌ನ ಫಲಕಕ್ಕೆ ಬುಧವಾರ ಮಸಿ ಬಳಿದಿದ್ದಾರೆ. ಬ್ಯಾಂಕ್ ಕಟ್ಟಡದ ಷಟರ್ ಮೇಲೆ ‘ಜೈ ಮಹಾರಾಷ್ಟ್ರ’ ಎಂದೂ ಬರೆದಿದ್ದು, ಕರ್ನಾಟಕದ ವಿರುದ್ಧ ಘೋಷಣೆಗಳನ್ನೂ ಕೂಗಿದ್ದಾರೆ.

ಮೀರಾಬಾಯಿ ಬೆಳ್ಳಿ ಬೆಡಗು



ವಿಭಾಗ ಮಹಿಳೆಯರ 49 ಕೆ.ಜಿ

ಎತ್ತಿದ ಭಾರ ಒಟ್ಟು 200 ಕೆ.ಜಿ (ಸ್ನ್ಯಾಚ್–87 ಕೆ.ಜಿ) (ಕ್ಲೀನ್–ಜರ್ಕ್ 113 ಕೆ.ಜಿ)

• ಜಿಯಾಂಗ್ ಹುವ್ಯೆ (ಚೀನಾ: 206 ಕೆ.ಜಿ– ಚಿನ್ನ)
• ಝಿಹುವಾ (ಚೀನಾ: 198 ಕೆ.ಜಿ –ಕಂಚು)

ಬೊಗೊಟಾ, ಕೊಲಂಬಿಯಾ (ಪಿಟಿಐ): ಭಾರತದ ಮೀರಾಬಾಯಿ ಚಾನು ಇಲ್ಲಿ ನಡೆಯುತ್ತಿರುವ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು. ತಮ್ಮ ಮಣಿಕಟ್ಟಿಗೆ ಆಗಿರುವ ಗಾಯದ ನೋವಿನಲ್ಲಿಯೂ ಅವರು ಈ ಸಾಧನೆ ಮಾಡಿದರು.

ಮೀರಾಬಾಯಿ ಪ್ರಮುಖ ಸಾಧನೆಗಳು

ವರ್ಷ	ಸ್ಪರ್ಧೆ	ವಿಭಾಗ (ಕೆ.ಜಿ)	ಪದಕ
2017	ವಿಶ್ವ ಚಾಂಪಿಯನ್‌ಷಿಪ್	48	ಚಿನ್ನ
2020	ಟೋಕಿಯೊ ಒಲಿಂಪಿಕ್ಸ್	49	ಬೆಳ್ಳಿ
2022	ವಿಶ್ವ ಚಾಂಪಿಯನ್‌ಷಿಪ್	49	ಬೆಳ್ಳಿ
2020	ಏಷ್ಯನ್ ಚಾಂಪಿಯನ್‌ಷಿಪ್	49	ಕಂಚು
2022	ಕಾಮನ್‌ವೆಲ್ತ್ ಗೇಮ್ಸ್	49	ಚಿನ್ನ
2018	ಕಾಮನ್‌ವೆಲ್ತ್ ಗೇಮ್ಸ್	48	ಚಿನ್ನ
2014	ಕಾಮನ್‌ವೆಲ್ತ್ ಗೇಮ್ಸ್	48	ಬೆಳ್ಳಿ

ಗುಜರಾತ್, ಹಿಮಾಚಲ ಇಂದು ಮತ ಎಣಿಕೆ

ನವದೆಹಲಿ: ಗುಜರಾತ್, ಹಿಮಾಚಲ ಪ್ರದೇಶ ವಿಧಾನಸಭೆಗಳ ಹಾಗೂ ಹಲವು ರಾಜ್ಯಗಳ ಉಪಚುನಾವಣೆಗಳ ಮತ ಎಣಿಕೆ ಗುರುವಾರ ನಡೆಯಲಿದೆ.

ಗುಜರಾತ್ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ಹೊಸ ದಾಖಲೆಗಳನ್ನು ಬರೆಯುವ ಉಮೇದಿನಲ್ಲಿ ಬಿಜೆಪಿ ಇದೆ. ಗುಜರಾತ್‌ನಲ್ಲಿ ಸತತ ಆರು ಚುನಾವಣೆಗಳನ್ನು (27 ವರ್ಷ) ಕಮಲ ಪಾಳಯ ಗೆದ್ದಿದೆ. ಒಂದು ವೇಳೆ, ಈ ಸಲ ಗೆದ್ದರೆ ಪಶ್ಚಿಮ ಬಂಗಾಳದ ಎಡರಂಗದ ಸರ್ಕಾರದ ದಾಖಲೆಯನ್ನು (1977ರಿಂದ 2011ರ ಅವಧಿಯಲ್ಲಿ ಸತತ ಏಳು ಚುನಾವಣೆ ಗೆಲುವು) ಸರಿಗಟ್ಟಿದಂತಾಗುತ್ತದೆ.

2017ಕ್ಕೆ ಹೋಲಿಸಿದರೆ ಈ ಸಾಲಿನಲ್ಲಿ ಪಕ್ಷ ಉತ್ತಮ ಸಾಧನೆ ಮಾಡಲಿದೆ ಎಂಬುದು ಕಾಂಗ್ರೆಸ್ ನಾಯಕರ ವಿಶ್ವಾಸ. ತಮ್ಮ ಪಕ್ಷವು ಉತ್ತಮ ಸಾಧನೆ ಮಾಡಲಿದೆ ಎಂದು ಎಎಪಿ ನಾಯಕರು ಭರವಸೆ ವ್ಯಕ್ತಪಡಿಸಿದ್ದಾರೆ.

ಎಎಪಿ ತೆಕ್ಕೆಗೆ ದೆಹಲಿ ಮಹಾನಗರ ಪಾಲಿಕೆ

ನವದೆಹಲಿ(ಪಿಟಿಐ): ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಎಎಪಿ ಇದೇ ಮೊದಲ ಬಾರಿಗೆ ಜಯಭೇರಿ ಬಾರಿಸಿದೆ. 15 ವರ್ಷಗಳಿಂದ ಬಿಜೆಪಿ ತೆಕ್ಕೆಯಲ್ಲಿದ್ದ ಪಾಲಿಕೆಯ ಚುಕ್ಕಾಣಿಯನ್ನು ಎಎಪಿ ಕಸಿದುಕೊಂಡಿದೆ.

ಒಟ್ಟು 272 ವಾರ್ಡ್‌ಗಳಿದ್ದ ಉತ್ತರ ದೆಹಲಿ– ದಕ್ಷಿಣ ದೆಹಲಿ ಮತ್ತು ಪೂರ್ವ ದೆಹಲಿ ನಗರ ಪಾಲಿಕೆಗಳನ್ನು ಇದೇ ಮೇ ತಿಂಗಳಲ್ಲಿ ವಿಲೀನ ಮಾಡಲಾಗಿತ್ತು. ವಾರ್ಡ್‌ಗಳ ಸಂಖ್ಯೆ 250ಕ್ಕೆ ಇಳಿಸ ಲಾಗಿತ್ತು. ವಿಲೀನದ ನಂತರ ನಡೆದ ಮೊದಲ ಚುನಾವಣೆ ಇದು. ಇದರಲ್ಲಿ ಎಎಪಿ 134 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿದೆ. ಬಿಜೆಪಿ104 ವಾರ್ಡ್‌ಗಳಿಗೆ ತೃಪ್ತಿಪಟ್ಟುಕೊಂಡಿದೆ. 10

ಆನ್‌ಲೈನ್ ಪಾವತಿ ಯುಪಿಐನಲ್ಲಿ ಶೀಘ್ರ ಹೊಸ ವೈಶಿಷ್ಟ್ಯ

ಮುಂಬೈ (ಪಿಟಿಐ): ಆನ್‌ಲೈನ್ ಮೂಲಕ ಖರೀದಿಸಿದ ವಸ್ತು ಗ್ರಾಹಕರ ಕೈಸೇರಿದ ಬಳಿಕವೇ ಅವರ ಖಾತೆಯಿಂದ ಹಣವು ವ್ಯಾಪಾರಿಗೆ ಸಂದಾಯ ಆಗುವಂತಹ ವೈಶಿಷ್ಟ್ಯವು ಯುಪಿಐ ವೇದಿಕೆಯಲ್ಲಿ ಶೀಘ್ರದಲ್ಲೇ ಸಿಗಲಿದೆ.

ಯುಪಿಐ ವ್ಯವಸ್ಥೆಯಲ್ಲಿ ‘ಸಿಂಗಲ್-ಬ್ಲಾಕ್-ಆ್ಯಂಡ್-ಮಲ್ಟಿಪಲ್-ಡೆಬಿಟ್ಸ್’ ಸೌಲಭ್ಯವನ್ನು ಪರಿಚಯಿಸಲು ನಿರ್ಧರಿಸಲಾಗಿದೆ. ಇದರಿಂದಾಗಿ ಇ-ಕಾಮರ್ಸ್ ವೇದಿಕೆಗಳ ಮೂಲಕ ಖರೀದಿಸುವ ವಸ್ತುಗಳಿಗೆ ಪಾವತಿ ಮತ್ತು ಸಾಲಪತ್ರಗಳ ಮೇಲಿನ ಹೂಡಿಕೆಯು ಸುಲಭವಾಗಲಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ವ್ಯಾಪಾರಿಗೆ ಪಾವತಿಸಬೇಕಿರುವ ನಿರ್ದಿಷ್ಟ ಮೊತ್ತವು ಗ್ರಾಹಕರ ಖಾತೆಯಲ್ಲಿ ಬ್ಲಾಕ್ ಆಗಿರುತ್ತದೆ. ಸರಕು ಅಥವಾ ಸೇವೆಯು ಗ್ರಾಹಕರ ಕೈ ಸೇರುವವರೆಗೂ ಆ ಮೊತ್ತವು ಗ್ರಾಹಕರ ಖಾತೆಯಲ್ಲಿಯೇ ಇರುತ್ತದೆ. ವಸ್ತು ಕೈಗೆ ಸಿಕ್ಕ ಬಳಿಕ ಹಣವನ್ನು ಗ್ರಾಹಕರ ಖಾತೆಯಿಂದ ವ್ಯಾಪಾರಿಯ ಖಾತೆಗೆ ವರ್ಗಾವಣೆ ಮಾಡುವ ಸೌಲಭ್ಯ ಇದು ಎಂದು ವಿವರಿಸಿದರು.

11ನೇ ಪುಟ ನೋಡಿ

ವಿವಿಧ ಬಗೆಯ ಸಾಲಗಳ ಇಎಂಐ ಕಂತು ಮತ್ತೆ ಹೆಚ್ಚಳ ಸಾಧ್ಯತೆ

ರೆಪೊ ಏರಿಕೆ ವೇಗ ತಗ್ಗಿಸಿದ ಆರ್‌ಬಿಐ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಹೆಚ್ಚಳದ ವೇಗವನ್ನು ನಿರೀಕ್ಷೆಯಂತೆಯೇ ತಗ್ಗಿಸಿದೆ. ರೆಪೊ ದರವು ಗರಿಷ್ಠ ಮಟ್ಟವನ್ನು ತಲುಪುತ್ತಿದೆ ಎಂಬುದರ ಸೂಚನೆಯನ್ನು ಇದು ನೀಡಿದೆ.


ಬುಧವಾರ ಕೊನೆಗೊಂಡ ಹಣ ಕಾಸು ನೀತಿ ಸಮಿತಿ ಸಭೆಯ (ಎಂಪಿಸಿ) ನಂತರ, ರೆಪೊ ದರವನ್ನು ಶೇ 0.35ರಷ್ಟು ಹೆಚ್ಚಿಸುತ್ತಿರುವುದಾಗಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಪ್ರಕಟಿಸಿದರು.

11ನೇ ಪುಟ ನೋಡಿ

ಠೇವಣಿ ಮೇಲಿನ ಬಡ್ಡಿ ಏರಿಕೆ ನಿಧಾನ

ಬೆಂಗಳೂರು: ಮೇ ತಿಂಗಳ ಆರಂಭದಿಂದ ಸೆಪ್ಟೆಂಬರ್ ಕೊನೆಯವರೆಗೆ ಆರ್‌ಬಿಐ ರೆಪೊ ದರವನ್ನು ಒಟ್ಟು ಶೇ 1.90ರಷ್ಟು ಹೆಚ್ಚಿಸಿದೆ. ಮೇ ತಿಂಗಳಿನಿಂದ ಅಕ್ಟೋಬರ್ ಅಂತ್ಯದವೇಳೆಗೆ 32 ಬ್ಯಾಂಕ್‌ಗಳ ಪೈಕಿ 29 ಬ್ಯಾಂಕ್‌ಗಳು ತಮ್ಮ ಇಬಿಎಲ್‌ಆರ್ ಆಧಾರಿತ ಸಾಲದ ಬಡ್ಡಿ ದರವನ್ನು ಕೂಡ ಶೇ 1.90ರಷ್ಟು ಹೆಚ್ಚಿಸಿವೆ ಎಂದು ಆರ್‌ಬಿಐ ಲೇಖನವೊಂದು ಹೇಳಿದೆ.

ಆದರೆ, ಈ ಅವಧಿಯಲ್ಲಿ ಠೇವಣಿಗಳ ಮೇಲಿನ ಬಡ್ಡಿ ದರದ ಹೆಚ್ಚಳವು, ಸಾಲದ ಮೇಲಿನ ಬಡ್ಡಿ ದರದ ಏರಿಕೆಗೆ ಸರಿಸಮನಾಗಿ ಆಗಿಲ್ಲ. ಅವಧಿ ಠೇವಣಿಗಳ ಮೇಲಿನ ಬಡ್ಡಿಯನ್ನು ಮೇ ತಿಂಗಳಿನಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಸರಾಸರಿ ಶೇ 0.48ರಷ್ಟು ಮಾತ್ರ ಹೆಚ್ಚಿಸಲಾಗಿದೆ ಎಂದು ಆ ಲೇಖನದಲ್ಲಿ ಉಲ್ಲೇಖಿಸಲಾಗಿದೆ.



ನಾಗರಿಕ ಸೇವಾ ನಿಯಮಕ್ಕೆ ತಿದ್ದುಪಡಿ ಪ್ರಸ್ತಾವ

ಜಾತಿ, ಭಾಷೆ ಸಂಘ: ನೌಕರರಿಗೆ ನಿರ್ಬಂಧ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಧರ್ಮ, ಜನಾಂಗ, ಪ್ರದೇಶ, ಭಾಷೆ, ಕೋಮು ಭಾವನೆಗಳನ್ನು ಕೆರಳಿಸುವ ಸಂಸ್ಥೆ ಮತ್ತು ಸಂಘಟನೆಗಳ ಜೊತೆಗೆ ಸರ್ಕಾರಿ ನೌಕರರು ಕೈಜೋಡಿಸದಂತೆ ನಿಷೇಧ ಹೇರಲು ರಾಜ್ಯ ಸರ್ಕಾರ ಮುಂದಾಗಿದೆ. ಅಲ್ಲದೆ, ಅಂಥ ಸಂಘಟನೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಥವಾ ಭಾಗಿಯಾಗುವ ಚಟುವಟಿಕೆಗೂ ನಿರ್ಬಂಧ ವಿಧಿಸುವ ಪ್ರಕ್ರಿಯೆಗೂ ಚಾಲನೆ ನೀಡಿದೆ.

ಜಾತಿ, ಧರ್ಮ, ಭಾಷೆ ಆಧಾರದಲ್ಲಿ ರಚನೆಗೊಂಡ ಸಂಘಟನೆಗಳು, ತಮ್ಮ ಉದ್ದೇಶಗಳ ಈಡೇರಿಕೆಗಾಗಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತವೆ. ಇದು ವಿವಿಧ ಸಮುದಾಯಗಳ ನಡುವೆ ಕೋಮುದ್ವೇಷ ಮತ್ತು ಅಸೂಯೆಗೆ ಪ್ರಚೋದನೆ ನೀಡುತ್ತದೆ. ಹೀಗಾಗಿ, ಅಂಥ ಸಂಘಟನೆಗಳ ಜೊತೆ ಸರ್ಕಾರಿ ನೌಕರರು ಸೇರಬಾರದೆಂದು ನಿರ್ಬಂಧಿಸುವ ಉದ್ದೇಶದಿಂದ ‘ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು–2021’ಕ್ಕೆ ತಿದ್ದುಪಡಿ ತರಲು ಸರ್ಕಾರ ನಿರ್ಧರಿಸಿದೆ.

ಈ ಕುರಿತಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸಚಿವ ಸಂಪುಟ ಸಭೆಗೆ ಪ್ರಸ್ತಾವ ಮಂಡಿಸಿದ್ದು, ಡಿಪಿಎಆರ್ ಸಿದ್ಧಪಡಿಸಿದ ರಹಸ್ಯ ಟಿಪ್ಪಣಿಯು ‘ಪ್ರಜಾವಾಣಿ’ಗೆ ಲಭ್ಯವಾಗಿದೆ.


ತಿದ್ದುಪಡಿ ನಿಯಮವು, ಇನ್ನು ಮುಂದೆ ಸರ್ಕಾರಿ ನೌಕರರು ಜಾತಿ, ಸಮುದಾಯ, ಧರ್ಮ, ಭಾಷೆ, ಪ್ರದೇಶ ಇತ್ಯಾದಿಗಳನ್ನು ಆಧರಿಸಿ ನೋಂದಣಿಯಾದ ಅಥವಾ ಆಗದ ಸಂಸ್ಥೆ, ವೇದಿಕೆಯನ್ನು ರಚಿಸದಂತೆ ನಿಷೇಧ ಹೇರಲಿದೆ. ಇಂಥ ಸಂಸ್ಥೆ, ಸಂಘಟನೆಗಳು ಗುಂಪುಗಾರಿಕೆ, ದ್ವೇಷ ಭಾವನೆ, ಪಕ್ಷಪಾತ ಭಾವನೆಯ ಮೂಲಕ ಸಮಗ್ರತೆಗೆ ಭಂಗ ತರುತ್ತವೆ ಎಂದೂ ನಿಯಮದಲ್ಲಿ ಉಲ್ಲೇಖಿಸಲಾಗಿದೆ. ಈ ಕಾರಣಕ್ಕೆ ಅಂಥ ಸಂಸ್ಥೆ, ಸಂಘಟನೆಗಳಲ್ಲಿ ಸದಸ್ಯರಾಗದಂತೆ ಕೂಡಾ ನಿರ್ಬಂಧ ವಿಧಿಸಲಿದೆ.

2020–21ನೇ ಸಾಲಿನ ವಿಧಾನ ಮಂಡಲದ ಅಧೀನ ಶಾಸನಾ ರಚನಾ ಸಮಿತಿಯು ತನ್ನ 51ನೇ ವರದಿಯಲ್ಲಿ ‘ಇಲಾಖೇತರ ಜಾತಿ ಸಂಘ–ಸಂಸ್ಥೆಗಳ ಚುನಾವಣೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸದಂತೆ ಮಾಡಲು ಕಠಿಣ ನಿಯಮಗಳನ್ನು ರೂಪಿಸಬೇಕು’ ಎಂದು ಶಿಫಾರಸು ಮಾಡಿತ್ತು. ಈ ವರದಿಯನ್ನು ಸೆ. 21ರಂದು ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಲಾಗಿದೆ. ಸಮಿತಿ ಶಿಫಾರಸಿನಂತೆ ಸರ್ಕಾರಿ ನೌಕರರ ಸೇವಾ (ನಡತೆ) ನಿಯಮಗಳ ಕರಡು ತಿದ್ದುಪಡಿಯನ್ನು ಡಿಪಿಎಆರ್ ಸಿದ್ಧಪಡಿಸಿದೆ. ‘ಸರ್ಕಾರಿ ನೌಕರರು ತಮ್ಮ ಜವಾಬ್ದಾರಿಯನ್ನು ನಿರ್ಭೀತಿಯಿಂದ, ಯಾವುದೇ ಪಕ್ಷಪಾತ ಮಾಡದೆ ನಿರ್ವಹಿಸಬೇಕಾಗಿದೆ. ಗುಂಪುಗಾರಿಕೆ, ದ್ವೇಷ ಭಾವನೆ, ಪಕ್ಷಪಾತ ಭಾವನೆಯ ಸಂಘಟನೆಗಳ ಜೊತೆ ಗುರುತಿಸಿಕೊಂಡರೆ ಆತನ ಜವಾಬ್ದಾರಿಯ ಮೇಲೆ ದುಷ್ಪರಿಣಾಮ ಉಂಟಾಗಲಿದೆ.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಮತದಾರರ ಪಟ್ಟಿ ಪಾರದರ್ಶಕ ಪರಿಷ್ಕರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಆಯೋಗದ ಮಾರ್ಗಸೂಚಿಯಂತೆ ಮಹದೇವಪುರ ವಿಧಾನಸಭೆ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಣೆಯನ್ನು ಪಾರದರ್ಶಕವಾಗಿ ಕೈಗೊಳ್ಳಲಾಗುವುದು ಎಂದು ವಿಶೇಷ ಅಧಿಕಾರಿ ಅಜಯ್ ನಾಗಭೂಷಣ್ ಭರವಸೆ ನೀಡಿದರು.

ಮಹದೇವಪುರ ವಲಯದ ಜಂಟಿ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಮಾನ್ಯತೆ ಪಡೆದ ವಿವಿಧ ರಾಜಕೀಯ ಪಕ್ಷಗಳ ಪದಾಧಿಕಾರಿಗಳ ಸಭೆಯಲ್ಲಿ ಬುಧವಾರ ಅವರು ಮಾತನಾಡಿದರು.

ಮನೆಗಳಿಗೆ ಭೇಟಿ ನೀಡಿ ಮತದಾರರ ಪಟ್ಟಿ ಪರಿಶೀಲನೆ ನಡೆಸಲಾಗುವುದು. ಹೆಸರು ಕೈಬಿಡುವಾಗ ಪೂರಕ ದಾಖಲೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗುವುದು. ಸೇರ್ಪಡೆ, ತಿದ್ದುಪಡಿ, ಬದಲಾವಣೆ, ತೆಗೆದು ಹಾಕುವ ಕುರಿತ ವಿವರವಾದ ಅಂಕಿ ಅಂಶಗಳನ್ನು ಎಲ್ಲಾ ರಾಜಕೀಯ ಪಕ್ಷಗಳಿಗೆ ಪರಿಶೀಲನೆಗೆ ನೀಡಲಾಗುವುದು ಎಂದರು.

ಮತದಾರರ ಪಟ್ಟಿಯ ಕುರಿತು ರಾಜಕೀಯ ಪಕ್ಷಗಳು ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿದ್ದಲ್ಲಿ ಮುಕ್ತವಾಗಿ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು.

ಸಂದೇಹಗಳಿದ್ದರೆ ಮತದಾರರ ಸಹಾಯವಾಣಿಯನ್ನು ಸಂಪರ್ಕಿಸಬಹುದು. ರಾಜಕೀಯ ಪಕ್ಷಗಳ ವತಿಯಿಂದ ಬೂತ್ ಮಟ್ಟದ ಸಹಾಯಕರ ಪಟ್ಟಿಯ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಬಿಎಲ್‌ಒಗಳೊಂದಿಗೆ ತಮ್ಮ ವ್ಯಾಪ್ತಿಯ ಮತದಾರರ ಪಟ್ಟಿಯ ಸಮಸ್ಯೆಗಳ ಬಗ್ಗೆ ಸಮನ್ವಯದಿಂದ ಕಾರ್ಯನಿರ್ವಹಿಸಲಿದ್ದಾರೆ ಎಂದರು.

ಮಹದೇವಪುರ ವಿಧಾನಸಭಾ ವ್ಯಾಪ್ತಿಯಲ್ಲಿ ಅಂಗಡಿ, ಹೋಟೆಲ್, ಗೋಡೆಗಳ ಮೇಲೆ ಮತದಾರರ ಸಹಾಯವಾಣಿ ಹಾಗೂ ಬಿಎಲ್‌ಒಗಳ ಹೆಸರು, ದೂರವಾಣಿ ಸಂಖ್ಯೆಯ ಮಾಹಿತಿಯ ಸ್ಟಿಕರ್ ಅಂಟಿಸಲಾಗುತ್ತದೆ ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಮಹದೇವಪುರ ವಲಯದ ಜಂಟಿ ಆಯುಕ್ತ ವೆಂಕಟಾಚಲಪತಿ ಹಾಗೂ ವಿವಿಧ ರಾಜಕೀಯ ಪಕ್ಷಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

‘ರ್‍ಯಾಪಿಡ್ ರಸ್ತೆ’ಗೆ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಪ್ರಥಮ ‘ರ್‍ಯಾಪಿಡ್ ರಸ್ತೆಗೆ’ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಬೆಳಿಗ್ಗೆ ಚಾಲನೆ ನೀಡಲಿದ್ದಾರೆ.

ಇಂದಿರಾನಗರ 100 ಅಡಿ ರಸ್ತೆ ಜಂಕ್ಷನ್‌ನಿಂದ ಬಿಡಿಎ ಕಾಂಪ್ಲೆಕ್ಸ್ ಮೂಲಕ ಬಿಎಂಟಿಸಿ ಬಸ್ ಡಿಪೊವರೆಗೆ ‘ಪ್ರೀಕಾಸ್ಟ್ ಪೋಸ್ಟ್ ಟೆನ್ಷನಿಂಗ್ ಕಾಂಕ್ರೀಟ್ ಪೇವ್‌ಮೆಂಟ್’ ತಂತ್ರಜ್ಞಾನದ ‘ರ್‍ಯಾಪಿಡ್ ರಸ್ತೆ’ಯನ್ನು ಪ್ರಾಯೋಗಿಕವಾಗಿ ನಿರ್ಮಿಸಲಾಗಿದೆ.

‘ಒಂದು ವಾರದಲ್ಲಿ ರಸ್ತೆ ನಿರ್ಮಾಣಗೊಂಡಿದೆ. ಕ್ಷೇತ್ರದ ಇತರೆ ಭಾಗದಲ್ಲೂ ಇದೇ ತಂತ್ರಜ್ಞಾನ ಅಳವಡಿಸಿ ರಸ್ತೆ ನಿರ್ಮಿಸಲು ಯೋಜಿಸಲಾಗಿದೆ’ ಎಂದು ಸಿ.ವಿ. ರಾಮನ್ ನಗರ ವಿಧಾನಸಭೆ ಕ್ಷೇತ್ರದ ಶಾಸಕ ಎಸ್. ರಘು ತಿಳಿಸಿದರು.

ರಾಜ್ಯ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು

ಆರ್.ಆರ್. ನಗರದಲ್ಲೂ ಮತದಾರರ ಪಟ್ಟಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್.ಆರ್. ನಗರ ಕ್ಷೇತ್ರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ವ್ಯಾಪಕ ಅಕ್ರಮ ನಡೆದಿದೆ. 1.30 ಲಕ್ಷ ಮತದಾರರ ಹೆಸರು ಅನಧಿಕೃತವಾಗಿ ಸೇರ್ಪಡೆಯಾಗಿದ್ದು, 75 ಸಾವಿರ ಹೆಸರು ಕೈಬಿಡಲಾಗಿದೆ. ಈ ಕುರಿತು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ರಾಜ್ಯ ಚುನಾವಣಾ ಆಯುಕ್ತ ಮನೋಜ್ ಕುಮಾರ್ ಮೀನಾ ಅವರಿಗೆ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಮತ್ತು ಕ್ಷೇತ್ರದ ಪಕ್ಷದ ನಾಯಕಿ ಎಚ್. ಕುಸುಮಾ ಅವರು ದೂರು ನೀಡಿದ್ದಾರೆ.

ಈ ಬಗ್ಗೆ ಮಾತನಾಡಿದ ಸುರೇಶ್, ‘ಕ್ಷೇತ್ರದ ಮತದಾರರ ಪಟ್ಟಿ ಪರಿಶೀಲಿಸಿದಾಗ, ಸಾಕಷ್ಟು ನಕಲಿ ಹೆಸರುಗಳು ಸೇರ್ಪಡೆಯಾಗಿರುವುದು ಗೊತ್ತಾಗಿದೆ. ಕ್ಷೇತ್ರದಲ್ಲಿನ ಕಾಂಗ್ರೆಸ್ ಬೆಂಬಲಿಗರು ಹಾಗೂ ಒಕ್ಕಲಿಗ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ’ ಎಂದು ಆರೋಪಿಸಿದರು.

‘ಚಿಲುಮೆ ಎಂಬ ಸಂಸ್ಥೆ ಮೂಲಕ ಬಿಜೆಪಿ ನಾಯಕರು, ಸಚಿವರು, ಶಾಸಕರು ಮತದಾರರ ಪಟ್ಟಿ ಪರಿಷ್ಕರಣೆ ಹೆಸರಲ್ಲಿ ಅಕ್ರಮ ಮಾಡಿದ್ದಾರೆ. ಆರ್.ಆರ್. ನಗರ ಕ್ಷೇತ್ರದಲ್ಲಿ 2018ರಿಂದ 2022 ಜನವರಿವರೆಗೆ ಸುಮಾರು 90 ಸಾವಿರ ಮತಗಳ ಸೇರ್ಪಡೆ ಮಾಡಲಾಗಿದೆ. 2022ರ ಜ.2ರಿಂದ ನ. 9ರವರೆಗೆ ಸುಮಾರು 40 ಸಾವಿರ ಮತದಾರರ ಹೆಸರು ಸೇರ್ಪಡೆ ಮಾಡಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗದ ಆಯುಕ್ತರ ಗಮನಕ್ಕೆ ತಂದಿದ್ದೇವೆ’ ಎಂದರು.

‘2018 ಮೇ ತಿಂಗಳಿನಿಂದ 2022ರ ಜನವರಿ ವೇಳೆಗೆ ಸುಮಾರು 40 ಸಾವಿರ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಆ ಬಳಿಕ, 26 ಸಾವಿರ ಹೆಸರು ಕೈಬಿಡಲಾಗಿದೆ ಎಂಬ ಮಾಹಿತಿಯನ್ನು ಚುನಾವಣಾ ಆಯೋಗ ಪ್ರಕಟಿಸಿದೆ. ಆ ಮೂಲಕ, 75 ಸಾವಿರ ಮತಗಳನ್ನು ತೆಗೆದುಹಾಕಲಾಗಿದೆ. ಕ್ಷೇತ್ರದ ಶಾಸಕರು ಹಾಗೂ ಸಚಿವರ ನಿರ್ದೇಶನದ ಮೇರೆಗೆ ನಮೂನೆ 6 ಮತ್ತು 7 ಇಲ್ಲದೆ ಪಟ್ಟಿ ಪರಿಷ್ಕರಿಸಲಾಗಿದೆ. ಬೂತ್ ಮಟ್ಟದಲ್ಲಿ ಕಳೆದ 10 ದಿನಗಳಿಂದ ಮತಗಳ ಸಮೀಕ್ಷೆ ಮಾಡಿದ ಸಮಯದಲ್ಲಿ ಖಾಲಿ ನಿವೇಶನಗಳ ವಿಳಾಸದಲ್ಲಿ 45 ಮತಗಳ ಸೇರ್ಪಡೆಯಾಗಿರುವುದು ಗೊತ್ತಾಗಿದೆ. ಪ್ರತಿ ಬೂತ್‌ನಲ್ಲಿ 20ರಿಂದ 25 ಹೆಸರು ಸೇರಿಸಲಾಗಿದೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸುವಂತೆ ದೂರಿನಲ್ಲಿ ಒತ್ತಾಯಿಸಲಾಗಿದೆ’ ಎಂದರು.

ಹನುಮಂತರಾಯಪ್ಪ, ಲಗ್ಗೆರೆ ಬ್ಲಾಕ್ ಅಧ್ಯಕ್ಷ ಅಮರನಾಥ್, ರಾಜರಾಜೇಶ್ವರಿ ನಗರ ಬ್ಲಾಕ್ ಅಧ್ಯಕ್ಷ ರಾಂಪುರ ನಾಗೇಶ್, ಯಶವಂತಪುರ ಬ್ಲಾಕ್ ಅಧ್ಯಕ್ಷ ಗೋಪಾಲಕೃಷ್ಣ ಇದ್ದರು.



ರಾಜ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಿದ ದೂರಿನ ಪ್ರತಿಯನ್ನು ಎಚ್. ಕುಸುಮಾ ಮತ್ತು ಡಿ.ಕೆ. ಸುರೇಶ್ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

‘ಕೀಳುಮಟ್ಟದ ರಾಜಕಾರಣ ಮಾಡುವುದಿಲ್ಲ’

ಬೆಂಗಳೂರು: ‘ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆಸುವಷ್ಟು ಕೀಳುಮಟ್ಟದ ರಾಜಕಾರಣ ಮಾಡುವುದಿಲ್ಲ. ನನ್ನ ತೇಜೋವಧೆ ಮಾಡಿ ಚುನಾವಣೆ ಗೆಲ್ಲುತ್ತೇವೆ ಎಂಬ ಕನಸು ಬಿಟ್ಟುಬಿಡಿ’ ಎಂದು ಆರ್.ಆರ್. ನಗರ ಕ್ಷೇತ್ರದ ಶಾಸಕರೂ ಆಗಿರುವ ತೋಟಗಾರಿಕಾ ಸಚಿವ ಮುನಿರತ್ನ ಅವರು ಡಿ.ಕೆ. ಸುರೇಶ್‌ಗೆ ತಿರುಗೇಟು ನೀಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮತದಾರರ ಪಟ್ಟಿಗೆ ಹೆಸರು ಸೇರಿಸುವುದು, ತೆಗೆಸುವುದು ನಮ್ಮ ಅಭ್ಯಾಸವಲ್ಲ. ಅದು ನಿಮ್ಮ ಅಭ್ಯಾಸ. ನಾನು ನಾಮಪತ್ರ ಸಲ್ಲಿಸಿ ಮತ ಯಾಚನೆ ಮಾಡುವುದಿಲ್ಲ. ನೀವೂ ಆ ರೀತಿ ಮಾಡಿ, ತೀರ್ಮಾನ ಜನರಿಗೆ ಬಿಡೋಣ’ ಎಂದರು.

‘ಏಳು ವರ್ಷ ಕಾಂಗ್ರೆಸ್ ಜತೆಯಲ್ಲಿದ್ದೆ. ಆಗ ಮತದಾರರ ಹೆಸರು ಡಿಲೀಟ್ ಆಗಿರಲಿಲ್ಲ. ಈಗ ಬಿಜೆಪಿಯಲ್ಲಿ ಇರುವುದಕ್ಕೆ ಡಿಲೀಟ್ ಆಗಿದೆಯಾ? ನಿಮ್ಮ ಜತೆ ಇದ್ದಾಗ ನಾನು ಪವಿತ್ರ, ಈಗ ಅಪವಿತ್ರನಾ?’ ಎಂದು ಪ್ರಶ್ನಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ರಾಜಕೀಯ ಬಿಟ್ಟು ಕೂಲಿ ಕೆಲಸ ಬೇಕಾದರೂ ಮಾಡುತ್ತೇನೆ. ಆದರೆ, ಮತ್ತೆ ಕಾಂಗ್ರೆಸ್ ಸಹವಾಸ ಮಾತ್ರ ಮಾಡುವುದಿಲ್ಲ’ ಎಂದರು.

17ಕ್ಕೆ ‘ಭೂಮಿಕಾ ಕ್ಲಬ್’ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಜೀವನ ಶೈಲಿಯನ್ನು ಉತ್ಕೃಷ್ಟಗೊಳಿಸಲು ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆ, ಚಳಿಗಾಲದ ಪ್ರಯುಕ್ತ ಇದೇ 17ರಂದುಮಧ್ಯಾಹ್ನ 2.30ಕ್ಕೆ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಸಹಯೋಗದಲ್ಲಿ ಇಂದಿರಾನಗರದಲ್ಲಿರುವಇಂದಿರಾನಗರ ಕ್ಲಬ್‌ನಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ‘ಶೀತಕಾಲದ ಉತ್ಸಾಹಕಾರಿ ಪ್ರವಾಸೋಪಾಯಗಳು’ ಶೀರ್ಷಿಕೆಯಡಿ ಸಂಗೀತ ಹಾಗೂ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗಾಯಕ ವಾಸು ದೀಕ್ಷಿತ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಪ್ರವಾಸ ಯೋಜನೆಗಳ ಬಗ್ಗೆ ಪರ್ವತಾರೋಹಿ ವಸುಮತಿ, ಬೈಕರ್ ರಾಜಲಕ್ಷ್ಮೀ ಹಾಗೂ ಟ್ರಾವೆಲ್ ವ್ಲಾಗರ್ ಗ್ಲೋರಿಯಾ ಖಮ್ರುಯಿ ಸಂವಾದ ನಡೆಸಲಿದ್ದಾರೆ. ಚಳಿಗಾಲದಲ್ಲಿ ಸದೃಢವಾಗಿರುವುದು ಹಾಗೂ ಸೌಂದರ್ಯ ಕಾಪಾಡಿಕೊಳ್ಳುವ ಬಗ್ಗೆ ಖುಷ್ಬೂ ಶೆಟ್ಟಿ ಹಾಗೂ ರುಚಿಕಾ ಚೌಧರಿ ಸಲಹೆಗಳನ್ನು ನೀಡಲಿದ್ದಾರೆ.



ವಾಸು ದೀಕ್ಷಿತ್

ಭೂಮಿಕಾ ಕ್ಲಬ್

ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ.

ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ: bit.ly/pvbhumikaclub

ಪೇಟಿಎಂ, ಯಾತ್ರಾ ಆ್ಯಪ್‌ನಲ್ಲೂ ಮೆಟ್ರೊ ಟಿಕೆಟ್

ಬೆಂಗಳೂರು: ಮೆಟ್ರೊ ರೈಲು ಪ್ರಯಾಣಿಕರು ಇನ್ನು ಪೇಟಿಎಂ ಮತ್ತು ಯಾತ್ರಾ ಮೊಬೈಲ್ ಆ್ಯಪ್‌ನಲ್ಲೂ ಕ್ಯೂಆರ್ ಕೋಡ್ ಟಿಕೆಟ್ ಖರೀದಿಸಬಹುದು. ಈ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಬಿಎಂಆರ್‌ಸಿಎಲ್, ಗುರುವಾರದಿಂದ(ಡಿ.8) ಜಾರಿಗೆ ತರುತ್ತಿದೆ.

ಕ್ಯೂಆರ್ ಕೋಡ್ ಟಿಕೆಟ್ ವ್ಯವಸ್ಥೆಯನ್ನು ನ.1ರಿಂದ ಪರಿಚಯಿಸಿದ್ದ ಬಿಎಂಆರ್‌ಸಿಎಲ್, ಅದನ್ನು ‘ನಮ್ಮ ಮೆಟ್ರೊ’ ಮೊಬೈಲ್ ಆ್ಯಪ್‌ನಲ್ಲಿ ಖರೀದಿಗೆ ಅವಕಾಶ ಕಲ್ಪಿಸಿತ್ತು. ಈಗ ಅದನ್ನು ಪೇಟಿಎಂ ಮತ್ತು ಯಾತ್ರಾ ಆ್ಯಪ್‌ಗೂ ವಿಸ್ತರಿಸಿದೆ.

ಮೊಬೈಲ್ ಪ್ಲೇಸ್ಟೋರ್‌ನಲ್ಲಿ ಈ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ನೋಂದಾಯಿಸಿಕೊಳ್ಳಬೇಕು. ಪ್ರಯಾಣದ ದಿನದಂದು ಪ್ರವೇಶ ಮತ್ತು ನಿರ್ಗಮನ ನಿಲ್ದಾಣಗಳನ್ನು ನಿಗದಿಪಡಿಸಿ ಕ್ಯೂಆರ್ ಕೋಡ್ ಟಿಕೆಟ್ ಖರೀದಿಸಬಹುದು. ನಿಲ್ದಾಣಗಳಲ್ಲಿ ಇರುವ ಸ್ವಯಂ ಚಾಲಿತ ಪ್ರವೇಶ ದ್ವಾರಗಳ ಬಳಿ ಇರಿಸಿರುವ ಕ್ಯೂಆರ್ ಕೋಡ್ ರೀಡರ್‌ಗಳಿಗೆ ಮೊಬೈಲ್ ಫೋನ್‌ನಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪ್ರವೇಶಿಸಬಹುದು ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಖರೀದಿಸಿದ ಮೊಬೈಲ್ ಕ್ಯೂಆರ್ ಕೋಡ್ ಟಿಕೆಟ್ ಆ ದಿನದ ರೈಲು ಸೇವೆ ಕೊನೆಗೊಳ್ಳುವ ತನಕ ಚಾಲ್ತಿಯಲ್ಲಿ ಇರಲಿದೆ. ಟಿಕೆಟ್ ಖರೀದಿಸಿದ ಬಳಿಕ ಪ್ರಯಾಣಿಸದಿರಲು ನಿರ್ಧರಿಸಿದರೆ, ಅದೇ ದಿನ ಟಿಕೆಟ್ ರದ್ದುಗೊಳಿಸಿ ಮೊತ್ತ ವಾಪಸ್ ಪಡೆಯಲು ಅವಕಾಶ ಇದೆ. ಕ್ಯೂಆರ್ ಕೋಡ್ ಟಿಕೆಟ್ ಖರೀದಿಸುವವರಿಗೆ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತಿದೆ ಎಂದು ಅವರು ವಿವರಿಸಿದ್ದಾರೆ.

ಬಾಟಲಿ ಮುಚ್ಚಳ ನುಂಗಿದ 8 ತಿಂಗಳ ಮಗು

ಬೆಂಗಳೂರು: ನಗರದ 8 ತಿಂಗಳ ಮಗುವೊಂದು ನುಂಗಿದ್ದ 2 ಸೆಂ.ಮೀ. ಅಗಲದ ಬಾಟಲಿ ಮುಚ್ಚಳವನ್ನು ಇಲ್ಲಿನ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಹೊರತೆಗೆದಿದ್ದಾರೆ.

ಇಎನ್‌ಟಿ ತಜ್ಞ ಡಾ.ಎಚ್.ಕೆ. ಸುಶೀನ್ ದತ್ ಹಾಗೂ ಡಾ. ನರೇಂದ್ರನಾಥ್ ಅವರ ತಂಡ ಮಗುವಿಗೆ ಚಿಕಿತ್ಸೆ ನೀಡಿದೆ. ಆಟ ಆಡುತ್ತಿರುವ ವೇಳೆ ಮಗು ಬಾಟಲಿ ಮುಚ್ಚಳ ನುಂಗಿತ್ತು. ‘ಮಗು ಮುಚ್ಚಳ ನುಂಗಿದ್ದು ಪೋಷಕರಿಗೂ ತಿಳಿದಿರಲಿಲ್ಲ. ವಾರವಾಗುತ್ತಿದ್ದಂತೆ ಮಗುವಿಗೆ ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡು, ಆಹಾರ ಸೇವಿಸುತ್ತಿರಲಿಲ್ಲ.ಗಂಟಲಿನಿಂದ ಶಿಳ್ಳೆಯ ರೀತಿಯಲ್ಲಿ ಧ್ವನಿ ಹೊರಡುತ್ತಿತ್ತು. ಇದರಿಂದ ಗಾಬರಿಯಾದ ಪೋಷಕರು, ಮಗುವನ್ನು ಆಸ್ಪತ್ರೆಗೆ ಕರೆ ತಂದರು. ಪ್ರಾರಂಭಿಕ ತಪಾಸಣೆ ನಡೆಸಿದಾಗ ಶ್ವಾಸಕೋಶದ ಸಮಸ್ಯೆ ಇರಬಹುದೆಂದು ತಿಳಿದಿದ್ದೆವು. ಆದರೆ, ಕೆಲ ಅನುಮಾನದಿಂದ ಲಾರಿಂಗೋಸ್ಕೋಪಿ ಮೂಲಕ ಗಂಟಲಿನ ಪರೀಕ್ಷೆ ನಡೆಸಲಾಯಿತು. ಆಗ 2 ಸೆಂ.ಮೀ.ಅಗಲದ ಬಿಳಿ ಆಕಾರದ ಮುಚ್ಚಳ ಇರುವುದು ತಿಳಿಯಿತು’ ಎಂದು ಡಾ. ನರೇಂದ್ರನಾಥ್ ತಿಳಿಸಿದರು.

‘ಮಕ್ಕಳ ಕೈಗೆ ಸಣ್ಣ ವಸ್ತುಗಳು ಸಿಗದಂತೆ ಎಚ್ಚರ ವಹಿಸುವುದು ಅವಶ್ಯಕ. ತಿಳಿಯದೇ ಕೆಲವು ವೇಳೆ ವಸ್ತುಗಳನ್ನು ನುಂಗಿ, ಜೀವಕ್ಕೆ ಅಪಾಯ ತಂದುಕೊಳ್ಳುತ್ತವೆ’ ಎಂದು ಡಾ.ಎಚ್.ಕೆ. ಸುಶೀನ್ ದತ್ ಹೇಳಿದರು.

ನಗರದಲ್ಲಿ ಇಂದು

ಎಎಸ್‌ಎಂಇ ಇಂಡಿಯಾ ಎಎಂ 3ಡಿ ಏರೋ–2022 ಸಮ್ಮೇಳನ ಮತ್ತು ಪ್ರದರ್ಶನ: ಅತಿಥಿಗಳು: ವಿ.ಕೆ. ಆತ್ರೆ, ಎಂ.ಆರ್. ಸೀತಾರಾಮ್, ಸ್ಥಳ: ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 9

ಅನ್ವಯಿಕ ಜೈವಿಕ ತಂತ್ರಜ್ಞಾನದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಜಿ. ಪದ್ಮನಾಭನ್, ವಿಜಯ್ ಚಂದ್ರು ರೆಡ್ಡಿ, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ ಮತ್ತು ಸ್ಥಳ: ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಮೈಸೂರು ರಸ್ತೆ, ಬೆಳಿಗ್ಗೆ 10

ಇಂಡಿಯನ್ ಆರ್ಟ್ ಫೆಸ್ಟಿವೆಲ್: ಸ್ಥಳ: ಅರಮನೆ ಮೈದಾನ, ಕಿಂಗ್ಸ್ ಕೋರ್ಟ್, ಗೇಟ್ ನಂ.5 ಬಳ್ಳಾರಿ ರಸ್ತೆ, ಬೆಳಿಗ್ಗೆ 11

ಸೇಂಟ್ ಮೇರಿ ಅನಾಥಾಲಯದ ಪ್ಲಾಟಿನಂ ಜುಬ್ಲಿ: ಅತಿಥಿಗಳು: ಕೆ.ಜೆ. ಜಾರ್ಜ್, ಆಯೋಜನೆ ಮತ್ತು ಸ್ಥಳ: ಡಿ ಕೋಸ್ಟ್ ಲೇಔಟ್, ಮೇರಿ ಟೌನ್, ಬೆಳಿಗ್ಗೆ 11.30

ಉಪ ಪೊಲೀಸ್ ಆಯುಕ್ತರ, ಪೂರ್ವ ವಿಭಾಗ ಬೆಂಗಳೂರು ನಗರದ ಕಚೇರಿ ನೂತನ ಕಟ್ಟಡ ಹಾಗೂ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಆರಗ ಜ್ಞಾನೇಂದ್ರ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಆರ್. ಅಶೋಕ, ವಿ. ಸೋಮಣ್ಣ, ಸ್ಥಳ: ಸಿ.ಎಸ್.ಐ ಆಸ್ಪತ್ರೆ ಎದುರು, ಬ್ರಾಡ್‌ವೇ ರಸ್ತೆ, ಶಿವಾಜಿನಗರ, ಸಂಜೆ 5

ನವಿಲು ಪುರಾಣ ನಾಟಕ ಪ್ರದರ್ಶನ: ನಿರ್ದೇಶನ: ಸುರೇಶ್ ಅನಗಳ್ಳಿ, ಆಯೋಜನೆ: ಅನೇಕ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಬೆಂಗಳೂರು ದಕ್ಷಿಣ ಜಿಲ್ಲೆಯ 100 ಸರ್ಕಾರಿ ಶಾಲೆಗಳ 2,400 ವಿದ್ಯಾರ್ಥಿಗಳು ಭಾಗಿ

ಪಿಇಎಸ್: ವಿಜ್ಞಾನ ಮೇಳ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ಇದೇ ಶುಕ್ರವಾರದಿಂದ ಭಾನುವಾರದವರೆಗೆ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ 'ವಿಜ್ಞಾನ ಮೇಳ' ಹಮ್ಮಿಕೊಂಡಿದೆ.

ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರರೂ ಆಗಿರುವ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್. ದೊರೆಸ್ವಾಮಿ, 'ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಕಟ್ಟಡದಲ್ಲಿ ನಡೆಯುವ ಈ ವಿಜ್ಞಾನ ಮೇಳದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ 100 ಸರ್ಕಾರಿ ಶಾಲೆಗಳ 2,400 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. 7,8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ. ವಿಜ್ಞಾನಿ ಸಿ.ಎನ್.ಆರ್. ರಾವ್ ಅವರು ಮೇಳ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಂದಾಯ ಸಚಿವ ಆರ್. ಅಶೋಕ ಹಾಗೂ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಚ್.ಆರ್. ನಾಗೇಂದ್ರ ಭಾಗವಹಿಸಲಿದ್ದಾರೆ' ಎಂದರು.

> **ಕನ್ನಡ ಶಾಲೆಗಳು ಉಳಿದರೆ ಮಾತ್ರ ಕನ್ನಡ ಭಾಷೆ ಉಳಿಯುತ್ತದೆ. ಶಾಸಕರು ತಾವು ದತ್ತು ಪಡೆದ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ, ಸರ್ಕಾರಕ್ಕೆ ಹಸ್ತಾಂತರಿಸಬೇಕು.**
> **ಪ್ರೊ.ಎಂ.ಆರ್. ದೊರೆಸ್ವಾಮಿ,** ಶಿಕ್ಷಣ ಸುಧಾರಣೆಗಳ ಸಲಹೆಗಾರ

'ಶಾಲಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಜಾಗೃತಗೊಳಿಸುವುದು ಮೇಳದ ಮುಖ್ಯ ಉದ್ದೇಶ. ಸಾಕ್ಷಾಧಾರಿತ ಕಲಿಕೆ, ಉನ್ನತ ಶಿಕ್ಷಣ ಹಾಗೂ ಸಾಧನೆಗಳ ಪ್ರೇರಣೆಗೆ ಈ ಮೇಳ ಸಹಕಾರಿಯಾಗಲಿದೆ. ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಾಯೋಗಿಕ ಕಲಿಕೆಗೆ ಆದ್ಯತೆ ನೀಡಲಾಗುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ಪ್ರದರ್ಶಿಸಲಾಗುತ್ತದೆ. ರಸಪ್ರಶ್ನೆ ಯೋಗ–ಧ್ಯಾನದ ಕಾರ್ಯಕ್ರಮವೂ ನಡೆಯಲಿದೆ. ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ, ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ' ಎಂದು ತಿಳಿಸಿದರು.

'ಮೂರು ದಿನಗಳೂ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮೇಳ ನಡೆಯಲಿದೆ. ವಿದ್ಯಾರ್ಥಿಗಳಿಗೆ ಕ್ಯಾಂಪಸ್ ವೀಕ್ಷಣೆಗೂ ಅವಕಾಶ ಕಲ್ಪಿಸಲಾಗುವುದು. ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಪ್ರಯೋಗಾಲಯಗಳಿಲ್ಲ. ಆದ್ದರಿಂದ, ಖಾಸಗಿ ಸೇರಿ ಎಲ್ಲ ವಿಶ್ವವಿದ್ಯಾಲಯಗಳು ಈ ರೀತಿಯ ವಿಜ್ಞಾನ ಮೇಳಗಳನ್ನು ಹಮ್ಮಿಕೊಳ್ಳಬೇಕು. ಇದರಿಂದ ಕಲಿಕೆಯ ಬಗ್ಗೆ ಆಸಕ್ತಿ ಹೆಚ್ಚಲಿದೆ. ವಿಶ್ವವಿದ್ಯಾಲಯಗಳ ಬಗ್ಗೆ ಮಕ್ಕಳಿಗೆ ಸ್ಪಷ್ಟ ಪರಿಕಲ್ಪನೆ ಬರಲಿದೆ' ಎಂದರು.



ವಿಜ್ಞಾನ ಮೇಳದ ಆಮಂತ್ರಣ ಪತ್ರಿಕೆಯನ್ನು ಪ್ರೊ.ಎಂ.ಆರ್. ದೊರೆಸ್ವಾಮಿ ಅನಾವರಣ ಮಾಡಿದರು. ವಿಶ್ವವಿದ್ಯಾಲಯದ ಕುಲಪತಿ ಜೆ. ಸೂರ್ಯಪ್ರಸಾದ್ ಹಾಗೂ ರಿಜಿಸ್ಟ್ರಾರ್ ಕೆ.ಎಸ್. ಶ್ರೀಧರ್ ಇದ್ದಾರೆ.

'ಶಾಲೆಯ ಅಭಿವೃದ್ಧಿ ಪೂರ್ಣಗೊಳಿಸಿ'

'ಸರ್ಕಾರಿ ಶಾಲೆಗಳನ್ನು ಶಾಸಕರು ದತ್ತು ಪಡೆದು, ಅಭಿವೃದ್ಧಿಪಡಿಸುವ ಯೋಜನೆಯನ್ನು 2020–21ರಲ್ಲಿ ಜಾರಿಗೊಳಿಸಲಾಗಿದೆ. ತಲಾ ಮೂರು ಶಾಲೆಗಳನ್ನು ಅಭಿವೃದ್ಧಿಪಡಿಸುವಂತೆ ಎಲ್ಲ ಶಾಸಕರಿಗೆ ದತ್ತು ಸ್ವೀಕಾರ ಪತ್ರಗಳನ್ನು ನೀಡಲಾಗಿದೆ. ಎರಡು ವರ್ಷಗಳಾದರೂ ಕೆಲ ಶಾಸಕರು ತಾವು ದತ್ತು ಪಡೆದ ಶಾಲೆಗಳನ್ನು ಇನ್ನೂ ಅಭಿವೃದ್ಧಿಪಡಿಸಿ, ಹಸ್ತಾಂತರಿಸಲಿಲ್ಲ. ಮೂರು ಶಾಲೆಗಳನ್ನು ಅಭಿವೃದ್ಧಿಪಡಿಸದವರು ತಮ್ಮ ಕ್ಷೇತ್ರಕ್ಕೆ ಇನ್ನೇನು ಮಾಡುತ್ತಾರೆ' ಎಂದು ಪ್ರೊ.ಎಂ.ಆರ್. ದೊರೆಸ್ವಾಮಿ ಪ್ರಶ್ನಿಸಿದರು.

'ಸುಸಜ್ಜಿತ ಕಾಂಪೌಂಡ್ ಇಲ್ಲದ, ಸೋರುತ್ತಿರುವ ಶಾಲೆಗಳಿಗೆ ಪಾಲಕರು ತಮ್ಮ ಮಕ್ಕಳನ್ನು ಕಳುಹಿಸಲು ಇಷ್ಟಪಡುವುದಿಲ್ಲ. ಬಡ ಮಕ್ಕಳ ಹಿತದೃಷ್ಟಿಯಿಂದ ಶಾಸಕರು ತಮ್ಮ ಅವಧಿ ಮುಗಿಯುವ ಒಳಗೆ ಶಾಲೆಗಳ ಅಭಿವೃದ್ಧಿಯನ್ನು ಪೂರ್ಣಗೊಳಿಸಬೇಕು. ಶಾಲೆಗಳಲ್ಲಿನ ದೈಹಿಕ ಶಿಕ್ಷಕರಿಗೆ ಯೋಗದ ಬಗ್ಗೆ ತರಬೇತಿ ನೀಡಿ, ಮಕ್ಕಳಿಗೆ ಯೋಗ ಕಲಿಸಬೇಕು' ಎಂದು ಹೇಳಿದರು.

ಡಿ.10ಕ್ಕೆ 67 ಪುಸ್ತಕಗಳ ಲೋಕಾರ್ಪಣೆ

ಬೆಂಗಳೂರು: ಸಪ್ನ ಬುಕ್ ಹೌಸ್ 67ನೇ ರಾಜ್ಯೋತ್ಸವದ ಪ್ರಯುಕ್ತ ಇದೇ 10ರಂದು ಬೆಳಿಗ್ಗೆ 10 ಗಂಟೆಗೆ ಗಾಂಧಿ ಭವನದಲ್ಲಿ ವಿವಿಧ ಲೇಖಕರ 67 ಕನ್ನಡ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. 'ನಾಡು ನುಡಿಯ ದೃಷ್ಟಿಯಲ್ಲಿ ಪುಸ್ತಕಗಳು' ಎಂಬ ವಿಷಯದ ಬಗ್ಗೆ ಶಾಸಕ ಬಿ.ಎಸ್. ಯಡಿಯೂರಪ್ಪ ಮಾತನಾಡಲಿದ್ದಾರೆ. ಸಾಹಿತಿ ದೊಡ್ಡರಂಗೇಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ ಅವರು ಕೃತಿಗಳನ್ನು ಪರಿಚಯಿಸುತ್ತಾರೆ ಎಂದು ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿತಿನ್ ಷಾ ತಿಳಿಸಿದ್ದಾರೆ.

ಹಂ.ಪ. ನಾಗರಾಜಯ್ಯ, ಕಮಲಾ ಹಂಪನಾ, ದೊಡ್ಡರಂಗೇಗೌಡ, ಸುಧಾ ಮೂರ್ತಿ, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಮಲ್ಲೇಪುರಂ ಜಿ. ವೆಂಕಟೇಶ, ಜಿ.ಎನ್. ರಂಗನಾಥರಾವ್, ಪಿ.ಎಸ್. ಶಂಕರ್, ಸಿ.ಎನ್. ರಾಮಚಂದ್ರನ್, ಬಿ.ಆರ್. ಲಕ್ಷ್ಮಣರಾವ್, ಪ್ರೊ.ಜಿ. ಅಬ್ದುಲ್ ಬಷೀರ್, ಸಂಪಟೂರು ವಿಶ್ವನಾಥ್, ಚಂದ್ರಕಾಂತ ಪೋಕಳೆ, ಕುಂ. ವೀರಭದ್ರಪ್ಪ, ಎಂ.ಎಸ್. ನರಸಿಂಹಮೂರ್ತಿ, ರಾ.ನಂ. ಚಂದ್ರಶೇಖರ, ಡಿ.ವಿ. ಗುರುಪ್ರಸಾದ್, ಟಿ.ಆರ್. ಅನಂತರಾಮು, ರಾಘವೇಂದ್ರ ಪಾಟೀಲ, ರಂಗರಾಜು ನಾಗವಾರ ಸೇರಿ 67 ಲೇಖಕರ ಪುಸ್ತಕಗಳು ಲೋಕಾರ್ಪಣೆ ಗೊಳ್ಳಲಿವೆ ಎಂದು ಹೇಳಿದ್ದಾರೆ.

ಬೆಳಿಗ್ಗೆ 9.15ರಿಂದ ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ತಂಡದಿಂದ ಸುಗಮ ಸಂಗೀತ ಹಾಗೂ ಅಪ್ಪಗೆರೆ ತಿಮ್ಮರಾಜು ಅವರಿಂದ ಜನಪದ ಗೀತೆಗಳ ಗಾಯನ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹದೇವಪುರ ವಲಯ ವ್ಯಾಪ್ತಿಯ ದೊಡ್ಡನೆಕ್ಕುಂದಿ ಕೆರೆಗೆ ಒಳಚರಂಡಿ ನೀರು ನೇರ ಹರಿವು

ವರ್ತೂರು ಕೆರೆಗೆ ದ್ರವ ತ್ಯಾಜ್ಯ

• ಆರ್. ಮಂಜುನಾಥ್





ವರ್ತೂರು ಕೆರೆ ಮೇಲಿನ ರಸ್ತೆಯಿಂದ ತ್ಯಾಜ್ಯ, ದ್ರವ ತ್ಯಾಜ್ಯ ಕೆರೆಗೆ ಹರಿಯುತ್ತಿರುವುದು (ಎಡ) ದೊಡ್ಡನೆಕ್ಕುಂದಿ ಕೆರೆಗೆ ಹರಿಯುತ್ತಿರುವ ಒಳಚರಂಡಿ ನೀರು

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೆರೆಗಳಿಗೆ ಯಾವುದೇ ರೀತಿಯ ತ್ಯಾಜ್ಯ, ಮಾಲಿನ್ಯ ಸೇರದಂತೆ ನಿಗಾವಹಿಸಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಸ್ಪಷ್ಟಸೂಚನೆ ಇದ್ದರೂ, ವರ್ತೂರು ಕೆರೆಗೆ ನಾಲ್ಕಾರು ತಿಂಗಳಿಂದ ನಿತ್ಯವೂ ದ್ರವ ತ್ಯಾಜ್ಯ ಹರಿಯುತ್ತಲೇ ಇದೆ. ಮತ್ತೊಂದೆಡೆ ಒಳಚರಂಡಿ ನೇರವಾಗಿ ದೊಡ್ಡನೆಕ್ಕುಂದಿ ಕೆರೆಗೆ ಹರಿಯುತ್ತಿದ್ದು, ಮಾಲಿನ್ಯದ ತಾಣವಾಗಿವೆ.

ವರ್ತೂರು ಸುತ್ತಮುತ್ತ ತ್ಯಾಜ್ಯ ಸಂಗ್ರಹಿಸುವ ಗುತ್ತಿಗೆದಾರರು, ತ್ಯಾಜ್ಯ ವಿಂಗಡಣೆ ಕಾರ್ಯವನ್ನು ವರ್ತೂರು ಕೆರೆಯ ರಸ್ತೆ ಮೇಲೆಯೇ ಮಾಡುತ್ತಿದ್ದಾರೆ. ಆಟೊ, ಲಾರಿ, ಕಾಂಪ್ಯಾಕ್ಟರ್ ಸೇರಿದಂತೆ ನಿತ್ಯವೂ ಹತ್ತಾರು ವಾಹನಗಳು ಇಲ್ಲಿ ನಿಂತಿರುತ್ತವೆ.

ಕಾಂಪ್ಯಾಕ್ಟರ್‌ಗಳಿಂದ ಸೋರುವ ದ್ರವ ತ್ಯಾಜ್ಯ ಕೆರೆಗೆ ಪ್ರತಿದಿನವೂ ಹರಿಯುತ್ತಿದೆ. ಈ ಬಗ್ಗೆ ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ಎಂಜಿನಿಯರ್ ಹಾಗೂ ಆರೋಗ್ಯ ಪರಿವೀಕ್ಷಕರಿಗೆ ಮಾಹಿತಿ, ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ.

‘ವರ್ತೂರು ಕೆರೆ ಮೇಲಿನ ರಸ್ತೆಯಲ್ಲಿ ಕೆಲವು ದಿನ ಮಾತ್ರ ತ್ಯಾಜ್ಯ ವಿಂಗಡಣೆ ಮಾಡುತ್ತೇವೆ ಎಂದು ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ಹೇಳಿದ್ದರು. ಆದರೆ ಅದು ಎಂಟು ತಿಂಗಳಿನಿಂದ ನಿಂತೇ ಇಲ್ಲ. ಪ್ರತಿ ದಿನವೂ ಕೇಳಿದರೂ ಸಬೂಬು ಹೇಳುತ್ತಿದ್ದಾರೆ. ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ’ ಎಂದು ಸ್ಥಳೀಯರಾದ ಜಗದೀಶ ರೆಡ್ಡಿ ದೂರಿದರು.

‘ಗುತ್ತಿಗೆ ಪಡೆಯುವಾಗ ತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿಗೆ ತಮ್ಮದೇ ಸ್ಥಳ ಇದೆ ಎಂದು ಗುತ್ತಿಗೆದಾರರು ತೋರಿಸಿರುತ್ತಾರೆ. ಆದರೆ ವಾಸ್ತವದಲ್ಲಿ ಅದು ಇರುವುದಿಲ್ಲ. ಹೀಗಾಗಿ ರಸ್ತೆಯ ಮೇಲೆಯೇ ತ್ಯಾಜ್ಯ ವಿಂಗಡಣೆ ಆಗುತ್ತಿದೆ. ಹಸಿ ಕಸ ಸೇರಿದಂತೆ ದ್ರವ ತ್ಯಾಜ್ಯ ಸಾಕಷ್ಟು ಪ್ರಮಾಣದಲ್ಲಿ ವರ್ತೂರು ಕೆರೆಗೆ ನಿತ್ಯವೂ ಹರಿಯುತ್ತಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಯಾವುದೇ ರೀತಿಯ ತ್ಯಾಜ್ಯವನ್ನು ಕೆರೆಗೆ ಬಿಡುವಂತಿಲ್ಲ ಎಂದು ಹೇಳಿದ್ದರೂ ಮಾಲಿನ್ಯ ನಿಯಂತ್ರಣ ಮಂಡಳಿ, ಬಿಬಿಎಂಪಿ ಅಧಿಕಾರಿಗಳು ಆ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ಆರೋಪಿಸಿದರು.

ಜಲಮಂಡಳಿಯಿಂದ ಕಲ್ಮಶ: ‘ಮಹದೇವಪುರ ವಲಯ ವ್ಯಾಪ್ತಿಯಲ್ಲಿರುವ ದೊಡ್ಡನೆಕ್ಕುಂದಿ ಕೆರೆಗೆ ನೇರವಾಗಿ ಒಳಚರಂಡಿ ನೀರು, ಕಲ್ಮಶ ಹರಿಯುತ್ತಿದೆ. ಇದನ್ನು ತಡೆಯಲು ಬಿಡಬ್ಲ್ಯುಎಸ್‌ಎಸ್‌ಬಿ ಹಾಗೂ ಬಿಬಿಎಂಪಿಗೆ ಸಾಕಷ್ಟು ಬಾರಿ ಮನವಿ ನೀಡಿದ್ದರೂ ಅವರು ಕ್ರಮ ಕೈಗೊಂಡಿಲ್ಲ. ಕೆರೆ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುತ್ತಾರೆ’ ಎಂದು ಸ್ಥಳೀಯರಾದ ಸುಷ್ಮಾ ದೂರಿದರು.

‘ಎಂಜಿನಿಯರ್‌ಗಳ ನಿರ್ಲಕ್ಷ್ಯ’

ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮಮತಾ, ಕಿರಿಯ ಆರೋಗ್ಯ ನಿರೀಕ್ಷಕ ಬಾಲಾಜಿ ಅವರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸ್ಥಳೀಯರು ದೂರಿದರು. ‘ನಾಳೆಯಿಂದ ಗುತ್ತಿಗೆದಾರರು ಇಲ್ಲಿ ತ್ಯಾಜ್ಯ ವಿಂಗಡಿಸಲ್ಲ’ ಎಂದು ಬಾಲಾಜಿ ಹೇಳಿದರು.

‘ವರ್ತೂರು ಕೆರೆಗೆ ದ್ರವ ತ್ಯಾಜ್ಯ ಹರಿಯುತ್ತಿರುವುದು ನನ್ನ ಗಮನಕ್ಕೆ ಬಂದಿರಲಿಲ್ಲ. ಎಂಜಿನಿಯರ್‌ಗಳು ಸೇರಿದಂತೆ ಇದಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತ ಪರಶುರಾಮ್ ತಿಳಿಸಿದರು.

ರೇಬಿಸ್ ಅಧಿಸೂಚಿತ ಕಾಯಿಲೆ: ಘೋಷಣೆ

ಬೆಂಗಳೂರು: ರೇಬಿಸ್ ಸೋಂಕಿತ ನಾಯಿಗಳ ಕಡಿತದಿಂದ ಬರುವ ರೇಬಿಸ್ ಕಾಯಿಲೆಯನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆಯಡಿ ‘ಅಧಿಸೂಚಿತ ಕಾಯಿಲೆ’ ಎಂದು ಘೋಷಿಸಿ ಆದೇಶಿಸಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆ ಅಧಿಸೂಚನೆ ಹೊರಡಿಸಿದೆ. ‘ಈ ಕಾಯಿಲೆ ಹೆಚ್ಚಿನ ಸಾವಿನ ಪ್ರಮಾಣವನ್ನು ಹೊಂದಿದೆ. ಅತ್ಯಂತ ನೋವಿನ ಸಾವುಗಳಿಗೆ ಕಾರಣವಾಗುತ್ತಿದೆ. ರೇಬಿಸ್ ಕಣ್ಗಾವಲು ಬಲಪಡಿಸಲು, ಮಾನವ ಮತ್ತು ಪಶುವೈದ್ಯಕೀಯ ವಲಯದಲ್ಲಿ ಕೈಗೊಳ್ಳಬೇಕಾದ ಸಾರ್ವಜನಿಕ ಆರೋಗ್ಯ ಕ್ರಮಗಳಿಗೆ ಆದ್ಯತೆ ನೀಡಲು, 2030ರೊಳಗೆ ಈ ರೋಗವನ್ನು ತಡೆಗಟ್ಟಲು ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕು. ಹೀಗಾಗಿ, ಅಧಿಸೂಚಿತ ಕಾಯಿಲೆ ಎಂದು ಘೋಷಿಸಲಾಗಿದೆ ಎಂದು ತಿಳಿಸಲಾಗಿದೆ.

ಮೀಸಲಾತಿ ಬದಲಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ: ಪ್ರತಿಮಾ

ನವದೆಹಲಿ (ಪಿಟಿಐ): ‘ಈಗಾಗಲೇ ಅಸ್ತಿತ್ವದಲ್ಲಿರುವ ಮೀಸಲಾತಿ ಪ್ರಮಾಣ ಬದಲಿಸುವ ಯಾವ ಪ್ರಸ್ತಾವನೆಯೂ ಕೇಂದ್ರ ಸರ್ಕಾರದ ಎದುರು ಇಲ್ಲ’ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವೆ ಪ್ರತಿಮಾ ಭೌಮಿಕ್ ಬುಧವಾರ ಲೋಕಸಭೆಗೆ ತಿಳಿಸಿದ್ದಾರೆ.

ಸಂಸದರೊಬ್ಬರು ಕೇಳಿದ ಪ್ರಶ್ನೆಗೆ ‘ಅಂತಹ ಯಾವ ಪ್ರಸ್ತಾವನೆಯೂ ಸರ್ಕಾರದ ಮುಂದಿಲ್ಲ’ ಎಂದಿದ್ದಾರೆ.

ಸುದ್ದಿ 2 ನಿಮಿಷ

ವರ್ಗಾವಣೆ ಕರಡಿಗೆ 2,771 ಆಕ್ಷೇಪ

ಬೆಂಗಳೂರು: ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020ಕ್ಕೆ ತಿದ್ದುಪಡಿ ತರಲು ರೂಪಿಸಿದ ಶಿಕ್ಷಕರ ವರ್ಗಾವಣೆ ಕರಡು ಅಧಿಸೂಚನೆಗೆ 2,771 ಆಕ್ಷೇಪಣೆಗಳು ಸಲ್ಲಿಕೆಯಾಗಿವೆ.

10ರಿಂದ 20 ವರ್ಷ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸಿ ಪದೋನ್ನತಿ ಪಡೆದ ಪ್ರೌಢಶಾಲಾ ಶಿಕ್ಷಕರು ಸೇವಾ ಅಂಕಗಳನ್ನು ನೀಡುವಂತೆ ಕೋರಿ 2,524 ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ವರ್ಗಾವಣೆ ಕರಡಿನಲ್ಲಿ ಇರುವಂತೆ ಒಂದೇ ವೃಂದದಲ್ಲಿ ಸಲ್ಲಿಸಿದ ಸೇವೆ ಪರಿಗಣಿಸಿದರೆ, ನೇರ ನೇಮಕಾತಿ ಹೊಂದಿದ ಪ್ರೌಢಶಾಲಾ ಶಿಕ್ಷಕರ ಜತೆಗೆ ವರ್ಗಾವಣೆ ಅವಕಾಶದ ಅರ್ಹತೆ ಹೊಂದಲು ಸಾಧ್ಯವಾಗದು. ಹಾಗಾಗಿ, ಸಲ್ಲಿಸಿದ ಸೇವೆಯ ಆಧಾರದ ಮೇಲೆ ಹೆಚ್ಚುವರಿ ಅಂಕಗಳನ್ನು ನೀಡಬೇಕು ಎಂದು ಕೋರಿದ್ದಾರೆ.

ವರ್ಗಾವಣೆಯಲ್ಲಿ ತಾಲ್ಲೂಕು ಬದಲಿಗೆ ಜಿಲ್ಲೆಯನ್ನೇ ಒಂದು ಘಟಕವಾಗಿ ಪರಿಗಣಿಸುವಂತೆ ಕೋರಿ ಪ್ರೌಢಶಾಲಾ ಸಹ ಶಿಕ್ಷಕರು 11 ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಪುನಃ ಸ್ವಂತ ತಾಲ್ಲೂಕಿಗೆ ವರ್ಗಾವಣೆಗೆ ಅವಕಾಶ ಕಲ್ಪಿಸುವಂತೆ 41 ಶಿಕ್ಷಕರು ಕೋರಿದ್ದಾರೆ. ಶೇ 25ಕ್ಕಿಂತ ಹೆಚ್ಚು ಖಾಲಿ ಹುದ್ದೆಗಳಿರುವ ಘಟಕದಿಂದ ಹೊರ ಹೋಗಲು ಅವಕಾಶ ಕೋರಿ ಒಂದು ಅರ್ಜಿ ಸಲ್ಲಿಕೆಯಾಗಿದೆ.

‘ಹೊಸ ಕಾಯ್ದೆ ಶಿಕ್ಷಕ ಸ್ನೇಹಿ ವರ್ಗಾವಣೆ ನೀತಿ ಒಳಗೊಂಡಿದೆ. ಆಕ್ಷೇಪಗಳಿಗೆ ಉತ್ತರ ನೀಡಿದ ನಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಶೀಘ್ರ ಹೊಸ ನಿಯಮ ಜಾರಿಯಾಗಲಿದೆ’ ಎಂದು ಶಿಕ್ಷಣ ಇಲಾಖೆ ಆಯುಕ್ತ ಆರ್.ವಿಶಾಲ್ ಪ್ರತಿಕ್ರಿಯಿಸಿದರು.

ಮೆಟ್ರೊ ನಿಲ್ದಾಣಗಳಲ್ಲಿ ಬ್ಯಾಟರಿ ಕೇಂದ್ರ



ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳಿಗಾಗಿ ಬ್ಯಾಟರಿ ಬದಲಾಯಿಸುವ ಕೇಂದ್ರಗಳನ್ನು ಎಲ್ಲ ಮೆಟ್ರೊ ರೈಲು ನಿಲ್ದಾಣಗಳ ಬಳಿ ನಿರ್ಮಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದ್ದು, ಮೊದಲ ಹಂತದಲ್ಲಿ ಐದು ನಿಲ್ದಾಣಗಳಲ್ಲಿ ಈ ಕೇಂದ್ರಕ್ಕೆ ಚಾಲನೆ ನೀಡಿದೆ.

ಕೆ.ಆರ್. ಮಾರುಕಟ್ಟೆ, ನ್ಯಾಷನಲ್ ಕಾಲೇಜು, ಬನಶಂಕರಿ, ಟ್ರಿನಿಟಿ ಮತ್ತು ಬೈಯಪ್ಪನಹಳ್ಳಿ ರೈಲು ನಿಲ್ದಾಣಗಳಲ್ಲಿ ಈ ಸೇವೆಯನ್ನು ಆರಂಭಿಸಿದೆ. ಹೊಂಡಾ ಕಂಪನಿ ಜತೆ ಒಡಂಬಡಿಕೆ ಮಾಡಿಕೊಂಡಿದ್ದು, ಬನಶಂಕರಿ ನಿಲ್ದಾಣದಲ್ಲಿ ತೆರೆದಿರುವ ಕೇಂದ್ರವನ್ನು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಹಾಗೂ ಹೋಂಡಾ ಪವರ್ ಪ್ಯಾಕ್ ಎನರ್ಜಿ ಇಂಡಿಯಾ ಅಧ್ಯಕ್ಷ ಕಿಯೋಶಿ ಇಟೊ ಅವರು ಬುಧವಾರ ಉದ್ಘಾಟಿಸಿದರು.

‘ಎಲೆಕ್ಟ್ರಿಕ್ ಆಟೊರಿಕ್ಷಾಗಳಿಗೆ ಈ ಬ್ಯಾಟರಿ ಬಳಕೆ ಮಾಡಿಕೊಳ್ಳಬಹುದಾಗಿದೆ. ವಿದ್ಯುತ್ ಚಾಲಿತ ವಾಹನಗಳ ಸಾರಿಗೆ ವ್ಯವಸ್ಥೆ ಬಲಪಡಿಸುವ ನಿಟ್ಟಿನಲ್ಲಿ ಈ ಸೇವೆ ಆರಂಭಿಸಲಾಗಿದೆ. ಮೆಟ್ರೊ ಫೀಡರ್ ಸೇವೆಗೆ ಅನುಕೂಲ ಆಗಲಿದೆ’ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಐವಿಎಫ್ ಚಿಕಿತ್ಸೆ: ಸರ್ಕಾರಿ ವ್ಯವಸ್ಥೆಯಡಿ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಆಸ್ಪತ್ರೆಗಳಲ್ಲಿ ಐವಿಎಫ್ ಚಿಕಿತ್ಸಾ ವೆಚ್ಚ ಅಧಿಕ ಇರುವುದರಿಂದ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಈ ಚಿಕಿತ್ಸೆಯ ಕ್ಲಿನಿಕ್‌ಗಳನ್ನು ಪ್ರಾರಂಭಿಸಲು ಸರ್ಕಾರ ಮುಂದಾಗಿದೆ.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ವಾಣಿವಿಲಾಸ ಆಸ್ಪತ್ರೆಯು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಈ ಬಗ್ಗೆ ಪ್ರಸ್ತಾವ ಸಲ್ಲಿಸಿತ್ತು.

‘ಬದಲಾದ ಜೀವನಶೈಲಿಯಿಂದ ಜನರಲ್ಲಿ ಫಲವತ್ತತೆ ದರ ಕುಸಿಯುತ್ತಿದೆ. ಇದರಿಂದಾಗಿ ಐವಿಎಫ್ ಚಿಕಿತ್ಸೆಗೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ಖಾಸಗಿ ಆಸ್ಪತ್ರೆಗಳಲ್ಲಿ ಈ ಚಿಕಿತ್ಸೆಗೆ ವೆಚ್ಚ ಭರಿಸುವುದು ಬಡ, ಮಧ್ಯಮ ವರ್ಗದವರಿಗೆ ಸವಾಲಾಗಿದೆ. ಆದ್ದರಿಂದ ಸರ್ಕಾರಿ ವ್ಯವಸ್ಥೆಯಡಿ ಐವಿಎಫ್ ಚಿಕಿತ್ಸೆ ಪ್ರಾರಂಭಿಸುವ ಅಗತ್ಯವಿದೆ’ ಎಂದು ಡಾ.ಕೆ. ಸುಧಾಕರ್ ತಿಳಿಸಿದರು.

‘ಬೆಂಗಳೂರು, ಮೈಸೂರು, ಹುಬ್ಬಳ್ಳಿ ಹಾಗೂ ಕಲಬುರಗಿಯಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಐವಿಎಫ್ ಕ್ಲಿನಿಕ್‌ಗಳನ್ನು ಸ್ಥಾಪಿಸುವ ಯೋಜನೆಯಿದೆ. ಕೈಗೆಟುಕುವ ದರ ಅಥವಾ ಉಚಿತವಾಗಿ ಈ ಚಿಕಿತ್ಸೆಯನ್ನು ಒದಗಿಸಲಾಗುವುದು’ ಎಂದರು.

‘ಐವಿಎಫ್ ಕ್ಲಿನಿಕ್‌ಗಳಿಗೆ ಪ್ರತ್ಯೇಕವಾಗಿ ಮೂಲಸೌಕರ್ಯ ಹಾಗೂ ಉಪಕರಣಗಳನ್ನು ಒದಗಿಸಬೇಕಾಗುತ್ತದೆ. ಮಾನವ ಸಂಪನ್ಮೂಲವೂ ಅಗತ್ಯವಿರುತ್ತದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು’ ಎಂದು ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಸಿ. ತಿಳಿಸಿದರು.

ಏರ್ ಷೋ- ಪ್ರಧಾನಿಯಿಂದ ಉದ್ಘಾಟನೆ

ಬೆಂಗಳೂರು: 2023ರ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಏರ್ ಷೋ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಾಲಿನ್ಸ್ ಏರೋಸ್ಪೇಸ್ ಗ್ಲೋಬಲ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸೆಂಟರ್ ಅನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು

ಈ ಏರ್ ಷೋ ಕಾರ್ಯಕ್ರಮದಲ್ಲಿ ರಾಜ್ಯದಲ್ಲಿರುವ ಏರೋಸ್ಪೇಸ್ ಸಂಶೋಧನಾ ಕೇಂದ್ರದ ಬಗ್ಗೆ, ವಿಮಾನಯಾನ, ವಿಮಾನ ಉತ್ಪಾದನಾ ರಂಗಗಳಲ್ಲಿನ ಅವಕಾಶಗಳು ಹಾಗೂ ಸಾಧ್ಯತೆಗಳ ಬಗ್ಗೆ ಬಗ್ಗೆ ಬೆಳಕು ಚೆಲ್ಲಬೇಕು. ಏರ್ ಶೋ ಅಂತರರಾಷ್ಟ್ರೀಯ ಮಟ್ಟದ ಕಾರ್ಯಕ್ರಮವಾಗಿದೆ ಎಂದರು.

ಅನಿಮೀಯಾ ಮುಕ್ತ ಕರ್ನಾಟಕ ಕಾರ್ಯಾಗಾರದಲ್ಲಿ ಆರೋಗ್ಯ ಸಚಿವ

‘ತಾಯಂದಿರ ಮರಣ ಅಪಮಾನ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ‘ವರ್ಷಕ್ಕೊಮ್ಮೆಯಾದರೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು’
- ‘ಮಗು ಜನಿಸಿದ ನಂತರ ಎರಡು ವರ್ಷಗಳಲ್ಲೇ ಅಪೌಷ್ಟಿಕತೆ’

ಬೆಂಗಳೂರು: ‘ತಾಯಂದಿರ ಆರೋಗ್ಯ ತಪಾಸಣೆ ಪರಂಪರೆಯಂತೆ ಬೆಳೆಯಬೇಕು. ಇಂದಿನ ಕಾಲದಲ್ಲೂ ಹೆರಿಗೆ ವೇಳೆ ತಾಯಂದಿರ ಮರಣ ಸಂಭವಿಸುತ್ತಿರುವುದು ಅಪಮಾನದ ಸಂಗತಿ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಆರೋಗ್ಯ ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ ‘ಅಪೌಷ್ಟಿಕತೆ ಮತ್ತು ಅನಿಮೀಯಾ ಮುಕ್ತ ಕರ್ನಾಟಕ’ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

‘ಅಪೌಷ್ಟಿಕತೆ ಹಾಗೂ ಅನೀಮಿಯಾ ನಿವಾರಣೆಗೆ ಆರಂಭಿಕ ಹಂತದಲ್ಲೇ ಮಕ್ಕಳ ಆರೋಗ್ಯ ತಪಾಸಣೆ ಮಾಡಬೇಕು. ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರನ್ನು ಒಗ್ಗೂಡಿಸಿ, ಶಾಲೆ ಸೇರಿ ಮಕ್ಕಳಿರುವ ಜಾಗಗಳಲ್ಲಿ ಆರೋಗ್ಯ ತಪಾಸಣೆ ನಡೆಸಬೇಕು’ ಎಂದು ಹೇಳಿದರು

‘ಮಹಿಳೆಯರು ವರ್ಷಕ್ಕೊಮ್ಮೆಯಾದರೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ದೇವಸ್ಥಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸುವುದು ಒಂದು ಪರಂಪರೆಯ ರೂಢಿಯಾಗಿ ಬೆಳೆದು ಬಂದಿದೆ. ಇದೇ ರೀತಿ, ರಾಜ್ಯದಲ್ಲಿ ಮಹಿಳೆಯರು, ತಾಯಂದಿರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದನ್ನು ಪರಂಪರೆಯಂತೆ ಬೆಳೆಸಬೇಕು’ ಎಂದು ತಿಳಿಸಿದರು.

ಮರಣ ಪ್ರಮಾಣ ಇಳಿಕೆ: ‘ರಿಜಿಸ್ಟರ್ ಜನರಲ್ ಆಫ್ ಇಂಡಿಯಾದ ಪ್ರಕಾರ ದೇಶದಲ್ಲಿ ತಾಯಂದಿರ ಮರಣ ಪ್ರಮಾಣ 2001-2003ರಲ್ಲಿ 301ರಷ್ಟಿತ್ತು. ಈ ಪ್ರಮಾಣ 2018-2020ರಲ್ಲಿ 97ಕ್ಕೆ ಇಳಿದಿದೆ. ಅದೇ ರೀತಿ, 2005ರಲ್ಲಿ 58 ಇದ್ದ ಶಿಶು ಮರಣ ಪ್ರಮಾಣ, 2021ರಲ್ಲಿ 27ಕ್ಕೆ ಇಳಿದಿದೆ. ಈ ಬಗ್ಗೆ ಸ್ವಲ್ಪ ಸಮಾಧಾನ ಇದ್ದರೂ ಮುಂದುವರಿಯಬೇಕಾದ ದಾರಿ ಇನ್ನಷ್ಟು ಇದೆ’ ಎಂದು ಡಾ.ಕೆ. ಸುಧಾಕರ್ ಹೇಳಿದರು.

‘ಮಗು ಜನಿಸಿದ ನಂತರ ಎರಡು ವರ್ಷಗಳಲ್ಲೇ ಅಪೌಷ್ಟಿಕತೆ ಕಾಣಿಸಿಕೊಳ್ಳುತ್ತದೆ. ಈ ಸಮಯದಲ್ಲಿ ಸಮಸ್ಯೆ ಪತ್ತೆ ಮಾಡಿ, ಪರಿಹರಿಸದಿದ್ದರೆ ಅದು ಮಿದುಳಿನ ಆರೋಗ್ಯ ಮೇಲೆ ಹಾಗೂ ಶರೀರದ ಬೆಳವಣಿಗೆ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಮಗು ಜನಿಸಿದ ಮೊದಲ ಸಾವಿರ ದಿನಗಳಲ್ಲಿ ಅಪೌಷ್ಟಿಕತೆ ಹಾಗೂ ಅನೀಮಿಯಾ ನಿವಾರಣೆಗೆ ಕ್ರಮ ವಹಿಸಬೇಕು. ಅದರಲ್ಲೂ ಹೆಣ್ಣುಮಕ್ಕಳು ಅಪೌಷ್ಟಿಕತೆಗೆ ಒಳಗಾದರೆ, ಅವರು ಬೆಳೆದು ಮಗುವಿಗೆ ಜನ್ಮ ನೀಡುವಾಗ ಆ ಮಗು ಕಡಿಮೆ ತೂಕ ಹೊಂದಿರುವ ಸಮಸ್ಯೆ ಎದುರಾಗುತ್ತದೆ’ ಎಂದರು.

ಮಕ್ಕಳ ತಜ್ಞ ಡಾ. ವಿನೋದ್ ಕುಮಾರ್ ಪೌಲ್ ಹಾಗೂ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



ಕಾರ್ಯಾಗಾರಾದಲ್ಲಿ ಪಾಲ್ಗೊಂಡ ಅಧಿಕಾರಿಗಳು ವಿಷಯ ತಜ್ಞರ ಉಪನ್ಯಾಸ ಆಲಿಸಿದರು.

‘ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಪಾಲು’

‘ಬಜೆಟ್‌ನಲ್ಲಿ ಶೇ 8ರಷ್ಟು ಪಾಲನ್ನು ಆರೋಗ್ಯ ವಲಯಕ್ಕೆ ಮೀಸಲಿಡಬೇಕು ಎಂಬುದು ತಜ್ಞರ ಅಭಿಪ್ರಾಯ. ಕರ್ನಾಟಕ ಬಜೆಟ್‌ನಲ್ಲಿ ಶೇ 5ರಷ್ಟು ಪಾಲನ್ನು ಆರೋಗ್ಯ ಕ್ಷೇತ್ರಕ್ಕೆ ಮೀಸಲಿಡಲಾಗಿದೆ. ಕಳೆದ 2-3 ವರ್ಷಗಳಲ್ಲಿ ಕೋವಿಡ್‌ನಿಂದಾಗಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಅನುದಾನ ದೊರೆತಿದೆ. ಇದರಿಂದಾಗಿ ಆರೋಗ್ಯ ಕ್ಷೇತ್ರದ ಮೂಲಸೌಕರ್ಯ 5-6 ಪಟ್ಟು ಹೆಚ್ಚಳವಾಗಿದೆ’ ಎಂದು ಡಾ.ಕೆ. ಸುಧಾಕರ್ ಹೇಳಿದರು.

‘ರಾಜ್ಯದಲ್ಲಿ 6 ಸಾವಿರ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರ ಕಳೆದ ವರ್ಷ ಗುರಿ ನೀಡಿತ್ತು. ರಾಜ್ಯದಲ್ಲಿ 8,250 ಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ’ ಎಂದು ಸಂತಸ ವ್ಯಕ್ತಪಡಿಸಿದರು.

ವಿದ್ಯುತ್ ತಗುಲಿದ್ದ ಮತ್ತೊಬ್ಬ ಬಾಲಕ ಆಸ್ಪತ್ರೆಯಲ್ಲಿ ಸಾವು

ಬೆಂಗಳೂರು: ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಪಾರಿವಾಳಕ್ಕೆ ರಾಡ್‌ನಿಂದ ಹೊಡೆಯುವ ವೇಳೆ ವಿದ್ಯುತ್ ಪ್ರವಹಿಸಿ ತೀವ್ರ ಗಾಯಗೊಂಡಿದ್ದ ಮತ್ತೊಬ್ಬ ಬಾಲಕ ಚಂದ್ರು (13) ಚಿಕಿತ್ಸೆಗೆ ಸ್ಪಂದಿಸದೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬುಧವಾರ ಮೃತಪಟ್ಟಿದ್ದಾರೆ.

ವಿಜಯಾನಂದನಗರದಲ್ಲಿ ಡಿ. 1ರಂದು ಮಧ್ಯಾಹ್ನ ಸಂಭವಿಸಿದ್ದ ಅವಘಡದಲ್ಲಿ ಚಂದ್ರು ಹಾಗೂ ಸುಪ್ರೀತ್ (11) ತೀವ್ರ ಗಾಯಗೊಂಡಿದ್ದರು. ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಸುಪ್ರೀತ್ ಕೆಲ ದಿನಗಳ ಹಿಂದೆಯಷ್ಟೇ ಅಸುನೀಗಿದ್ದರು.

‘ಇಬ್ಬರೂ ಬಾಲಕರು ಕಾಲಿಗೆ ದಾರ ಕಟ್ಟಿದ್ದ ಪಾರಿವಾಳದ ಜೊತೆ ಆಟವಾಡುತ್ತಿದ್ದರು. ಪಾರಿವಾಳವನ್ನು ಹಾರಿಬಿಟ್ಟಿದ್ದರು. ಮನೆಯೊಂದರ ಚಾವಣಿಗೆ ಹೊಂದಿಕೊಂಡಿರುವ ವಿದ್ಯುತ್ ತಂತಿ ಮೇಲೆ ಹೋಗಿ ಪಾರಿವಾಳ ಕುಳಿತಿತ್ತು. ಅದನ್ನು ನೋಡಿದ್ದ ಇಬ್ಬರೂ ಬಾಲಕರು, ಪಾರಿವಾಳವನ್ನು ತಂತಿಯಿಂದ ಹಾರಿಸುವುದಕ್ಕಾಗಿ ಮನೆಯ ಮುಖ್ಯದ್ವಾರದ ಮೂಲಕ ಚಾವಣಿಗೆ ಹೋಗಿದ್ದರು’ ಎಂದು ಪೊಲೀಸರು ಹೇಳಿದರು.

‘ಸ್ಥಳದಲ್ಲಿದ್ದ ಕಬ್ಬಿಣದ ರಾಡ್‌ನಿಂದ ಪಾರಿವಾಳಕ್ಕೆ ಹೊಡೆಯಲು ಯತ್ನಿಸಿದ್ದರು. ಆದರೆ, ತಂತಿಗೆ ರಾಡ್ ತಗುಲಿ ವಿದ್ಯುತ್ ಪ್ರವಹಿಸಿತ್ತು. ಇಬ್ಬರೂ ಬಾಲಕರು ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಕುಸಿದು ಬಿದ್ದಿದ್ದರು’ ಎಂದು ಪೊಲೀಸರು ತಿಳಿಸಿದರು.



ಸಾಹಸ ಪ್ರದರ್ಶನ

ಬೆಂಗಳೂರಿನ ಎಎಸ್‌ಸಿ ಕೇಂದ್ರ ಮತ್ತು ಕಾಲೇಜಿನ 262ನೇ ಸ್ಥಾಪನಾ ದಿನ ಮತ್ತು 11ನೇ ಪುನರ್ ಮಿಲನದ ಕಾರ್ಯಕ್ರಮದ ಅಂಗವಾಗಿ ಬುಧವಾರ ಭಾರತೀಯ ವಾಯು ಪಡೆಯ ‘ಸಾರಂಗ’ ತಂಡದವರು ಹೆಲಿಕಾಪ್ಟರ್ ಮೂಲಕ ತಾಲೀಮು ನಡೆಸಿದರು (ಎಡಚಿತ್ರ). ಎಎಸ್‌ಸಿ ಯೋಧರು ‘ಕಳರಿಪಯಟ್ಟು’ ಪ್ರದರ್ಶಿಸಿ ಸಾಹಸ ಮೆರೆದರು (ಮೇಲ್ಭಾಗದ ಚಿತ್ರ) ಮತ್ತು ‘ಟೆಂಟ್ ಪೆಗ್ಗಿಂಗ್’ ಸಾಹಸ ಪ್ರದರ್ಶನ ನೀಡಿದ ಅಶ್ವಾರೋಹಿ ದಳದ ಯೋಧ (ಕೆಳ ಚಿತ್ರ)
-ಪ್ರಜಾವಾಣಿ ಚಿತ್ರಗಳು / ರಂಜು ಪಿ

ಮುರುಡೇಶ್ವರಕ್ಕೆ ವಿಶೇಷ ರೈಲು

ಬೆಂಗಳೂರು: ಪ್ರಯಾಣಿಕರ ಬೇಡಿಕೆ ಮೇರೆಗೆ ಯಶವಂತಪುರ-ಮುರುಡೇಶ್ವರ ನಡುವೆ ವಾರಕ್ಕೊಮ್ಮೆ ವಿಶೇಷ ರೈಲು ಸಂಚಾರ ಆರಂಭಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಈ ವಿಶೇಷ ಎಕ್ಸ್‌ಪ್ರೆಸ್(ರೈಲು ಸಂಖ್ಯೆ 06563) ರೈಲು ಡಿ.10ರಿಂದ ಜನವರಿ 28ರವರೆಗೆ ಯಶವಂತಪುರ ನಿಲ್ದಾಣದಿಂದ ಪ್ರತಿ ಶನಿವಾರ ರಾತ್ರಿ 11.55ಕ್ಕೆ ಹೊರಡಲಿದೆ. ಮರುದಿನ ಭಾನುವಾರ ಮಧ್ಯಾಹ್ನ 12.55ಕ್ಕೆ ಮುರುಡೇಶ್ವರ ನಿಲ್ದಾಣ ತಲುಪಲಿದೆ. ಈ ರೈಲಿಗೆ ಚಿಕ್ಕಬಾಣಾವರ, ನೆಲಮಂಗಲ, ಕುಣಿಗಲ್, ಶ್ರವಣಬೆಳಗೊಳ, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟ್ವಾಳ, ಸುರತ್ಕಲ್, ಮೂಲ್ಕಿ, ಉಡುಪಿ, ಬಾರ್ಕೂರು, ಕುಂದಾಪುರ, ಬೈಂದೂರು, ಭಟ್ಕಳ ನಿಲ್ದಾಣಗಳಲ್ಲಿ ನಿಲುಗಡೆ ಇದೆ.

ಡಿ.11ರಿಂದ ಜನವರಿ 29ರವರೆಗೆ ಮುರುಡೇಶ್ವರದಿಂದ ಪ್ರತಿ ಭಾನುವಾರ ಮಧ್ಯಾಹ್ನ 1.30ಕ್ಕೆ ರೈಲು (06564) ಹೊರಟು, ಮರುದಿನ ಬೆಳಿಗ್ಗೆ 4 ಗಂಟೆಗೆ ಯಶವಂತಪುರ ತಲುಪಲಿದೆ. ಒಟ್ಟು 16 ಬೋಗಿಗಳು ಇರಲಿವೆ ಎಂದು ನೈರುತ್ಯ ರೈಲ್ವೆ ಮುಖ್ಯ ಪಿಆರ್‌ಒ ಅನೀಶ ಹೆಗಡೆ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಂಕ್ರಾಂತಿ ಕಥಾ ಸ್ಪರ್ಧೆ

ಬೆಂಗಳೂರು: ಸೌಹಾರ್ದ ಭಾರತ ಸಂಘಟನೆಯು ‘ಸಂಕ್ರಾಂತಿ ಕಥಾ ಸ್ಪರ್ಧೆ- 2023’ ಏರ್ಪಡಿಸಿದ್ದು, ಕನ್ನಡದ ಕಥೆಗಾರರಿಗೆ ಆಹ್ವಾನ ನೀಡಿದೆ.

ಉತ್ತಮ ಐದು ಕಥೆಗಳಿಗೆ ತಲಾ ₹5 ಸಾವಿರ ಬಹುಮಾನ ನೀಡಲಾಗುವುದು. ಕಥಾ ಸ್ಪರ್ಧೆಗೆ ಕಳಿಸುವ ಕಥೆಗಳು ಎರಡು ಸಾವಿರ ಪದಗಳ ಮಿತಿಯಲ್ಲಿರಬೇಕು. ಹೆಸರು, ವಿಳಾಸ, ಭಾವಚಿತ್ರ, ದೂರವಾಣಿ ಸಂಖ್ಯೆ ಪ್ರತ್ಯೇಕವಾಗಿ ನಮೂದಿಸಬೇಕು. ಕಥೆ, ಯಾವ ಮಾಧ್ಯಮದಲ್ಲೂ ಪ್ರಕಟವಾಗಿರಬಾರದು. ಉತ್ತಮ 12 ಕಥೆಗಳನ್ನು ಸೇರಿಸಿ ಕಥಾ ಸಂಕಲನ ಹೊರತರಲಾಗುವುದು ಎಂದು ಸೌಹಾರ್ದ ಭಾರತ ಸಂಘಟನೆ ತಿಳಿಸಿದೆ.

ವರ್ಡ್ ಕಡತದಲ್ಲಿ ನುಡಿ ಅಥವಾ ಯುನಿಕೋಡ್‌ನಲ್ಲಿ ಕಥೆಗಳನ್ನು ಟೈಪ್ ಮಾಡಿ Souhardabharatha@gmail.comಗೆ ಕಳುಹಿಸಬೇಕು. ಮಾಹಿತಿಗೆ ದೂರವಾಣಿ ಸಂಖ್ಯೆ 9740396620 ಸಂಪರ್ಕಿಸಬಹುದು.

ಶೀಘ್ರ ಕಾಮಗಾರಿಗೆ ಆಯುಕ್ತರ ಸೂಚನೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲಸೌಕರ್ಯಗಳ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಬೇಕು ಎಂದು ಬಿಡಿಎ ಆಯುಕ್ತ ಜಿ. ಕುಮಾರ ನಾಯಕ್ ಅವರು ಹಿರಿಯ ಅಧಿಕಾರಿಗಳಿಗೆ ಸೂಚಿಸಿದರು.

ಹಿರಿಯ ಅಧಿಕಾರಿಗಳೊಂದಿಗೆ ಬುಧವಾರ ತುರ್ತು ಸಭೆ ನಡೆಸಿದ ಆಯುಕ್ತರು, ಕಾಮಗಾರಿಗಳ ಅನುಷ್ಠಾನ ವಿಳಂಬಕ್ಕೆ ಕಾರಣ ಮತ್ತು ಅವುಗಳಿಗೆ ಪರಿಹಾರದ ಬಗ್ಗೆ ಚರ್ಚಿಸಿದರು.

ಮುಖ್ಯ ಸಂಪರ್ಕ ರಸ್ತೆ ನಿರ್ಮಾಣಕ್ಕಾಗಿ ಬಾಕಿ ಇರುವ 59 ಎಕರೆ ಪ್ರದೇಶವನ್ನು ಹಸ್ತಾಂತರಿಸಬೇಕು. ಬಡಾವಣೆಯ ಭೂ ಸ್ವಾಧೀನದ ಅಧಿಸೂಚನೆಯ ವಿರುದ್ಧ ಹೈಕೋರ್ಟ್ ಆದೇಶಕ್ಕೆ ಮೇಲ್ಮನವಿ ಸಲ್ಲಿಬೇಕು ಎಂದು ಕಾನೂನು ವಿಭಾಗಕ್ಕೆ ಸೂಚಿಸಿದರು.



ಬಹುರೂಪಿ ಪ್ರಕಾಶನ ಹಾಗೂ ಬ್ಲಾಸಮ್ ಬುಕ್ ಹೌಸ್ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಿರುತೆರೆ ಕಲಾವಿದೆ ರಂಜನಿ ರಾಘವನ್ ಅವರ ‘ಸ್ವೈಪ್ ರೈಟ್’ ಪುಸ್ತಕವನ್ನು ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್ ಬಿಡುಗಡೆ ಮಾಡಿದರು. ಪತ್ರಕರ್ತ ಜಿ.ಎನ್. ಮೋಹನ್, ಚಲನಚಿತ್ರ ನಿರ್ದೇಶಕ ಮಂಸೋರೆ ಮತ್ತು ಚಿತ್ರ ಸಾಹಿತಿ ಕವಿರಾಜ್ ಇದ್ದಾರೆ –ಪ್ರಜಾವಾಣಿ ಚಿತ್ರ



ಸರ್ಕಾರಿ ಸಂಸ್ಥೆಗಳ ಪೈಕಿ ಅತಿ ಹೆಚ್ಚು ಸಶಸ್ತ್ರ ಪಡೆಗಳ ಧ್ವಜ ನಿಧಿ ಸಂಗ್ರಹಿಸಿರುವ ಪ್ರಶಸ್ತಿಯು ಕೆಎಸ್‌ಆರ್‌ಟಿಸಿಗೆ ಲಭಿಸಿದೆ. ಸತತ 8ನೇ ಬಾರಿಗೆ ಈ ಪ್ರಶಸ್ತಿ ಫಲಕವನ್ನು ಕೆಎಸ್‌ಆರ್‌ಟಿಸಿ ಪಡೆದುಕೊಂಡಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ನಿಗಮದ ಸಿಬ್ಬಂದಿ ಮತ್ತು ಜಾಗೃತ ನಿರ್ದೇಶಕ ವೈ. ನವೀನ್ ಭಟ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

‘ಭಾರತ– ಚೀನಾ ಸಂಬಂಧ ಸಹಜ ಸ್ಥಿತಿಯಲ್ಲಿಲ್ಲ’

ನವದೆಹಲಿ: ವಿವಾದಿತ ಗಡಿ ಭಾಗದಲ್ಲಿ ಚೀನಾ ತನ್ನ ಸೇನಾ ಜಮಾವಣೆಯನ್ನು ಎಲ್ಲಿಯವರೆಗೆ ಮುಂದುವರಿಸುತ್ತದೆಯೋ ಅಲ್ಲಿಯವರೆಗೆ ಉಭಯ ದೇಶಗಳ ನಡುವಿನ ಸಂಬಂಧ ಸಹಜ ಸ್ಥಿತಿಗೆ ಬರಲು ಸಾಧ್ಯವಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಬುಧವಾರ ರಾಜ್ಯಸಭೆಗೆ ತಿಳಿಸಿದ್ದಾರೆ.

ಇಂಡೊನೇಷ್ಯಾದ ಬಾಲಿಯಲ್ಲಿ ಇತ್ತೀಚೆಗೆ ನಡೆದ ಜಿ–20 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಹಸ್ತಲಾಘವ ಮಾಡಿದ ಮೂರು ವಾರಗಳ ಬಳಿಕ, ಜೈಶಂಕರ್ ಅವರು ಎರಡೂ ದೇಶಗಳ ನಡುವಿನ ಸಂಬಂಧದ ಸ್ಥಿತಿಯ ಕುರಿತು ಹೇಳಿಕೆ ನೀಡಿದ್ದಾರೆ.

‘ಎಲ್‌ಎಸಿ ಬಳಿ ಯಾವುದೇ ರೀತಿಯ ಏಕಪಕ್ಷೀಯ ಬದಲಾವಣೆಯನ್ನು ಭಾರತ ಸಹಿಸುವುದಿಲ್ಲ’ ಎಂದಿದ್ದಾರೆ.

2009-14ಕ್ಕೆ ಹೋಲಿಸಿದರೆ ಈ ವರ್ಷ ಆರು ಪಟ್ಟು ಹೆಚ್ಚು ಹಣ-ಅಶ್ವಿನಿ ವೈಷ್ಣವ್

ಕರ್ನಾಟಕದ ರೈಲ್ವೆ ಯೋಜನೆಗೆ ₹6,091 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕರ್ನಾಟಕದ ರೈಲ್ವೆ ಯೋಜನೆಗಳಿಗೆ 2022–23ನೇ ಸಾಲಿನಲ್ಲಿ ₹6,091 ಕೋಟಿ ಹಣ ಒದಗಿಸಲಾಗಿದೆ. ಇದು ಕರ್ನಾಟಕಕ್ಕೆ ವರ್ಷವೊಂದರಲ್ಲಿ ಒದಗಿಸಿರುವ ದಾಖಲೆ ಮೊತ್ತ’ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಸಂಸದರಾದ ಶಿವಕುಮಾರ್ ಸಿ.ಉದಾಸಿ ಹಾಗೂ ಜಿ.ಎಂ.ಸಿದ್ದೇಶ್ವರ ಅವರ ಪ್ರಶ್ನೆಗಳಿಗೆ ಬುಧವಾರ ಲಿಖಿತ ಉತ್ತರ ನೀಡಿರುವ ಸಚಿವರು, ‘2009–2014ರ ಅವಧಿಗೆ ಹೋಲಿಸಿದರೆ ವರ್ಷವೊಂದಕ್ಕೆ ಒದಗಿಸಿರುವ ಅನುದಾನ ಆರು ಪಟ್ಟು (ಶೇ 625) ಹೆಚ್ಚಾಗಿದೆ. 2009–14ರ ಅವಧಿಯಲ್ಲಿ ವಾರ್ಷಿಕ ₹835 ಕೋಟಿ ಒದಗಿಸಲಾಗುತ್ತಿತ್ತು. ಇದರಲ್ಲಿ ರಾಜ್ಯದಲ್ಲಿ ಅನುಷ್ಠಾನವಾಗುತ್ತಿರುವ ಹಾಗೂ ರಾಜ್ಯದ ಮೂಲಕ ಹಾದು ಹೋಗುತ್ತಿರುವ ಯೋಜನೆಗಳು ಸೇರಿವೆ’ ಎಂದು ತಿಳಿಸಿದ್ದಾರೆ.

‘ಕರ್ನಾಟಕದಲ್ಲಿ ಹೊಸ ಮಾರ್ಗಗಳ ನಿರ್ಮಾಣ, ದ್ವಿಪಥ, ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಒದಗಿಸುತ್ತಿರುವ ಹಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. 2014–19ನೇ ಸಾಲಿನಲ್ಲಿ ಪ್ರತಿವರ್ಷ ₹2,702 ಕೋಟಿ ಒದಗಿಸಲಾಗಿದೆ. 2019–20ರಲ್ಲಿ ₹3,386 ಕೋಟಿ, 2020–21ರಲ್ಲಿ ₹4,220 ಕೋಟಿ, 2021–22ರಲ್ಲಿ ₹4,227 ಕೋಟಿ ಒದಗಿಸಲಾಗಿದೆ’ ಎಂದು ಅವರು ವಿವರ ನೀಡಿದ್ದಾರೆ.

‘14 ಯೋಜನೆಗಳನ್ನು ಕರ್ನಾಟಕ ಸರ್ಕಾರದ ಅನುದಾನದ (ಶೇ 50) ನೆರವಿನಿಂದ ಕಾರ್ಯಗತಗೊಳಿಸಲಾಗುತ್ತಿದೆ. ವೆಚ್ಚ ಹಂಚಿಕೆಯ 1674 ಕಿ.ಮೀ. ಕಾಮಗಾರಿಗಳಿಗೆ ₹18,811 ಕೋಟಿ ವೆಚ್ಚ ಮಾಡಲಾಗುತ್ತಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಕಲಬುರ್ಗಿ– ಹೊಸ ರೈಲು ಸದ್ಯಕ್ಕಿಲ್ಲ’: ’ಬೆಂಗಳೂರು–ಕಲಬುರ್ಗಿ ನಡುವೆ ಹೊಸ ರೈಲು ಸೇವೆ ಆರಂಭಿಸುವಂತೆ ಕೋರಿ ಪ್ರಸ್ತಾವನೆ ಬಂದಿದೆ. ಆದರೆ, ಸದ್ಯಕ್ಕೆ ಹೊಸ ರೈಲುಗಳ ಸಂಚಾರ ಆರಂಭಿಸುವುದಿಲ್ಲ’ ಎಂದು ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಕಲಬುರ್ಗಿ ಸಂಸದ ಡಾ.ಉಮೇಶ್ ಜಿ.ಜಾಧವ್ ಪ್ರಶ್ನೆಗೆ ಉತ್ತರ ನೀಡಿರುವ ಅವರು, ‘ಪ್ರಯಾಣಿಕರ ದಟ್ಟಣೆ, ಸಂಪನ್ಮೂಲ ಮತ್ತಿತರ ಅಂಶಗಳನ್ನು ಪರಿಗಣಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ’ ಎಂದು ತಿಳಿಸಿದ್ದಾರೆ.

ಕರ್ನಾಟಕದ ರೈಲ್ವೆ ಯೋಜನೆಗಳ ಪಕ್ಷಿನೋಟ

- **₹49,087 ಕೋಟಿ** 32 ಯೋಜನೆಗಳ ವೆಚ್ಚ
- **32** ಕರ್ನಾಟಕದಲ್ಲಿ ವಿವಿಧ ಹಂತದಲ್ಲಿರುವ ರೈಲ್ವೆ ಯೋಜನೆಗಳು
- **21** ಹೊಸ ಮಾರ್ಗಗಳು
- **11** ದ್ವಿಪಥ ಕಾಮಗಾರಿಗಳು
- **4,330 ಕಿ.ಮೀ** 32 ಯೋಜನೆಗಳ ಒಟ್ಟು ಉದ್ದ
- **1,305 ಕಿ.ಮೀ** ಕಾಮಗಾರಿ ಪೂರ್ಣ



- **₹16,258 ಕೋಟಿ** ಈ ಯೋಜನೆಗಳಿಗೆ ಇಲ್ಲಿಯ ವರೆಗೆ ಮಾಡಿರುವ ವೆಚ್ಚ
- **2,583 ಕಿ.ಮೀ** 21 ಹೊಸ ಯೋಜನೆಗಳ ಉದ್ದ
- **₹32,900 ಕೋಟಿ** ಈ ಯೋಜನೆಗಳಿಗೆ ಮೀಸಲಿಟ್ಟಿರುವ ಅನುದಾನ
- **319 ಕಿ.ಮೀ** 21 ಯೋಜನೆಗಳಲ್ಲಿ ಕಾಮಗಾರಿ ಪೂರ್ಣ
- **₹5,162 ಕೋಟಿ** ಈ ಯೋಜನೆಗಳಿಗೆ ಇಲ್ಲಿಯವರೆಗೆ ಮಾಡಿರುವ ವೆಚ್ಚ
- **1,747 ಕಿ.ಮೀ** 11 ದ್ವಿಪಥ ಕಾಮಗಾರಿಗಳ ಉದ್ದ
- **₹16,187 ಕೋಟಿ** ಈ ಯೋಜನೆಗಳ ಒಟ್ಟು ವೆಚ್ಚ
- **986 ಕಿ.ಮೀ** ಇಲ್ಲಿಯವರೆಗೆ ಕಾಮಗಾರಿ ಪೂರ್ಣ
- **₹11,096 ಕೋಟಿ** ಇಲ್ಲಿಯವರೆಗೆ ಮಾಡಿರುವ ವೆಚ್ಚ

1,753 ಎಕರೆ ಭೂ ಸ್ವಾಧೀನಕ್ಕೆ ಪ್ರಸ್ತಾವ

ಕರ್ನಾಟಕದ ಹೆಜ್ಜಾಲ–ಚಾಮರಾಜನಗರ (135 ಕಿ.ಮೀ) ನಡುವಿನ ರೈಲು ಮಾರ್ಗ ನಿರ್ಮಾಣಕ್ಕೆ 1,753 ಎಕರೆ ಖಾಸಗಿ ಭೂಮಿ ಸ್ವಾಧೀನಕ್ಕೆ ಸ್ಥಳೀಯ ಜಿಲ್ಲಾಡಳಿತಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಸಂಸದೆ ಸುಮಲತಾ ಅಂಬರೀಷ್ ಅವರ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ‘ಬೆಂಗಳೂರು–ಸತ್ಯಮಂಗಲಂ ನಡುವೆ ರೈಲ್ವೆ (260 ಕಿ.ಮೀ) ಮಾರ್ಗ ನಿರ್ಮಾಣಕ್ಕೆ ಇಲಾಖೆ ಸಿದ್ಧತೆ ನಡೆಸಿತ್ತು. ಸತ್ಯಮಂಗಲಂ ಕಾಡಿನೊಳಗೆ ರೈಲು ಮಾರ್ಗ ನಿರ್ಮಾಣಕ್ಕೆ ತಮಿಳುನಾಡು ಸರ್ಕಾರ ಹಾಗೂ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಒಪ್ಪಿಗೆ ನೀಡಲಿಲ್ಲ. ಹೀಗಾಗಿ, ಹೆಜ್ಜಾಲ–ಚಾಮರಾಜನಗರ ರೈಲು ಮಾರ್ಗ ನಿರ್ಮಾಣಕ್ಕೆ ತೀರ್ಮಾನಿಸಲಾಯಿತು. ಕರ್ನಾಟಕ ಸರ್ಕಾರ ಉಚಿತವಾಗಿ ಭೂಮಿ ನೀಡಲಿದ್ದು, ವೆಚ್ಚದ ಶೇ 50 ಮೊತ್ತ ಭರಿಸಲಿದೆ. ಈ ಮಾರ್ಗ ಕನಕಪುರ, ಮಳವಳ್ಳಿ, ಕೊಳ್ಳೆಗಾಲ, ಯಳಂದೂರು ಮೂಲಕ ಸಾಗಲಿದೆ’ ಎಂದರು.

ಪಿಎಸ್‌ಐ ಹಗರಣ: ದಿವ್ಯಾ ಹಾಗರಗಿ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಪ್ರಮುಖ ಆರೋಪಿಯಾದ ಕಲಬುರಗಿಯ ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಮತ್ತು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಸಹಾಯಕ ಕಮಾಂಡೆಂಟ್ (ಡಿವೈಎಸ್‌ಪಿ) ವೈಜನಾಥ್ ಕಲ್ಯಾಣಿ ರೇವೂರ ಅವರಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ದಿವ್ಯಾ ಮತ್ತು ವೈಜನಾಥ್ ಅವರು ಪ್ರತ್ಯೇಕವಾಗಿ ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠವು ವಜಾಗೊಳಿಸಿ ಆದೇಶಿಸಿದೆ.

ದಿವ್ಯಾ ಹಾಗರಗಿ ಸೇರಿದಂತೆ ಐವರನ್ನು ಸಿಐಡಿ ಪೊಲೀಸರು ಏಪ್ರಿಲ್ 29ರಂದು ಪುಣೆಯಲ್ಲಿ ಬಂಧಿಸಿದ್ದರು. ಮೇ 6ರಂದು ವೈಜನಾಥ್ ಅವರನ್ನು ಬಂಧಿಸಲಾಗಿತ್ತು. ವೈಜನಾಥ್, ಅಭ್ಯರ್ಥಿಗಳು ಅಕ್ರಮವಾಗಿ ಪರೀಕ್ಷೆಯಲ್ಲಿ ಉತ್ತೀರ್ಣವಾಗಲು ನೆರವಾದ ಆರೋಪ ಎದುರಿಸುತ್ತಿದ್ದಾರೆ. ದಿವ್ಯಾ ಹಾಗರಗಿ ಪ್ರಕರಣದಲ್ಲಿ 18ನೇ ಆರೋಪಿಯಾಗಿದ್ದಾರೆ.

ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ ಕಲಂ 120 (ಬಿ), 465, 468, 471, 410ರ ಜೊತೆಗೆ 34ರ ಅಡಿ ಕಲಬುರಗಿ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದ ವೀರೇಶ ನಿಡಗುಂದಾ ಎಂಬ ಅಭ್ಯರ್ಥಿಯ ಬಂಧನದೊಂದಿಗೆ ಅಕ್ರಮ ಬಯಲಿಗೆ ಬಂದಿತ್ತು.

ಕೊಲೆಗೆ ಯತ್ನಿಸಿ ಪರಾರಿ: ಬೆರಳಚ್ಚು ಆ್ಯಪ್‌ನಿಂದ ಸಿಕ್ಕಿಬಿದ್ದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರ ಕೊಲೆಗೆ ಯತ್ನಿಸಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ತಲೆಮರೆಸಿಕೊಂಡಿದ್ದ ಆರೋಪಿ ವಸಂತ್‌ಕುಮಾರ್ (42) ಎಂಬಾತನನ್ನು ರಾಜಗೋಪಾಲನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದು, ಮಂಡ್ಯದ ಕೆ.ಆರ್.ಎಸ್ ಪೊಲೀಸರ ಸುಪರ್ದಿಗೆ ಒಪ್ಪಿಸಿದ್ದಾರೆ.

‘ಮೈಸೂರಿನ ವಸಂತ್‌ಕುಮಾರ್ ವಿರುದ್ಧ ಕೆ.ಆರ್.ಎಸ್ ಠಾಣೆಯಲ್ಲಿ 2010ರಲ್ಲಿ ಪ್ರಕರಣ ದಾಖಲಾಗಿತ್ತು. ಈತನನ್ನು ಬಂಧಿಸಿದ್ದ ಪೊಲೀಸರು ಜೈಲಿಗೆ ಕಳುಹಿಸಿದ್ದರು. ಜಾಮೀನು ಪಡೆದು ಹೊರಗೆ ಬಂದಿದ್ದ ಆರೋಪಿ, ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ 2017ರಿಂದ ತಲೆಮರೆಸಿಕೊಂಡಿದ್ದ. ಐದು ವರ್ಷಗಳ ನಂತರ ಸಿಕ್ಕಿಬಿದ್ದಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಂಗೇರಿ ವಿಳಾಸ ನೀಡಿ ಪೊಲೀಸರ ದಿಕ್ಕು ತಪ್ಪಿಸಿದ್ದ ಆರೋಪಿ, ಲಗ್ಗೆರೆ ಬಳಿಯ ಭೈರವೇಶ್ವರನಗರದಲ್ಲಿ ವಾಸವಿದ್ದ. ಆಟೊ ಚಲಾಯಿಸಿಕೊಂಡು ಜೀವನ ಸಾಗಿಸುತ್ತಿದ್ದ. ಈತನ ನೈಜ ವಿಳಾಸ ಪೊಲೀಸರಿಗೆ ಗೊತ್ತಿರಲಿಲ್ಲ’ ಎಂದು ತಿಳಿಸಿವೆ.

ಆ್ಯಪ್ ನೀಡಿದ್ದ ಸುಳಿವು: ‘ಅಪರಾಧ ಹಿನ್ನೆಲೆಯುಳ್ಳ ಹಾಗೂ ಹಳೇ ಪ್ರಕರಣಗಳ ಆರೋಪಿಗಳನ್ನು ಪತ್ತೆ ಮಾಡುವುದಕ್ಕಾಗಿ ಪೊಲೀಸ್ ಇಲಾಖೆಯಿಂದ ‘ಎಂ-ಸಿಸಿಟಿಎನ್‌ಎಸ್’ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಎಲ್ಲ ಪೊಲೀಸರು ತಮ್ಮ ಮೊಬೈಲ್‌ಗಳಲ್ಲಿ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು, ಅನುಮಾನಾಸ್ಪದ ವ್ಯಕ್ತಿಗಳ ಪರಿಶೀಲನೆ ನಡೆಸುತ್ತಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ವಸಂತ್‌ಕುಮಾರ್, ರಾಜಗೋಪಾಲನಗರ ಠಾಣೆಯ ಯುರೊ ಫಾರಂ ಜಂಕ್ಷನ್‌ನಲ್ಲಿ ಡಿ. 5ರಂದು ರಾತ್ರಿ ಕಾಣಿಸಿಕೊಂಡಿದ್ದ. ಗಸ್ತಿನಲ್ಲಿದ್ದ ಸಿಬ್ಬಂದಿ, ಆತನನ್ನು ತಡೆದು ಆ್ಯಪ್ ಮೂಲಕ ಪರಿಶೀಲಿಸಿದ್ದರು. ವಸಂತ್‌ಕುಮಾರ್ ಅವರ ಬೆರಳಚ್ಚು ಆ್ಯಪ್‌ನಲ್ಲಿರುವ ಬೆರಳಚ್ಚಿಗೆ ಹೋಲಿಕೆಯಾಗಿತ್ತು. ಕೂಡಲೇ ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು’ ಎಂದು ತಿಳಿಸಿವೆ.

ವಿಶೇಷ ಕಮಿಷನರ್ ಸಲೀಂ ಸೂಚನೆ • ದಟ್ಟಣೆ ಅವಧಿಯಲ್ಲಿ ಭಾರಿ ವಾಹನಗಳ ಸಂಚಾರ ನಿರ್ಬಂಧ

ಪ್ರತಿ ಸಿಗ್ನಲ್‌ನಲ್ಲೂ ನಿಗಾ: ತಗ್ಗಿದ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೋಟಾರು ವಾಹನಗಳ ಕಾಯ್ದೆ ಜಾರಿಗೆ ತರುವುದರ ಜೊತೆಗೆ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಹೆಚ್ಚಿನ ಒತ್ತು ನೀಡಬೇಕು’ ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಡಿಸಿಪಿ, ಎಸಿಪಿ, ಇನ್‌ಸ್ಪೆಕ್ಟರ್‌ಗಳು ರಸ್ತೆಗೆ ಇಳಿದು ಕೆಲಸ ಮಾಡುತ್ತಿದ್ದು, ನಗರದ ಹಲವು ಸಿಗ್ನಲ್ ಹಾಗೂ ಪ್ರಮುಖ ರಸ್ತೆಗಳಲ್ಲಿ ದಟ್ಟಣೆ ತಗ್ಗಿದೆ.


ಎಂ.ಎ. ಸಲೀಂ

ನಗರದಲ್ಲಿ ಹೆಚ್ಚಿರುವ ದಟ್ಟಣೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರ್ಕಾರ, ಬೆಂಗಳೂರಿನ ಸಂಚಾರ ವಿಭಾಗಕ್ಕೆ ವಿಶೇಷ ಕಮಿಷನರ್ ಆಗಿ ಎಂ.ಎ. ಸಲೀಂ ಅವರನ್ನು ನೇಮಿಸಿದೆ. ಅಧಿಕಾರ ವಹಿಸಿಕೊಂಡ ದಿನದಿಂದ ನಿತ್ಯವೂ ಬೆಳಿಗ್ಗೆ 8 ಗಂಟೆಯಿಂದ ನಗರ ಸುತ್ತುವ ಸಲೀಂ, ಪ್ರತಿಯೊಂದು ಸಿಗ್ನಲ್‌ಗಳಲ್ಲಿ ಪರಿಶೀಲನೆ ನಡೆಸುತ್ತಿದ್ದಾರೆ. ಅತೀ ಹೆಚ್ಚು, ಹೆಚ್ಚು ದಟ್ಟಣೆ ಉಂಟಾಗುವ ಸ್ಥಳಗಳನ್ನು ಗುರುತಿಸಿ, ಅಂಥ ಸ್ಥಳಗಳ ಮೇಲೆ ನಿಗಾ ವಹಿಸುವಂತೆ ಪೊಲೀಸರಿಗೆ ಸೂಚನೆ ನೀಡುತ್ತಿದ್ದಾರೆ.

ಕೆಳ ಹಂತದ ಸಿಬ್ಬಂದಿ ಅಭಿಪ್ರಾಯಕ್ಕೆ ಆದ್ಯತೆ: ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ), ಹೊರವರ್ತುಲ ರಸ್ತೆಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ದಟ್ಟಣೆ ಹೆಚ್ಚಿರುತ್ತದೆ. ಇಂಥ ಸ್ಥಳಗಳ ಸಿಗ್ನಲ್‌ಗಳಲ್ಲಿ ಕೆಲಸ ಮಾಡುವ ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಅಭಿಪ್ರಾಯಗಳಿಗೆ ಆದ್ಯತೆ ನೀಡುತ್ತಿರುವ ಸಲೀಂ, ಆಯಾ ಸಿಗ್ನಲ್‌ಗಳಲ್ಲಿ ದಟ್ಟಣೆ ನಿಯಂತ್ರಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ.

‘ಸಿಗ್ನಲ್‌ಗಳಲ್ಲಿರುವ ಸಮಸ್ಯೆ ಹೇಳಿದರೂ ಇನ್‌ಸ್ಪೆಕ್ಟರ್‌ಗಳು, ಎಸಿಪಿ ಹಾಗೂ ಡಿಸಿಪಿಗಳು ಸ್ಪಂದಿಸುತ್ತಿಲ್ಲ’ ಎಂಬುದಾಗಿ ಕೆಲ ಕಾನ್‌ಸ್ಟೆಬಲ್‌ಗಳು ದೂರಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸಲೀಂ, ‘ಎಎಸ್‌ಐ, ಪಿಎಸ್‌ಐ ಹಾಗೂ ಇನ್‌ಸ್ಪೆಕ್ಟರ್‌ಗಳು ಬೆಳಿಗ್ಗೆ 8 ಗಂಟೆಯಿಂದ ತಮ್ಮ ವ್ಯಾಪ್ತಿಯ ಸಿಗ್ನಲ್‌ಗಳಲ್ಲಿ ಕೆಲಸ ಮಾಡಬೇಕು. ಎಸಿಪಿ ಹಾಗೂ ಡಿಸಿಪಿ ಉಸ್ತುವಾರಿ ವಹಿಸಿಕೊಳ್ಳಬೇಕು’ ಎಂದು ಸೂಚಿಸಿದ್ದಾರೆ.

‘ಯಾವುದಾದರೂ ಸಿಗ್ನಲ್‌ನಲ್ಲಿ ಲೋಪವಾದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ’ ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ಹೀಗಾಗಿ, ಹಿರಿಯ ಅಧಿಕಾರಿಗಳು ಬೆಳಿಗ್ಗೆಯೇ ಸಿಗ್ನಲ್‌ಗಳಲ್ಲಿ ಹಾಜರಾಗುತ್ತಿದ್ದಾರೆ. ವಾಹನಗಳು ತ್ವರಿತವಾಗಿ ಸಿಗ್ನಲ್ ದಾಟಿ ಹೋಗಲು ಅನುಕೂಲ ಕಲ್ಪಿಸುತ್ತಿದ್ದಾರೆ.

‘ಇಷ್ಟು ದಿನ ಸಿಗ್ನಲ್‌ಗಳನ್ನೇ ನೋಡದ ಕೆಲ ಪಿಎಸ್‌ಐ, ಇನ್‌ಸ್ಪೆಕ್ಟರ್ ಹಾಗೂ ಎಸಿಪಿಗಳು, ಶಿಸ್ತುಕ್ರಮದ ಭಯದಲ್ಲಿ ರಸ್ತೆಗೆ ಇಳಿದು ಕೆಲಸ ಮಾಡುತ್ತಿದ್ದಾರೆ. ಮೊದಲಿಗಿಂತಲೂ ದಟ್ಟಣೆ ಸ್ವಲ್ಪ ಕಡಿಮೆಯಾಗಿದೆ’ ಎಂದು ಸಂಚಾರ ಕಾನ್‌ಸ್ಟೆಬಲ್ ಒಬ್ಬರು ಹೇಳಿದರು.

ಭಾರಿ ವಾಹನಗಳ ನಿರ್ಬಂಧ: ಭಾರಿ ವಾಹನಗಳ ಸಂಚಾರವನ್ನು ನಗರದಲ್ಲಿ ನಿಗದಿತ ಸಮಯದಲ್ಲಿ ನಿರ್ಬಂಧಿಸಲಾಗಿತ್ತು. ಆದರೆ, ಆದೇಶ ಪಾಲನೆಯಾಗದೇ ವಾಹನಗಳು ನಗರದೊಳಗೆ ಬರುತ್ತಿದ್ದವು. ಇದರಿಂದ ಅಪಘಾತ ಹಾಗೂ ದಟ್ಟಣೆ ಸಮಸ್ಯೆ ಹೆಚ್ಚಾಗಿತ್ತು.

ಸಲೀಂ ಅವರು ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ, ಭಾರಿ ವಾಹನಗಳ ಸಂಚಾರ ನಿರ್ಬಂಧ ಆದೇಶ ಜಾರಿಗೆ ಪೊಲೀಸರಿಗೆ ಸೂಚನೆ ನೀಡಿದ್ದಾರೆ. ಇದು ಮಲ್ಟಿ ಆಕ್ಸಲ್, ಆರ್ಟಿಕ್ಯುಲೇಟೆಡ್, ಟ್ರಕ್, ಲಾರಿಗಳು ನಾಲ್ಕು ಚಕ್ರ ಹಾಗೂ ಮೂರು ಚಕ್ರ ಗೂಡ್ಸ್ ವಾಹನಗಳಿಗೆ ಅನ್ವಯವಾಗಲಿದೆ. ನಿಗದಿತ ಸಮಯದಲ್ಲಿ ಭಾರಿ ವಾಹನಗಳನ್ನು ನಗರದ ಹೊರಗೆಯೇ ಪೊಲೀಸರು ತಡೆದು ನಿಲ್ಲಿಸುತ್ತಿದ್ದು, ಇದರಿಂದ ದಟ್ಟಣೆ ಕಡಿಮೆಯಾಗಿರುವುದಾಗಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ದಂಡ ವಸೂಲಿಗಿಂತ ಸುಗಮ ಸಂಚಾರ ಮುಖ್ಯ: ‘ಜನರು ಬೆಳಿಗ್ಗೆ ಮನೆಯಿಂದ ಕೆಲಸಕ್ಕೆ ಹೋಗಿ, ಸಂಜೆ ವಾಪಸ್ ಮನೆಗೆ ಬರುತ್ತಾರೆ. ಅವರ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು ಪೊಲೀಸರ ಕರ್ತವ್ಯ. ಹೀಗಾಗಿ, ಸುಗಮ ಸಂಚಾರಕ್ಕೆ ಹೆಚ್ಚಿನ ಒತ್ತು ನೀಡಿ’ ಎಂದು ಸಲೀಂ ಅವರು ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಪ್ರತಿ ಠಾಣೆ ವ್ಯಾಪ್ತಿಯಲ್ಲಿ ಇಬ್ಬರು ಎಎಸ್‌ಐ ನೇತೃತ್ವದ ತಂಡಗಳು, ನಿತ್ಯವೂ ದಂಡ ವಸೂಲಿಗಾಗಿ ರಸ್ತೆಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದವು. ಆದರೆ, ಇದೀಗ ಬೆಳಿಗ್ಗೆ ಹಾಗೂ ಸಂಜೆ ದಂಡ ವಸೂಲಿಯೇ ಬಂದ್ ಆಗಿದೆ. ಅತೀ ದಟ್ಟಣೆ ಇರುವ ಅವಧಿಯಲ್ಲಿ ಸುಗಮ ಸಂಚಾರ ಕರ್ತವ್ಯಕ್ಕಾಗಿ ಎಲ್ಲ ಪೊಲೀಸರನ್ನು ಬಳಸಿಕೊಳ್ಳಲಾಗುತ್ತಿದೆ. ಅವಶ್ಯಕತೆ ಇರುವ ಕಡೆಗಳಲ್ಲಿ ಮಾತ್ರ ದಂಡ ವಸೂಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಕಾಮಗಾರಿಯಿಂದ ದಟ್ಟಣೆ: ನಗರದ ಹಲವು ಸ್ಥಳಗಳಲ್ಲಿ ಕಾಮಗಾರಿ ನಡೆಯುತ್ತಿದ್ದು, ಇದರಿಂದಾಗಿ ದಟ್ಟಣೆ ಉಂಟಾಗುತ್ತಿದೆ. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆಯೂ ಬಿಬಿಎಂಪಿ ಅಧಿಕಾರಿಗಳಿಗೆ ಸಲೀಂ ಪತ್ರ ಬರೆದಿದ್ದಾರೆ.

ಹೆಬ್ಬಾಳ ದಟ್ಟಣೆಗೂ ಪರಿಹಾರ: ಬಳ್ಳಾರಿ ರಸ್ತೆಯ ಹೆಬ್ಬಾಳ ಬಳಿ ಉಂಟಾಗುವ ದಟ್ಟಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಂಚಾರ ಪೊಲೀಸರು ಹಲವು ಬಾರಿ ಸಭೆ ನಡೆಸಿದ್ದಾರೆ. ತಾತ್ಕಾಲಿಕ ಕ್ರಮ ಕೈಗೊಂಡರೂ ದಟ್ಟಣೆ ನಿಯಂತ್ರಣಕ್ಕೆ ಬರುತ್ತಿಲ್ಲ. ಹೀಗಾಗಿ, ಸಲೀಂ ಅವರು ತಜ್ಞರ ಜೊತೆ ಚರ್ಚಿಸಿ ಹೊಸದೊಂದು ಯೋಜನೆ ರೂಪಿಸಲು ಸಿದ್ಧತೆ ನಡೆಸುತ್ತಿದ್ದಾರೆ.

‘ಅಪಘಾತದ ವಾಹನ 24 ಗಂಟೆಯಲ್ಲಿ ಹಿಂದಿರುಗಿಸಲು ಸೂಚನೆ’

‘ನಗರದಲ್ಲಿ ಅಪಘಾತವಾದ ವಾಹನಗಳನ್ನು ವಿಚಾರಣೆ ನೆಪದಲ್ಲಿ ಠಾಣೆ ಮುಂದೆ ವಿನಾಕಾರಣ ನಿಲ್ಲಿಸಬಾರದು. ಅಪಘಾತ ಹಾಗೂ ವಾಹನಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ತ್ವರಿತವಾಗಿ ವರದಿ ಪಡೆದು, 24 ಗಂಟೆಯೊಳಗೆ ವಾಹನಗಳನ್ನು ಮಾಲೀಕರಿಗೆ ಹಸ್ತಾಂತರಿಸಲು ಪೊಲೀಸರಿಗೆ ಸೂಚನೆ ನೀಡಲಾಗಿದೆ’ ಎಂದು ವಿಶೇಷ ಕಮಿಷನರ್ ಎಂ.ಎ. ಸಲೀಂ ತಿಳಿಸಿದ್ದಾರೆ.

ಠಾಣೆಗಳ ಎದುರು ವಿನಾಕಾರಣ ವಾಹನ ನಿಲ್ಲಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ‘ಇಂಥ ವಾಹನಗಳಿಂದ ಠಾಣೆಗಳ ಸೌಂದರ್ಯವೂ ಹಾಳಾಗುತ್ತಿದೆ. ಮುಂದಿನ ದಿನಗಳಲ್ಲಿ ವಾಹನಗಳನ್ನು ನಿಲ್ಲಿಸುವುದನ್ನು ಕಡಿಮೆ ಮಾಡಲಾಗುವುದು’ ಎಂದಿದ್ದಾರೆ.

‘ಅವೈಜ್ಞಾನಿಕ ಹಂಪ್ಸ್‌ಗಳಿಂದ ಅಪಘಾತಗಳು ಸಂಭವಿಸುತ್ತಿವೆ. ಅಂಥ ಹಂಪ್ಸ್‌ಗಳನ್ನು ತೆರವು ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಅಗತ್ಯವಿರುವ ಕಡೆ ರಬ್ಬರ್ ಹಂಪ್ಸ್ ಹಾಕುವ ಬಗ್ಗೆಯೂ ಸಲಹೆ ನೀಡಲಾಗಿದೆ’ ಎಂದು ಸಲೀಂ ತಿಳಿಸಿದ್ದಾರೆ.

‘ಪೊಲೀಸರು ರಸ್ತೆಯಲ್ಲಿದ್ದರೆ ದಟ್ಟಣೆ ನಿಯಂತ್ರಣ’

‘ಜನರ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸುವುದು ಪೊಲೀಸರ ಕರ್ತವ್ಯ. ಪ್ರಮುಖ ರಸ್ತೆ ಹಾಗೂ ಸಿಗ್ನಲ್‌ಗಳಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಿದರೆ ದಟ್ಟಣೆ ನಿಯಂತ್ರಣ ಮಾಡಬಹುದು. ಯಾವುದಾದರೂ ವಾಹನ ರಸ್ತೆ ಮಧ್ಯೆಯೇ ಕೆಟ್ಟು ನಿಂತರೆ, ತ್ವರಿತವಾಗಿ ತೆರವು ಮಾಡಿ ಇತರೆ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಬಹುದು’ ಎಂದು ಎಂ.ಎ. ಸಲೀಂ ಹೇಳಿದರು.

ದಟ್ಟಣೆ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಸಲೀಂ, ‘ಸುಗಮ ಸಂಚಾರಕ್ಕೆ ಅಗತ್ಯವಿರುವ ಎಲ್ಲ ನಿಯಮಗಳು ನಮ್ಮಲ್ಲಿವೆ. ಆದರೆ, ಅವು ಜಾರಿಯಾಗುತ್ತಿರಲಿಲ್ಲ. ಜವಾಬ್ದಾರಿ ಅರಿತು ಕೆಲಸ ಮಾಡುವಂತೆ ಪೊಲೀಸರಿಗೆ ಹೇಳಿದ್ದೇನೆ’ ಎಂದರು.

ಭಾರಿ ವಾಹನಗಳ ನಿರ್ಬಂಧದ ಅವಧಿ

- ಬೆಳಿಗ್ಗೆ 8ರಿಂದ 11 ಗಂಟೆವರೆಗೆ – ಸಂಜೆ 4ರಿಂದ 8 ಗಂಟೆವರೆಗೆ

ಸಂಚಾರ ನಿಯಮ: 50 ಸಿಗ್ನಲ್‌ಗಳಲ್ಲಿ ಎಎನ್‌ಪಿಆರ್ ಕ್ಯಾಮೆರಾ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವವರನ್ನು ಫೋಟೊ ಸಮೇತ ಪತ್ತೆ ಹಚ್ಚಿ ದಂಡ ವಿಧಿಸಲು ನಗರದ 50 ಜಂಕ್ಷನ್‌ಗಳಲ್ಲಿ 250 ಎಎನ್‌ಪಿಆರ್ (ಸ್ವಯಂಪ್ರೇರಿತ ವಾಹನಗಳ ನೋಂದಣಿ ಸಂಖ್ಯೆ ಗುರುತಿಸುವ) ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದ್ದು, ಈ ಕ್ಯಾಮೆರಾಗಳು ಸದ್ಯದಲ್ಲೇ ಕಾರ್ಯಾಚರಣೆ ಆರಂಭಿಸಲಿವೆ.


ನಗರದ ಕಬ್ಬನ್ ರಸ್ತೆಯ ಸಿಗ್ನಲ್‌ನಲ್ಲಿ ಅಳವಡಿಸಿರುವ ಎಎನ್‌ಪಿಆರ್ ಕ್ಯಾಮೆರಾಗಳು – ಪ್ರಜಾವಾಣಿ ಚಿತ್ರ

ಈ ಬಗ್ಗೆ ಟ್ವೀಟ್ ಮಾಡಿರುವ ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ‘ಸಂಚಾರ ಸಿಗ್ನಲ್‌ಗಳಲ್ಲಿ ಕ್ಯಾಮೆರಾ ಕಣ್ಣಿರಲಿದೆ. ನಿಯಮ ಉಲ್ಲಂಘಿಸುವವರ ಫೋಟೊ ಕ್ಯಾಮೆರಾದಲ್ಲಿ ಸೆರೆಯಾಗಿ, ಸಂಚಾರ ನಿಯಂತ್ರಣ ಕೊಠಡಿಗೆ ಮಾಹಿತಿ ಬರಲಿದೆ. ನಂತರ, ಸಂಬಂಧಪಟ್ಟ ವಾಹನಗಳ ಮಾಲೀಕರ ಮೊಬೈಲ್‌ಗೆ ದಂಡದ ನೋಟಿಸ್ ಸಂದೇಶ ಹೋಗಲಿದೆ’ ಎಂದಿದ್ದಾರೆ.

‘ಸಂಪರ್ಕ ರಹಿತವಾಗಿ ಉಲ್ಲಂಘನೆ ಪತ್ತೆ ಮಾಡಲು ಈ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಆದರೆ, ದಂಡ ಸಂಗ್ರಹಿಸುವ ಉದ್ದೇಶ ನಮ್ಮದಲ್ಲ. ಸಾರ್ವಜನಿಕರು, ನಿಯಮ ಉಲ್ಲಂಘಿಸದೇ ಎಚ್ಚರಿಕೆಯಿಂದ ಸಂಚರಿಸಬೇಕು’ ಎಂದು ತಿಳಿಸಿದ್ದಾರೆ.

ಯಾವೆಲ್ಲ ಉಲ್ಲಂಘನೆ ಕ್ಯಾಮೆರಾದಲ್ಲಿ ಸೆರೆ: ಅತೀ ವೇಗ, ಸಿಗ್ನಲ್ ಜಂಪ್, ಜಿಬ್ರಾ ಕ್ರಾಸಿಂಗ್, ಹೆಲ್ಮೆಟ್ ರಹಿತ ಬೈಕ್ ಚಾಲನೆ, ತ್ರಿಬಲ್ ರೈಡಿಂಗ್, ಚಾಲನೆ ವೇಳೆ ಮೊಬೈಲ್ ಬಳಕೆ, ಸೀಟ್ ಬೆಲ್ಟ್ ಧರಿಸದಿರುವುದು ಸೇರಿದಂತೆ ಹಲವು ಉಲ್ಲಂಘನೆಗಳು ಕ್ಯಾಮೆರಾದಲ್ಲಿ ಸೆರೆಯಾಗುವ ವ್ಯವಸ್ಥೆ ಇದೆ.



ಕಡಲೆಕಾಯಿ ಪರಿಷೆ

ನೆಲಮಂಗಲ ಸಮೀಪದ ಸೊಂಡೆಕೊಪ್ಪ ರಸ್ತೆಯ ಬಯಲು ಉದ್ಭವ ಗಣೇಶನ ರಥೋತ್ಸವ (ಕಡಲೆಕಾಯಿ ಪರಿಷೆ) ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಅಪಘಾತ: ಇಬ್ಬರು ಯುವಕರ ಸಾವು

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ರಾಮೋಹಳ್ಳಿ ಬಳಿ ಬುಧವಾರ ಬೆಳಿಗ್ಗೆ ಕ್ಯಾಂಟರ್ ವಾಹನ ಹಾಗೂ ಸ್ಕೂಟರ್ ನಡುವೆ ಡಿಕ್ಕಿ ಸಂಭವಿಸಿದ್ದು, ಇಬ್ಬರು ಸ್ಥಳದಲ್ಲೇ ಮೃತಪಟ್ಟರು.

ಬೆಂಗಳೂರಿನ ಗೋವಿಂದರಾಜ ನಗರ ನಿವಾಸಿಗಳಾದ ಕಾರ್ತೀಕ್ (20) ಹಾಗೂ ಶ್ರೀನಿವಾಸ (19) ಮೃತರು. ಲೋಹಿತ್ ಎಂಬ ಯುವಕ ಗಾಯಗೊಂಡಿದ್ದು, ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಲಾಗಿದೆ. 3 ಯುವಕರು ಸ್ಕೂಟರ್‌ನಲ್ಲಿ ಹೊರಟಿದ್ದ ವೇಳೆ ಎದುರಿನಿಂದ ಕ್ಯಾಂಟರ್ ಡಿಕ್ಕಿಯಾಗಿದೆ ಎಂದು ಪೊಲೀಸರು ತಿಳಿಸಿದರು.

ಅಪಘಾತದ ಸಂದರ್ಭ ರೊಚ್ಚಿಗೆದ್ದ ಸ್ಥಳೀಯರು ಕ್ಯಾಂಟರ್ ಚಾಲಕನಿಗೆ ಥಳಿಸಿದ್ದು, ಆತನನ್ನು ತಾವರೆಕೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಕೀಲರ ಕುಟುಂಬ ಬೆದರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನಲ್ಲಿ ಹೊರಟಿದ್ದ ವಕೀಲರ ಕುಟುಂಬವನ್ನು ಅಡ್ಡಗಟ್ಟಿ ಸುಲಿಗೆ ಮಾಡಿದ್ದ ಆರೋಪದಡಿ ರೌಡಿ ಮಂಜೂರ್ ಅಹ್ಮದ್ ಅಲಿಯಾಸ್ ದುಂದು (38) ಎಂಬಾತನನ್ನು ದೇವರಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಶಿವಾಜಿನಗರದ ಟಾಸ್ಕರ್ ಟೌನ್ ನಿವಾಸಿ ಮಂಜೂರ್, ಅಪರಾಧ ಹಿನ್ನೆಲೆಯುಳ್ಳವ. ಸುಲಿಗೆ, ಕಳ್ಳತನ, ಕೊಲೆ ಯತ್ನ, ವಂಚನೆ, ಅತ್ಯಾಚಾರ, ಕೋಮು ಗಲಭೆ ಸೇರಿದಂತೆ 25 ಪ್ರಕರಣಗಳಲ್ಲಿ ಈತ ಭಾಗಿಯಾಗಿದ್ದ. ಈತನ ಹೆಸರು ಶಿವಾಜಿನಗರ ರೌಡಿ ಪಟ್ಟಿಯಲ್ಲಿತ್ತು’ ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ಹೇಳಿದರು.


ಮಂಜೂರ್ ಅಹ್ಮದ್

‘ಸಿನಿಮಾ ನಟರೊಬ್ಬರ ಸಹಾಯಕನಾಗಿದ್ದ ಈತ, ಹಲವು ವರ್ಷಗಳ ಹಿಂದೆಯೇ ಕೆಲಸ ಬಿಟ್ಟಿದ್ದ. ನಂತರ, ತನ್ನದೇ ತಂಡ ಕಟ್ಟಿಕೊಂಡು ಅಕ್ರಮವಾಗಿ ಹಣ ಗಳಿಸಿ ಜೀವನ ಸಾಗಿಸುತ್ತಿದ್ದ’ ಎಂದು ತಿಳಿಸಿದರು.

ವಕೀಲರನ್ನು ಗುರಿಯಾಗಿಸಿ ಕೃತ್ಯ: ‘ವಕೀಲ ಅಶ್ಫಕ್ ಅಹಮ್ಮದ್ ಅವರು ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಮಂಗಳವಾರ ರಾತ್ರಿ ಕನಕನಗರಕ್ಕೆ ಕಾರಿನಲ್ಲಿ ಹೋಗಿದ್ದರು. ಇದೇ ವೇಳೆ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಕಾರಿನ ಬಾಗಿಲನ್ನು ಒತ್ತಾಯದಿಂದ ತೆರೆದು ಅಶ್ಫಕ್, ಪತ್ನಿ ಹಾಗೂ ಮಕ್ಕಳ ಮೇಲೆ ಹಲ್ಲೆ ಮಾಡಿದ್ದರು’ ಎಂದು ಡಿಸಿಪಿ ಹೇಳಿದರು.

‘ಪರ್ಸ್, ಮೊಬೈಲ್ ಕಿತ್ತುಕೊಂಡಿದ್ದ ಆರೋಪಿಗಳು, ವಕೀಲರ ಕುಟುಂಬವನ್ನು ಕಾರಿನಿಂದ ಹೊರಗೆ ತಳ್ಳಿದ್ದರು. ನಂತರ, ಅದೇ ಕಾರಿನಲ್ಲೇ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ನಂತರ, ಅಶ್ಫಕ್ ಠಾಣೆಗೆ ಮಾಹಿತಿ ನೀಡಿದ್ದರು.’

‘ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ವಿಶೇಷ ತಂಡ, ಆರೋಪಿಯನ್ನು ಬಂಧಿಸಿದೆ. ₹14 ಲಕ್ಷ ಮೌಲ್ಯದ ಕಾರು ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ರೌಡಿ ಮಂಜೂರ್, ವಕೀಲರನ್ನೇ ಗುರಿಯಾಗಿಸಿಕೊಂಡು ಕೃತ್ಯ ಎಸಗುತ್ತಿದ್ದ. ಈತನ ತಂಡದಲ್ಲಿರುವ ಮತ್ತಷ್ಟು ಆರೋಪಿಗಳನ್ನು ಬಂಧಿಸಬೇಕಿದೆ’ ಎಂದು ತಿಳಿಸಿದರು.

‘ರೌಡಿ ಮಂಜೂರ್ ವಿರುದ್ಧ ಭಾರತಿನಗರ, ಶಿವಾಜಿನಗರ, ಪುಲಿಕೇಶಿನಗರ ಹಾಗೂ ಇತರೆ ಠಾಣೆಗಳ ವ್ಯಾಪ್ತಿಯಲ್ಲಿ ಪ್ರಕರಣಗಳು ದಾಖಲಾಗಿವೆ. ಜೊತೆಗೆ, ರಾಜಕೀಯ ಮುಖಂಡರ ಸಂಬಂಧಿ ಎಂಬುದಾಗಿ ಹೇಳಿಕೊಂಡು ಹಲವರನ್ನು ವಂಚಿಸಿರುವ ಮಾಹಿತಿಯೂ ಇದೆ’ ಎಂದು ಹೇಳಿದರು.

‘ಗೃಹ ಸಚಿವರಿಗೆ ಇಲಾಖೆ ಹಿಡಿತವಿಲ್ಲ’

ಬೆಂಗಳೂರು: ‘ಪೊಲೀಸರ ದುಂಡಾವರ್ತನೆ ಹೆಚ್ಚಾಗಿದೆ. ರಾಜ್ಯದ ವಿವಿಧೆಡೆ ವಕೀಲರ ಮೇಲೆ ನಡೆಯುತ್ತಿರುವ ಪೊಲೀಸರ ನಿರಂತರ ದೌರ್ಜನ್ಯ ಪ್ರಜಾಪ್ರಭುತ್ವದ ಅಣಕವಾಗಿದ್ದು, ಗೃಹ ಸಚಿವರಿಗೆ ಇಲಾಖೆಯ ಮೇಲೆ ಹಿಡಿತವೇ ಇಲ್ಲದಂತಾಗಿದೆ’ ಎಂದು ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಕುರಿತಂತೆ ಹೇಳಿಕೆ ನೀಡಿರುವ ಅವರು, ‘ಪುಂಜಾಲಕಟ್ಟೆ ಠಾಣೆಯ ಪೊಲೀಸರು ವಕೀಲ ಕುಲದೀಪ್ ಶೆಟ್ಟಿ ಅವರನ್ನು ಥಳಿಸಿ ಅವರ ತಾಯಿ ಮತ್ತು ಸಹೋದರನ ಎದುರೇ ಬಟ್ಟೆ ಹರಿದು ಅಮಾನವೀಯವಾಗಿ ಜೀಪಿನಲ್ಲಿ ಎಳೆದೊಯ್ದಿರುವುದು ಖಂಡನೀಯ’ ಎಂದು ಹೇಳಿದ್ದಾರೆ.

ಬೈಕ್ ಟ್ಯಾಕ್ಸಿ: ಆಟೊ ಚಾಲಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಟ್ಯಾಕ್ಸಿ ಸೇವೆ ಆರಂಭಿಸಲು ರಾಜ್ಯ ಸಾರಿಗೆ ಪ್ರಾಧಿಕಾರ ಅನುಮತಿ ನೀಡಿರುವ ಬೆನ್ನಲ್ಲೇ ಆಟೊರಿಕ್ಷಾ ಚಾಲಕರಿಂದ ವಿರೋಧ ವ್ಯಕ್ತವಾಗಿದೆ. ನಿಯಮ ಸಡಿಲಿಸಿ ಬೈಕ್ ಟ್ಯಾಕ್ಸಿಗೆ ಪರವಾನಗಿ ನೀಡಿದರೆ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

‘ಬೈಕ್ ಟ್ಯಾಕ್ಸಿಗೆ ಅನುಮತಿ ನೀಡುವ ಪ್ರಯತ್ನ 2021ರಲ್ಲೇ ನಡೆದಿತ್ತು. ಅದಕ್ಕೆ ಆಕ್ಷೇಪಣೆಯನ್ನೂ ಸಲ್ಲಿಸಿದ್ದೆವು. ಸರ್ಕಾರ ಈಗ ಅನುಮತಿ ನಿಡಿದ್ದು, ಮತ್ತೊಮ್ಮೆ ಸಾರಿಗೆ ಇಲಾಖೆಗೆ ಮನವಿ ಸಲ್ಲಿಸುತ್ತೇವೆ. ಸ್ಪಂದಿಸದಿದ್ದರೆ ಮುಂದಿನ ನಮ್ಮ ಹೋರಾಟದ ಬಗ್ಗೆ ಆಟೊ ಚಾಲಕರ ಸಂಘಟನೆಗಳ ಮುಖಂಡರು ಸಭೆ ನಡೆಸಿ ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಅವರು ಹೇಳಿದರು.

‘ಮೆಟ್ರೊ ನಿಲ್ದಾಣಗಳಿಗೆ ಫೀಡರ್ ಸೇವೆಯಾಗಿ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಬಳಕೆಗೆ ಅನುಮತಿ ನೀಡಲಾಗುವುದು ಎಂದು ಸಾರಿಗೆ ಇಲಾಖೆ ಈ ಹಿಂದೆ ಹೇಳಿತ್ತು. ಬೈಕ್ ಟ್ಯಾಕ್ಸಿ ಎಂದರೆ ಸಾಮಾನ್ಯ ಎಲೆಕ್ಟ್ರಿಕ್ ಬೈಕ್‌ಗಳಲ್ಲ. ಮೂರು ಚಕ್ರದ ವಾಹನ, ಪ್ರಯಾಣಿಕರು ಮಳೆ ಮತ್ತು ಬಿಸಿಲಿನಿಂದ ರಕ್ಷಣೆ ಪಡೆದುಕೊಳ್ಳುವ ಮೇಲ್ಛಾವಣಿ ಇರಬೇಕಾಗುತ್ತದೆ. ಈ ನಿಯಮಗಳನ್ನು ಉಲ್ಲಂಘಿಸಿ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಲು ಸಾರಿಗೆ ಇಲಾಖೆ ಮುಂದಾಗಿದ್ದು, ಈ ನಿರ್ಧಾರವನ್ನು ವಾಪಸ್ ಪಡೆಯಬೇಕು’ ಎಂದು ಆಟೊ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ ಒತ್ತಾಯಿಸಿದರು.

‘ಬೈಕ್ ಟ್ಯಾಕ್ಸಿ ಎಲೆಕ್ಟ್ರಿಕ್ ಬೈಕ್‌ಗಳಿಗೆ ಮಾತ್ರ ಸೀಮಿತ. ಏಳು ಕಿಲೋ ಮೀಟರ್‌ಗಿಂತ ಹೆಚ್ಚಿನ ದೂರ ಪ್ರಯಾಣಿಕರನ್ನು ಕರೆದೊಯ್ಯಲು ಅವಕಾಶ ಇಲ್ಲ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಟ್ಯಾಕ್ಸಿ ಚಾಲಕರಿಗೆ ತೊಂದರೆ ಆಗುವುದಿಲ್ಲ. ಸಾರಿಗೆ ಇಲಾಖೆಗೆ ಬಂದಿರುವ ಹೊಸ ಆಯುಕ್ತರು ನಿಯಮ ಸಡಿಲಿಸಿದ್ದಾರೆಯೇ? ಈಗಾಗಲೇ ಖಾಸಗಿ ಬೈಕ್‌ಗಳಲ್ಲಿ ಟ್ಯಾಕ್ಸಿ ಸೇವೆ ಅನಧಿಕೃತವಾಗಿ ನಡೆಯುತ್ತಿದೆ. ಅದನ್ನು ಕಟ್ಟುನಿಟ್ಟಾಗಿ ತಡೆಯಬೇಕು’ ಎಂದು ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷ ತನ್ವೀರ್ ಪಾಷಾ ಅವರು ಒತ್ತಾಯಿಸಿದರು.

ಅಪರಾಧ ಸುದ್ದಿಗಳು

ಪುಟ್ಟೇನಹಳ್ಳಿ: ಸ್ನೇಹಿತರ ಗಲಾಟೆ: ಕೊಲೆಯಲ್ಲಿ ಅಂತ್ಯ

ಬೆಂಗಳೂರು: ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬಸವರಾಜ್ (25) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಸ್ನೇಹಿತ ಅಭಿಜಿತ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಬಸವರಾಜ್ ಹಾಗೂ ಅಭಿಜಿತ್ ನಡುವೆ ಗಲಾಟೆ ಆಗಿತ್ತು. ಇದರಿಂದ ವೈಷಮ್ಯ ಬೆಳೆದಿತ್ತು. ಬಸವರಾಜ್ ಅವರನ್ನು ಕೊಲೆ ಮಾಡಿ ಅಭಿಜಿತ್ ಪರಾರಿಯಾಗಿದ್ದು, ಆತನ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಗಲಾಟೆಗೆ ಸಂಬಂಧಪಟ್ಟಂತೆ ಬಸವರಾಜ್ ಹಾಗೂ ಅಭಿಜಿತ್, ಕೆಲ ದಿನಗಳ ಹಿಂದೆ ಠಾಣೆ ಮೆಟ್ಟಿಲೇರಿದ್ದರು. ಇಬ್ಬರನ್ನೂ ಸಮಾಧಾನಪಡಿಸಿದ್ದ ಪೊಲೀಸರು, ಬುದ್ಧಿವಾದ ಹೇಳಿ ಕಳುಹಿಸಿದ್ದರು. ಮಂಗಳವಾರ ರಾತ್ರಿ ಇಬ್ಬರೂ ಪುನಃ ಒಂದೆಡೆ ಸೇರಿದ್ದರು. ಕುಡಿತ ಅಮಲಿನಲ್ಲಿದ್ದ ಅವರಿಬ್ಬರ ನಡುವೆ ಗಲಾಟೆ ಶುರುವಾಗಿತ್ತು. ಇದೇ ಸಂದರ್ಭದಲ್ಲೇ ಬಸವರಾಜ್ ಅವರನ್ನು ಕತ್ತು ಕೊಯ್ದು ಕೊಲೆ ಮಾಡಲಾಗಿದೆ’ ಎಂದು ತಿಳಿಸಿದರು.

ಕುದುರೆ ಓಟ, ಕ್ರಿಕೆಟ್ ಬೆಟ್ಟಿಂಗ್: ₹ 1.53 ಲಕ್ಷ ಜಪ್ತಿ

ಬೆಂಗಳೂರು: ಕುದುರೆ ಓಟ ಹಾಗೂ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ₹ 1.53 ಲಕ್ಷ ನಗದು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ.

‘ಜ್ಞಾನಭಾರತಿ ಹಾಗೂ ಯಲಹಂಕ ನ್ಯೂ ಟೌನ್ ಠಾಣೆಗಳ ವ್ಯಾಪ್ತಿಯಲ್ಲಿ ಪ್ರತ್ಯೇಕ ಕಾರ್ಯಾಚರಣೆ ನಡೆಸಲಾಗಿದೆ. ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಇಬ್ಬರನ್ನು ಬಂಧಿಸಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಕುದುರೆ ಓಟದ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿ, ವಾಟ್ಸ್‌ಆ್ಯಪ್ ಗ್ರೂಪ್ ಮಾಡಿಕೊಂಡಿದ್ದ. ಮರಿಯಪ್ಪನಪಾಳ್ಯ ಬಸ್ ತಂಗುದಾಣ ಬಳಿ ಸುತ್ತಾಡುತ್ತಿದ್ದ ಈತ, ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದ. ಇನ್ನೊಬ್ಬ ಆರೋಪಿ, ಯಲಹಂಕ ನ್ಯೂ ಟೌನ್‌ನ ಪಾದಚಾರಿ ಮಾರ್ಗಗಳಲ್ಲಿ ಓಡಾಡಿ ಕ್ರಿಕೆಟ್ ಪಂದ್ಯಗಳ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಜನರಿಂದ ಹಣ ಪಡೆಯುತ್ತಿದ್ದ’ ಎಂದು ತಿಳಿಸಿದರು.

ದರೋಡೆಗೆ ಸಂಚು: 6 ಮಂದಿ ಬಂಧನ

ಬೆಂಗಳೂರು: ವಿವೇಕನಗರ 1ನೇ ಮುಖ್ಯರಸ್ತೆಯ ಅಂಚೆ ಕಚೇರಿ ಬಳಿ ಸಾರ್ವಜನಿಕರನ್ನು ಅಡ್ಡಗಟ್ಟಿ ದರೋಡೆಗೆ ಸಂಚು ರೂಪಿಸಿದ್ದ ಆರೋಪದಡಿ ಆರು ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಡಿ. 5ರಂದು ಆರೋಪಿಗಳನ್ನು ನೋಡಿದ್ದ ಸ್ಥಳೀಯರೊಬ್ಬರು ಮಾಹಿತಿ ನೀಡಿದ್ದರು. ಕಾರ್ಯಾಚರಣೆ ನಡೆಸಿ ಎರಡು ಕತ್ತಿಗಳು, ಮಚ್ಚು, ಚಾಕು ಹಾಗೂ ಇತರೆ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಚಿಲುಮೆ ಪ್ರಕರಣ: ಹೈಕೋರ್ಟ್ ಸ್ಪಷ್ಟನೆ

‘ಶ್ರೀನಿವಾಸ್ ಹುದ್ದೆಗೆ ಅನ್ಯ ನೇಮಕ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಮತದಾರರ ಮಾಹಿತಿಯನ್ನು ಅಕ್ರಮವಾಗಿ ಸಂಗ್ರಹಿಸಿ ದುರುಪಯೋಗ ಮಾಡಿಕೊಳ್ಳಲಾಗಿದೆ ಎಂಬ ಆರೋಪದಡಿ ಅಮಾನತುಗೊಂಡಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಕೆ.ಶ್ರೀನಿವಾಸ್ ಅವರ ಹುದ್ದೆಗೆ ಬೇರೊಬ್ಬರನ್ನು ನೇಮಿಸುವಂತಿಲ್ಲ ಎಂಬ ಆದೇಶ ಮುಂದುವರಿಯಲಿದೆ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಕೆ.ಶ್ರೀನಿವಾಸ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ಮತ್ತು ಪಿ.ಎನ್. ದೇಸಾಯಿ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ, ‘ಅಮಾನತು ಆದೇಶಕ್ಕೆ ತಡೆ ನೀಡಬೇಕು’ ಎಂಬ ಅರ್ಜಿದಾರರ ಕೋರಿಕೆಯನ್ನು ಪುರಸ್ಕರಿಸಲು ನಿರಾಕರಿಸಿತು.

ವಿಚಾರಣೆ ವೇಳೆ ಕೆ. ಶ್ರೀನಿವಾಸ್ ಪರ ಹಾಜರಿದ್ದ ಹಿರಿಯ ವಕೀಲ ಪಿ. ಎಸ್. ರಾಜಗೋಪಾಲ್, ‘ಅರ್ಜಿದಾರರು ಪ್ರಕರಣದಲ್ಲಿ ಯಾವುದೇ ರೀತಿಯಲ್ಲೂ ಭಾಗಿಯಾಗಿಲ್ಲ. ಆದರೂ, ಕೇಂದ್ರ ಚುನಾವಣಾ ಆಯೋಗವು ಅಮಾನತಿಗೆ ಶಿಫಾರಸು ಮಾಡಿದೆ’ ಎಂದು ಬಲವಾಗಿ ಆಕ್ಷೇಪಿಸಿದರು.

ಕೇಂದ್ರ ಚುನಾವಣಾ ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ಕೆ.ಎನ್. ಫಣೀಂದ್ರ, ‘ಲಭ್ಯ ದಾಖಲೆಗಳು ಹಗರಣವನ್ನು ಪುಷ್ಟೀಕರಿಸುವಂತಿದ್ದ ಕಾರಣ ಶ್ರೀನಿವಾಸ್ ಅವರನ್ನು ಅಮಾನತು ಮಾಡಲು ಆದೇಶಿಸಲಾಗಿದೆ. ತನಿಖೆ ಪ್ರಗತಿಯಲ್ಲಿದ್ದು, ಈ ಸಂದರ್ಭದಲ್ಲಿ ಅಮಾನತು ಆದೇಶಕ್ಕೆ ತಡೆ ನೀಡಬಾರದು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಚುನಾವಣಾ ಪ್ರಕ್ರಿಯೆ ಮುಂದುವರಿಸುವ ನಿಟ್ಟಿನಲ್ಲಿ, ಆಯೋಗವು ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಹುದ್ದೆಗೆ ಇಬ್ಬರು ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಬಹುದಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ತನಿಖಾಧಿಕಾರಿ ಗುರುವಾರ ನ್ಯಾಯಾಲಯಕ್ಕೆ ಸಲ್ಲಿಸಬೇಕು. ಗುರುವಾರ (ಡಿ.8) ಮಧ್ಯಾಹ್ನ ಚೇಂಬರ್‌ನಲ್ಲೇ ವಿಚಾರಣೆ ನಡೆಸಲಾಗುವುದು’ ಎಂದು ವಿಚಾರಣೆ ಮುಂದೂಡಿತು.

ರಂಗಪ್ಪ ಹಾಜರು, ಶ್ರೀನಿವಾಸ್ ಗೈರು

ಬೆಂಗಳೂರು: ಚಿಲುಮೆ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣದ ವಿಚಾರಣೆಗಾಗಿ ಐಎಎಸ್ ಅಧಿಕಾರಿ ಎಸ್. ರಂಗಪ್ಪ ಅವರು ಹಲಸೂರು ಗೇಟ್ ಪೊಲೀಸರ ಎದುರು ಬುಧವಾರ ಹಾಜರಾದರು. ಇನ್ನೊಬ್ಬ ಐಎಎಸ್ ಅಧಿಕಾರಿ ಕೆ. ಶ್ರೀನಿವಾಸ್ ವಿಚಾರಣೆಗೆ ಗೈರಾದರು.

ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಆರೋಪದಡಿ ಚಿಲುಮೆ ಸಂಸ್ಥೆ ವಿರುದ್ಧ ಪ್ರಕರಣ ದಾಖಲಾಗಿತ್ತು. ಸಂಸ್ಥೆಯ ಸಂಸ್ಥಾಪಕ ರವಿಕುಮಾರ್, ಬಿಬಿಎಂಪಿ ಅಧಿಕಾರಿಗಳು ಸೇರಿದಂತೆ 15 ಆರೋಪಿಗಳನ್ನು ಬಂಧಿಸಲಾಗಿತ್ತು. ಆರೋಪಿಗಳು ನೀಡಿದ್ದ ಹೇಳಿಕೆ ಆಧರಿಸಿ, ರಂಗಪ್ಪ ಹಾಗೂ ಶ್ರೀನಿವಾಸ್ ಅವರಿಗೂ ಪೊಲೀಸರು ನೋಟಿಸ್ ನೀಡಿದ್ದರು.

‘ಶ್ರೀನಿವಾಸ್ ಹಾಗೂ ರಂಗಪ್ಪ ಅವರನ್ನು ಒಂದು ಬಾರಿ ವಿಚಾರಣೆ ಮಾಡಿ ಹೇಳಿಕೆ ಪಡೆಯಲಾಗಿತ್ತು. ಎರಡನೇ ಬಾರಿ ನೋಟಿಸ್ ನೀಡಿ ವಿಚಾರಣೆಗೆ ಕರೆಯಲಾಗಿತ್ತು. ರಂಗಪ್ಪ ಮಾತ್ರ ಬುಧವಾರ ಮಧ್ಯಾಹ್ನ ವಿಚಾರಣೆಗೆ ಬಂದು ಹೋಗಿದ್ದಾರೆ. ಶ್ರೀನಿವಾಸ್, ವೈಯಕ್ತಿಕ ಕಾರಣಗಳನ್ನು ನೀಡಿ ಗೈರಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸುವಂತೆ ರಂಗಪ್ಪ ಅವರಿಗೆ ಸೂಚಿಸಲಾಗಿತ್ತು. ಆದರೆ, ಅವರು ದಾಖಲೆ ನೀಡಿಲ್ಲ. ‘ದಾಖಲೆಗಳು ಕಚೇರಿಯಲ್ಲಿವೆ. ಸದ್ಯ ನಾನು ಅಮಾನತ್ತಾಗಿದ್ದೇನೆ. ಕಚೇರಿಗೆ ಹೋಗಲು ಸಾಧ್ಯವಿಲ್ಲ’ ಎಂಬುದಾಗಿ ರಂಗಪ್ಪ ಹೇಳುತ್ತಿದ್ದಾರೆ. ಕಾಲಾವಕಾಶ ನೀಡಿ ಅವರನ್ನು ವಾಪಸ್ ಕಳುಹಿಸಲಾಗಿದೆ. ಶ್ರೀನಿವಾಸ್ ಅವರಿಗೆ ಮತ್ತೊಮ್ಮೆ ನೋಟಿಸ್ ನೀಡಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಒಳ ಉಡುಪಿನಲ್ಲಿ ಬಚ್ಚಿಟ್ಟಿದ್ದ 1,147 ಗ್ರಾಂ ಚಿನ್ನ ಜಪ್ತಿ

ಬೆಂಗಳೂರು: ಒಳ ಉಡುಪಿನಲ್ಲಿ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ 1,147 ಗ್ರಾಂ ಚಿನ್ನವನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.


ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕನಿಂದ ಜಪ್ತಿ ಮಾಡಲಾದ ಒಳ ಉಡುಪು ಹಾಗೂ ಚಿನ್ನ

‘ಡಬ್ಲ್ಯುವೈ 281 ವಿಮಾನದಲ್ಲಿ ಮಸ್ಕತ್‌ನಿಂದ ನಗರದ ನಿಲ್ದಾಣಕ್ಕೆ ಡಿ. 5ರಂದು ಬಂದಿಳಿದಿದ್ದ ಪ್ರಯಾಣಿಕ, ಚಿನ್ನ ಅಕ್ರಮವಾಗಿ ಸಾಗಿಸುತ್ತಿದ್ದ. ಈತನನ್ನು ಬಂಧಿಸಿ, ತನಿಖೆ ಮುಂದುವರಿಸಲಾಗಿದೆ’ ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

‘ಲೋಹ ಶೋಧಕದಲ್ಲಿ ಪರಿಶೀಲನೆ ನಡೆಸಿದಾಗ, ಪ್ರಯಾಣಿಕನ ಬಳಿ ಚಿನ್ನವಿರುವ ಸುಳಿವು ಸಿಕ್ಕಿತ್ತು. ಪ್ರಯಾಣಿಕ ಧರಿಸಿದ್ದ ಬಟ್ಟೆ ಹಾಗೂ ಬ್ಯಾಗ್ ಪರಿಶೀಲಿಸಿದರೂ ಚಿನ್ನ ಪತ್ತೆಯಾಗಿರಲಿಲ್ಲ. ಕೊನೆಯದಾಗಿ, ವಿಶೇಷ ಕೊಠಡಿಗೆ ಕರೆದೊಯ್ದು ಒಳ ಉಡುಪು ಬಿಚ್ಚಿಸಲಾಗಿತ್ತು.’ ‘ಟೇಪ್‌ನಿಂದ ಸುತ್ತಿದ್ದ ಪೊಟ್ಟಣವೊಂದು ಒಳ ಉಡುಪಿನಲ್ಲಿ ಪತ್ತೆಯಾಗಿತ್ತು. ಅದನ್ನು ಬಿಚ್ಚಿ ನೋಡಿದಾಗಲೇ, ಪೇಸ್ಟ್ ರೂಪದಲ್ಲಿದ್ದ ಚಿನ್ನವಿತ್ತು’ ಎಂದು ತಿಳಿಸಿವೆ.

‘ಬಂಧಿತ ಪ್ರಯಾಣಿಕ ಎಲ್ಲಿಂದ ಚಿನ್ನ ತಂದಿದ್ದ? ಎಲ್ಲಿಗೆ ಸಾಗಿಸುತ್ತಿದ್ದ? ಈತನ ಕೃತ್ಯದಲ್ಲಿ ಬೇರೆ ಯಾರೆಲ್ಲ ಭಾಗಿಯಾಗಿದ್ದರೆಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

₹9 ಲಕ್ಷ ಮೌಲ್ಯದ 27 ಮೊಬೈಲ್ ಜಪ್ತಿ



ಸಿಟಿ ಮಾರ್ಕೆಟ್ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಮೊಬೈಲ್‌ಗಳು

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಸುತ್ತಾಡಿ ಮೊಬೈಲ್ ಕಳ್ಳತನ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಟಿ ಮಾರ್ಕೆಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಶಿವಮೊಗ್ಗ ಜಿಲ್ಲೆ ಭದ್ರಾವತಿ ಹೊಸಮನೆಯ ರಾಘವೇಂದ್ರ (27), ಕಿರಣ್ (28), ಶೌಕತ್ (28) ಹಾಗೂ ಬೆಂಗಳೂರು ಬನಶಂಕರಿ ಸರಬಂಡೆಪಾಳ್ಯದ ಬಲರಾಮ್ (38) ಬಂಧಿತರು. ಇವರಿಂದ ₹ 9 ಲಕ್ಷ ಮೌಲ್ಯದ 27 ಮೊಬೈಲ್‌ಗಳು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಜಬೀವುಲ್ಲಾ ಎಂಬುವರು ಡಿ. 4ರಂದು ಮಾರುಕಟ್ಟೆಗೆ ಹೋಗಿದ್ದರು. ಎಂ.ಡಿ. ವೃತ್ತದ ಬಳಿ ಸುತ್ತಾಡಿ ತರಕಾರಿ ಖರೀದಿಸುತ್ತಿದ್ದರು. ಅದೇ ಸಂದರ್ಭದಲ್ಲೇ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಜಬೀವುಲ್ಲಾ ಅವರ ಮೊಬೈಲ್ ಕದ್ದುಕೊಂಡು ಹೋಗಿದ್ದರು. ಈ ಸಂಬಂಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.’

‘ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ತನಿಖೆ ನಡೆಸಿದ್ದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿಗಳು, ಮೊಬೈಲ್ ಕಳ್ಳತನ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದರು. ಕದ್ದ ಮೊಬೈಲ್‌ಗಳನ್ನು ಮಾರಿ ಐಷಾರಾಮಿ ಜೀವನ ನಡೆಸುತ್ತಿದ್ದರು. ಬೆಂಗಳೂರು ಮಾತ್ರವಲ್ಲದೇ ಹಲವು ನಗರಗಳಲ್ಲೂ ಮೊಬೈಲ್ ಕಳ್ಳತನ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದರು.



ಶಾಬ್ದಿಕ ಸಂವಹನವಾಗಲೀ ಅಶಾಬ್ದಿಕವಾದ ಸಂಜ್ಞಾರೂಪಿ ಸಂವಹನವಾಗಲೀ ಬಯಸಿದ ರೀತಿಯಲ್ಲಿ ಹಾಗೂ ಅದಕ್ಕೆ ವಿರುದ್ಧ ಸಂದೇಶ ಕೊಡದ ರೀತಿಯಲ್ಲಿ ಸಂವಹನಗೊಳ್ಳಬೇಕು. ಇಲ್ಲದಿದ್ದರೆ ಪರಿಣಾಮ ನಿರೀಕ್ಷಿತ ರೀತಿ ಇರಲಾರದು.

ಸಂವಹನವೇ ಮುಳುವಾಗದಿರಲಿ!

ಪರೀಕ್ಷೆಗಳಲ್ಲಿ ಸಂವಹನ ಕೌಶಲ ಭಾಗ–8

ಡಾ. ನಿರಂಜನ ವಾನಳ್ಳಿ

ಲಿಖಿತ ಪರೀಕ್ಷೆಗಳು, ಮೌಖಿಕ ಪರೀಕ್ಷೆಗಳಲ್ಲೂ ಒಟ್ಟಾರೆ ಎಲ್ಲಾ ಸಂವಹನದಲ್ಲೂ ಮುಖ್ಯವಾಗುವ ವಿಷಯ ನೀವು ಏನು ಅಂದು ಕೊಂಡಿದ್ದೀರೋ ಅದನ್ನು ಹೇಳಲು ಸಾಧ್ಯವಾಯಿತೋ ಇಲ್ಲವೋ ಎಂಬುದು. ಕೆಲವು ಸಾರಿ ನಾವು ಆಡಿದ ಮಾತಿಗೆ ವಿಪರೀತ ಅರ್ಥ ಬಂದುಬಿಡುತ್ತದೆ. ಆಗ ಅಚಾನಕ್ ತೊಂದರೆಗೆ ಸಿಲುಕಿಕೊಂಡು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಬರವಣಿಗೆಯಲ್ಲೂ ಇದು ಆಗಬಹುದು. 'ನಿನ್ನಷ್ಟು ಬುದ್ಧಿವಂತರು ಯಾರೂ ಇರಲಿಕ್ಕಿಲ್ಲ ಬಿಡು' ಎಂಬ ಒಂದು ವಾಕ್ಯ ಮೆಚ್ಚುಗೆಯಾಗಿಯೂ ವ್ಯಂಗ್ಯವಾಗಿಯೂ ಕಾಣಲು ಸಾಧ್ಯ. ಅದು ಸ್ವೀಕರಿಸುವವರ ಮೇಲೆ ಹೋಗುತ್ತದೆ. ಆದರೆ ಸಂವಹನದ ಮೂಲ ನಾವೇ ಆಗಿರುವುದರಿಂದ ಪರಿಣಾಮಕ್ಕೆ ನಾವೇ ಹೊಣೆಗಾರರಾಗಿರಬೇಕಾಗುತ್ತದೆ. ಅಂದರೆ ಶಾಬ್ದಿಕ ಸಂವಹನವಾಗಲೀ ಅಶಾಬ್ದಿಕವಾದ ಸಂಜ್ಞಾರೂಪಿ ಸಂವಹನವಾಗಲೀ ಸಂವಹನಕಾರರು ಎಚ್ಚರದಿಂದ ಗಮನಿಸಬೇಕಾದುದು, ತಮ್ಮ ಸಂವಹನ, ಬಯಸಿದ ರೀತಿಯಲ್ಲಿ ಹಾಗೂ ಅದಕ್ಕೆ ವಿರುದ್ಧ ಸಂದೇಶ ಕೊಡದ ರೀತಿಯಲ್ಲಿ ಸಂವಹನಗೊಳ್ಳಬೇಕು.

ಎಷ್ಟೋ ಸಾರಿ ನಾವು ಬಯಸದ ಅರ್ಥವನ್ನು ನಮ್ಮ ಸಂದೇಶ ನೀಡಬಹುದು. ಹೆಚ್ಚಾಗಿ ಅಶಾಬ್ದಿಕ ಸಂವಹನದಲ್ಲಿ ಇದಾಗುತ್ತದೆ. ಸಂದರ್ಶನಗಳಲ್ಲಿ ಹೀಗೆ ಆಗುವ ಸಾಧ್ಯತೆ ಹೆಚ್ಚು. ನೀವು ಹೇಳುತ್ತಿರುವುದು ಒಂದು ಹಾಗೂ ನಿಮ್ಮ ಮುಖದಲ್ಲಿ ವ್ಯಕ್ತವಾಗುತ್ತಿರುವ ಭಾವ ಇನ್ನೊಂದು ಆದರೆ, ಅಂಥ ಸಂದರ್ಭದಲ್ಲಿ ಅಶಾಬ್ದಿಕ ಸಂವಹನವೇ ಹೆಚ್ಚು ವಿಶ್ವಾಸಾರ್ಹವೆನಿಸುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಸಂದರ್ಶನಗಳಲ್ಲಿ ನಿಮ್ಮ ಉತ್ತರಕ್ಕೂ ಹಾವಭಾವಕ್ಕೂ ತಾಳಮೇಳವಿರದಿದ್ದರೆ ಸಂದರ್ಶಕರಿಗೆ ನಿಮ್ಮ ಮುಖಚರ್ಯೆಯೇ ಹೆಚ್ಚು ವಿಶ್ವಾಸಾರ್ಹವಾಗಿ ಕಾಣುತ್ತದೆ.

ಸಂವಹನದ ಸಾಧ್ಯತೆಗಳನ್ನು ಅರಿತ ಕೆಲವು ಬುದ್ಧಿವಂತರು ಒಳ್ಳೆಯ ಸಂವಹನ ತಮ್ಮ ಎಲ್ಲಾ ನ್ಯೂನತೆಗಳನ್ನೂ ಮರೆಸಬಲ್ಲದು ಎಂದು ಭಾವಿಸುತ್ತಾರೆ. ಆದರೆ, ಸಂವಹನದ ಮೇಲೆ ಅತಿಯಾದ ಅವಲಂಬನೆ ಕೂಡಾ ಒಳ್ಳೆಯದಲ್ಲ. ಮೂಲತಃ ನಿಮ್ಮಲ್ಲಿ ಪ್ರಶ್ನೆಗಳಿಗೆ ಸರಿಯಾದ ಉತ್ತರವಿದ್ದರೆ ಸಂವಹನವು ಈ ಸರಿಯುತ್ತರಗಳನ್ನು ಯುಕ್ತರೀತಿಯಲ್ಲಿ ಪರೀಕ್ಷಕರಿಗೆ ತಲುಪಿಸುವ ಕೆಲಸ ಮಾಡಬಹುದು. ನಿಮ್ಮ ಉತ್ತರ ತಪ್ಪಾಗಿದ್ದರೆ ಒಳ್ಳೆಯ ಸಂವಹನ ತಪ್ಪನ್ನೇ ಎತ್ತಿ ತೋರುತ್ತದೆ!

ಕೆಲವು ಸಾರಿ ವಿದ್ಯಾರ್ಥಿಗಳು ಪರೀಕ್ಷಕರು ಓದಲು ಸಾಧ್ಯವೇ ಆಗಬಾರದು ಎಂಬ ರೀತಿಯ ಅಕ್ಷರಗಳನ್ನು ಬರೆಯುತ್ತಾರೆ. ಉತ್ತರಪತ್ರಿಕೆಯನ್ನು ನೋಡಿದಾಗಲೇ ಅರ್ಥವಾಗುತ್ತದೆ, ಇದು ಅರ್ಥವಾಗಬಾರದು ಅಂತಲೇ ಬರೆದ ಉತ್ತರ ಎಂಬುದಾಗಿ! ಅಂಥ ಉತ್ತರಗಳ ಒಂದು ಒಳ್ಳೆಯ ಅಂಶವೆಂದರೆ ನೀವು ಏನು ಬರೆದಿದ್ದೀರೆಂದು ಪರೀಕ್ಷಕರಿಗೆ ಓದಲು ಸಾಧ್ಯವಾಗದೇ ಅಂದಾಜಿನ ಮೇಲೆ ಅಂಕಹಾಕಬೇಕಾಗುತ್ತದೆ! ಬದಲಾಗಿ ನಿಮ್ಮ ಅಕ್ಷರಗಳು ಮುದ್ದಾಗಿದ್ದಾಗ ನೀವು ತಪ್ಪು ಬರೆದದ್ದು ಕೂಡಾ ಎದ್ದು ಕಾಣುತ್ತದೆ. ಆಗ ಅಂದಾಜಿನ ಮೇಲೆ ಅಂಕ ಹಾಕುವ ಸಾಧ್ಯತೆಯೇ ಇರುವುದಿಲ್ಲ. ಉತ್ತರ ಸರಿಯಾಗಿದ್ದರೆ ಒಂದೋ ನಿಮಗೆ ಪೂರ್ಣಾಂಕ ಬರುತ್ತದೆ ಅಥವಾ ಉತ್ತರ ಅಸಂಬದ್ಧವೆಂದು ದೃಢವಾದರೆ ಸೊನ್ನೆಯೇ ಗತಿಯಾಗುತ್ತದೆ. ನಿಮ್ಮ ಹೂರಣ ತಪ್ಪಾಗಿದ್ದಾಗ ಒಳ್ಳೆಯ ಸಂವಹನವೇ ಕೈಕೊಡುವ ಸಾಧ್ಯತೆಯೂ ಪರೀಕ್ಷೆಗಳಲ್ಲಿರುವುದರ ಬಗ್ಗೆ ಎಚ್ಚರಿಸಿದೆ ಅಷ್ಟೇ.

ಅಂದರೆ ಒಳ್ಳೆಯ ಸಂವಹನ ನಮ್ಮ ಎಲ್ಲಾ ತಪ್ಪುಗಳಿಗೂ ಔಷಧವೆಂದು ಭಾವಿಸಲಾಗದು. ಪರೀಕ್ಷೆಗಳಲ್ಲಿ ನಮ್ಮ ಅಜ್ಞಾನವನ್ನು ಒಳ್ಳೆಯ ಸಂವಹನ ಮುಚ್ಚಿಹಾಕಲಾರದು. ಬದಲಾಗಿ ನಿಮಗೆ ಉತ್ತರ ಗೊತ್ತಿರದಿದ್ದರೆ ಅಥವಾ ಗೊತ್ತಿರುವ ಉತ್ತರ ತಪ್ಪಾದರೆ ಸಂವಹನವೇ ಮುಳುವಾಗುವ ಸಾಧ್ಯತೆಯಿರುತ್ತದೆ!

ನಿಮ್ಮ ಸಂವಹನ ನಿಮ್ಮನ್ನು ಗೆಲ್ಲಿಸಬೇಕು. ಅದಕ್ಕೆ ಮೂಲತಃ ನಿಮ್ಮ ಜ್ಞಾನದ ಮಟ್ಟ ಎತ್ತರದಲ್ಲಿ ಬೇಕು, ಅದಕ್ಕೆ ಪೂರಕ ಸಂವಹನವಿರಬೇಕು. ಒಂದಿದ್ದು ಇನ್ನೊಂದು ಇಲ್ಲದಿದ್ದರೆ ಪರಿಣಾಮ ನಿರೀಕ್ಷಿತ ರೀತಿ ಇರಲಾರದು!

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

ಬಹು ಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ, ಕೆಪಿಎಸ್‌ಸಿ, ಕೆಎಸ್‌ಆರ್‌ಪಿ ಸೇರಿದಂತೆ ಮುಂದೆ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆಯ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ಕೊಡಲಾಗಿದೆ.

ಸಾಮಾನ್ಯ ಜ್ಞಾನ

1. ಈ ಕೆಳಗಿನವರಲ್ಲಿ ಕೆಳದಿ ರಾಜ್ಯದ ಸ್ಥಾಪಕರು ಯಾರು ?

ಎ. ಚೌಡಪ್ಪ ನಾಯಕ
ಬಿ. ಸದಾಶಿವ ನಾಯಕ
ಸಿ. ಸಂಕಣ್ಣ ನಾಯಕ
ಡಿ. ಶಿವಪ್ಪ ನಾಯಕ

ಉತ್ತರ: ಎ

2. ಈ ಕೆಳಗಿನ ಯಾವ ಕೃತಿಯು ಭಾರತದಲ್ಲಿ ಉರ್ದುವಿನಲ್ಲಿ ಬಂದ ಮೊದಲ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ?

ಎ. ಮಿರಾಜ್ ಉಲ್ ಆಷಿಕೀನ್
ಬಿ. ಷಿಕಾರ್ ನಾಮಾ
ಸಿ. ಬಹಮನ್ ನಾಮಾ
ಡಿ. ತಾರೀಖ್ ಎ ಫೆರಿಷ್ಟಾ

ಉತ್ತರ: ಎ

3. ಈ ಹೇಳಿಕೆಗಳನ್ನು ಪರಿಶೀಲಿಸಿರಿ

ಎ. ಕೆಳದಿಯ ಅರಸ ಶಿವಪ್ಪ ನಾಯಕರು ಜಾರಿಗೆ ತಂದ ವ್ಯವಸ್ಥಿತವಾದ ಕಂದಾಯ ವ್ಯವಸ್ಥೆಯನ್ನು 'ಶಿಸ್ತು' ಎಂದು ಕರೆಯಲಾಗುತ್ತದೆ.
ಬಿ. ಶಿಸ್ತು ಪದ್ಧತಿಯು ಅಕ್ಬರ್ ಆಳ್ವಿಕೆಯಲ್ಲಿನ 'ಜ್ಯಬ್ತಿ'ಯನ್ನು ಹೋಲುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

4. ಈ ಕೆಳಗಿನವರಲ್ಲಿ ನವಕೋಟಿ ನಾರಾಯಣ ಎಂದು ಹೆಸರುವಾಸಿಯಾದವರು ಯಾರು ?

ಎ. ಚಿಕ್ಕದೇವರಾಜ ಒಡೆಯರ್
ಬಿ. ಚಾಮರಾಜ ಒಡೆಯರ್
ಸಿ. ನರಸರಾಜ ಒಡೆಯರ್
ಡಿ. ಯದುರಾಯ

ಉತ್ತರ: ಎ

5. ಈ ಕೆಳಗಿನ ಯಾವ ಅಂಶಗಳು ಮಾರ್ಕ್ ಕಬ್ಬನ್ ನ ಸಾಧನೆಗಳಾಗಿ ಗುರುತಿಸಿಕೊಂಡಿದೆ ?

ಎ. ಮೊದಲ ಬಾರಿಗೆ ಸಾರ್ವಜನಿಕ ಔಷಧಾಲಯವನ್ನು ತೆರೆಯಲಾಯಿತು.
ಬಿ. ಮೈಸೂರು ಸಂಸ್ಥಾನದಲ್ಲಿ ಪ್ರತ್ಯೇಕ ಅರಣ್ಯ ಇಲಾಖೆಯನ್ನು ಸ್ಥಾಪಿಸಲಾಯಿತು.
ಸಿ. ಕನ್ನಡ ಭಾಷೆಯು ನ್ಯಾಯಾಂಗ ಭಾಷೆಯಾಗಿ ಬಳಕೆಗೆ ಬಂದಿತು.
ಡಿ. ಪ್ರತ್ಯೇಕ ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಲಾಯಿತು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿರಿ

1. ಎ,ಬಿ ಮತ್ತು ಸಿ ಸರಿಯಾಗಿದೆ.
2. ಬಿ ಮತ್ತು ಡಿ ಸರಿಯಾಗಿದೆ.
3. ಎ,ಬಿ ಮಾತ್ರ ಸರಿಯಾಗಿದೆ.
4. ಎಲ್ಲವೂ ಸರಿಯಾಗಿದೆ.

ಉತ್ತರ. 4

6. ಕರ್ನಾಟಕದಲ್ಲಿ ಸಶಸ್ತ್ರ ದಂಗೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

ಎ. ಕರ್ನಾಟಕದಲ್ಲಿ ಸಶಸ್ತ್ರ ದಂಗೆಯ ಯುಗವು ಧೋಂಡಿಯ ವಾಘ್‌ನೊಂದಿಗೆ ಪ್ರಾರಂಭವಾಯಿತು.
ಬಿ. ಧೋಂಡಿಯ ವಾಘ್ 'ಉಭಯ ಲೋಕಾಧೀಶ್ವರ' ಎಂಬ ಬಿರುದನ್ನು ಗಳಿಸಿಕೊಂಡಿದ್ದನು.
ಸಿ. ಅರ್ಥರ್ ವೆಲ್ಲೆಸ್ಲಿಯು ಈತನನ್ನು 'ನೀಚ ವೈರಿ' ಎಂದು ಬಣ್ಣಿಸಿದ್ದಾನೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿರಿ

1. ಎ ಮತ್ತು ಸಿ ಸರಿಯಾಗಿದೆ.
2. ಬಿ ಮತ್ತು ಸಿ ಸರಿಯಾಗಿದೆ.
3. ಬಿ ಮಾತ್ರ ಸರಿಯಾಗಿದೆ.
4. ಎಲ್ಲವೂ ಸರಿಯಾಗಿದೆ.

ಉತ್ತರ. 4

7. ಎರಡನೇ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು ?

ಎ. ಮದ್ರಾಸ್ ಒಪ್ಪಂದ   ಬಿ. ಮೈಸೂರು ಒಪ್ಪಂದ
ಸಿ. ಸಾಲ್ಬಾಯಿ ಒಪ್ಪಂದ   ಡಿ. ಶ್ರೀರಂಗಪಟ್ಟಣ ಒಪ್ಪಂದ

ಉತ್ತರ: ಬಿ

8. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಬಂದಂತಹ ಸಾಯರ್ ತೆರಿಗೆಯು ಈ ಕೆಳಗಿನ ಯಾವ ವಸ್ತುಗಳ ಮೇಲೆ ವಿಧಿಸುವ ಸುಂಕವಾಗಿತ್ತು?

ಎ. ಸಾಗಣಿಕೆ ಮಾಡುವ ವಸ್ತುಗಳ ಮೇಲೆ ವಿಧಿಸುವ ಸುಂಕ.
ಬಿ. ತಯಾರಿಸಲ್ಪಟ್ಟ ವಸ್ತುಗಳು ಮಾರುಕಟ್ಟೆಗೆ ಬರುವ ಮುನ್ನವೇ ಹಾಕುವ ತೆರಿಗೆ.
ಸಿ. ಸಿದ್ದ ವಸ್ತುಗಳ ಮೇಲೆ ಹಾಕಲಾದ ಮಾರಾಟ ತೆರಿಗೆ.

1. ಎ ಮತ್ತು ಬಿ ಸರಿಯಾಗಿದೆ
2. ಎ ಮತ್ತು ಸಿ ಸರಿಯಾಗಿದೆ.
3. ಎಲ್ಲವೂ ತಪ್ಪಾಗಿದೆ
4. ಎಲ್ಲವೂ ಸರಿಯಾಗಿದೆ.

ಉತ್ತರ: 4

9. ಮೈಸೂರು ಸಂಸ್ಥಾನದಲ್ಲಿ ಒಂದೇ ಗ್ರಾಮ ಅಥವಾ ಹಲವಾರು ಗ್ರಾಮಗಳ ರೈತರು ಒಟ್ಟಾಗಿ ತಮ್ಮ ಕೃಷಿ ಉತ್ಪನ್ನದ ಮೇಲೆ ಕಂದಾಯ ಪಾವತಿಸುವ ಪದ್ದತಿಯಿದ್ದು ಇದನ್ನು ಏನೆಂದು ಕರೆಯಲಾಗುತ್ತಿತ್ತು ?

ಎ. ಪ್ರಜಾಗುತ್ತಿ   ಬಿ. ಒಂಟಿಗತ್ತ
ಸಿ. ಕುಲಗುತ್ತಿ   ಡಿ. ಚಗಾರ್ ಗುತ್ತಿ

ಉತ್ತರ: ಬಿ

10. ಮೈಸೂರು ಸಂಸ್ಥಾನದ ಅರಸರಲ್ಲಿ ಕನ್ನಡ ಭೋಜ ಎಂದು ಖ್ಯಾತರಾದವರು ಯಾರು ?

ಎ. ಮುಮ್ಮಡಿ ಕೃಷ್ಣರಾಜ ಒಡೆಯರ್   ಬಿ.ನಾಲ್ವಡಿ ಕೃಷ್ಣರಾಜ ಒಡೆಯರ್
ಸಿ. ಶ್ರೀ ಕೃಷ್ಣದೇವರಾಯ   ಡಿ. ಚಿಕ್ಕದೇವರಾಜ ಒಡೆಯರ್

ಉತ್ತರ: ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಎಸ್ಸೆಸ್ಸೆಲ್ಸಿ

ಸಮಾಜ ವಿಜ್ಞಾನ

ಪ್ರತಿಯೊಂದು ಪ್ರಶ್ನೆಗೂ ಉತ್ತರಿಸಿ

3) ಭಾರತಕ್ಕೆ ಪರ್ಯಾಯ ಮಾರ್ಗದ(ಜಲ ಮಾರ್ಗದ) ಮೂಲಕ. ಪೋರ್ಚುಗೀಸ್ ನಾವಿಕ ಬಂದುದರಿಂದ ಆದ ಪರಿವರ್ತನೆ ಏನು?

ಉತ್ತರ:- ಭಾರತಕ್ಕೆ ಪರ್ಯಾಯ ಮಾರ್ಗದ(ಜಲ ಮಾರ್ಗದ) ಮೂಲಕ ಪೋರ್ಚುಗೀಸ್ ನಾವಿಕ ಬಂದುದರಿಂದ ಅವರಿಂದ ಪ್ರೇರಣೆಗೊಂಡ ಯುರೋಪಿನ ಡಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದವು. ಈ ಬೆಳವಣಿಗೆಯು ಕಾಲಾನುಕ್ರಮದಲ್ಲಿ ಭಾರತವು ವಸಾಹತು ರಾಷ್ಟ್ರವಾಗಿ ಪರಿವರ್ತನೆಗೊಳ್ಳಬೇಕಾಯಿತು.

ಭಾರತವನ್ನು ವಸಾಹತುವಾಗಿ ಪರಿವರ್ತಿಸಿದ ಯೂರೋಪಿಯನ್ ರಾಷ್ಟ್ರಗಳ ಚರಿತ್ರೆಯಲ್ಲಿಯೂ ಸಹ ನಿರ್ಣಾಯಕ ಬದಲಾವಣೆಗಳಾದವು. ಈ ಪರಿವರ್ತನೆಯನ್ನು ಇತಿಹಾಸದಲ್ಲಿ ನೋಡುವಂತಾಯಿತು.

ಅಥವಾ

ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ' ಈ ಹೇಳಿಕೆಯನ್ನು ಹೇಗೆ ಸಮರ್ಥಿಸುವಿರಿ?

ಉತ್ತರ:- ರಾಮವರ್ಮನ ನಂತರ ತನ್ನ 24ನೇ ವಯಸ್ಸಿನಲ್ಲಿ ಮಾರ್ತಾಂಡ ವರ್ಮ ಪಟ್ಟಕ್ಕೆ ಬಂದನು. ವೈಯನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು 50 ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು. ಮೆಣಸು ಬೆಳೆಯುವ ಪ್ರದೇಶಗಳನ್ನು ತನ್ನ ಕೈವಶ ಮಾಡಿಕೊಂಡನು. ಅದಾಗಲೇ ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸುತ್ತಿದ್ದ ಡಚ್ಚರನ್ನು ಸದೆಬಡಿಯಲು ಅನೇಕ ರಣತಂತ್ರಗಳನ್ನು ಮಾರ್ತಾಂಡ ವರ್ಮನು ಹೆಣೆದನು. ಸುತ್ತಮುತ್ತಲಿನ ಪಾಳೆಗಾರರು ಮತ್ತು ಸಂಸ್ಥಾನಿಕರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಅವರನ್ನು ಡಚ್ಚರ ವಿರುದ್ಧ ನಿಲ್ಲಿಸಿದನು. ಕಾಯಂಕುಳಂ, ಕೊಚ್ಚಿ, ಪುರಕ್ಕಾಡ್ ಮತ್ತು ವಡಕ್ಕುಂಕೂರ್ ಸಂಸ್ಥಾನಗಳ ಜೊತೆಗೂಡಿ ಡಚ್ ಸೇನೆಯು ತಿರುವಾಂಕೂರಿನ ಮೇಲೆ ಆಕ್ರಮಣ ಮಾಡಿದಾಗ ಮಾರ್ತಾಂಡ ವರ್ಮನ ಪಡೆ ಡಚ್ ಕೂಟವನ್ನು ಸೋಲಿಸಿ ನೆಡುಮಂಗಡ ಮತ್ತು ಕೊಟ್ಟಾರಕರ ಎಂಬ ವ್ಯಾಪಾರಿ ಕೇಂದ್ರವನ್ನು ವಶಪಡಿಸಿಕೊಂಡಿತು. ಅಲ್ಲದೆ ಮಾರ್ತಾಂಡ ವರ್ಮನು ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು ಎಂದು ಡಚ್ಚರಿಗೆ ಖಾರವಾಗಿ ಪತ್ರ ಬರೆದನು. 1741ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿ ಕೊಟ್ಟಾರಕರ ಸಂಸ್ಥಾನವನ್ನು ಮುಂದಿಟ್ಟುಕೊಂಡು ತಿರುವಾಂಕೂರಿನ ಮೇಲೆ ಯುದ್ಧವನ್ನು ಸಾರಿತು. ಡಚ್ಚರ ಜೊತೆಗೆ ಸ್ಥಳೀಯ ಸಂಸ್ಥಾನಗಳೂ ಸೇರಿಕೊಂಡಿದ್ದವು. ಆದರೆ ಮಾರ್ತಾಂಡ ವರ್ಮನ ಸೈನ್ಯ ಆ ದಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿತು. ಡಚ್ ಪಡೆಗಳು ಕೊಚ್ಚಿನ್‌ಗೆ ಹಿಂತಿರುಗಿದವು. ಆದರೆ ಡಚ್ಚರು ಸಿಲೋನಿನಿಂದ ಮತ್ತಷ್ಟು ಪಡೆಗಳನ್ನು ಕರೆಸಿಕೊಂಡು ಮಾರ್ತಾಂಡ ವರ್ಮನ ಮೇಲೆ ದಂಡೆತ್ತಿ ಬಂದರು. 1741ರ ಆಗಸ್ಟ್ 10ರಂದು ಕೊಳಚ್ಚಲ್ ಎಂಬಲ್ಲಿ ಮಾರ್ತಾಂಡ ವರ್ಮ ಮತ್ತು ಡಚ್ಚರ ನಡುವೆ ನಾಲ್ಕು ದಿನಗಳ ಕಾಲ ಭೀಕರ ಕದನ ನಡೆಯಿತು. ಅಂತಿಮವಾಗಿ ತಿರುವಾಂಕೂರು ಸೈನ್ಯ ಯುದ್ಧದಲ್ಲಿ ಮೇಲುಗೈ ಸಾಧಿಸಿತು. 24 ಪ್ರಮುಖ ಡಚ್ ಅಧಿಕಾರಿಗಳು ಯುದ್ಧ ಕೈದಿಗಳಾದರು. ಡಚ್ಚರು ಅಪಾರ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಿದರು. ಈ ಯುದ್ಧದ ನಂತರ ಮಾರ್ತಾಂಡ ವರ್ಮ ಸುಮ್ಮನೆ ಕೂರಲಿಲ್ಲ. ಇಡೀ ದಕ್ಷಿಣ ಭಾರತದಿಂದ ಡಚ್ಚರನ್ನು ಕಿತ್ತೊಗೆಯಬೇಕೆಂದು ಪಣತೊಟ್ಟ. ಕೇರಳ ಮತ್ತು ತಮಿಳುನಾಡಿನಲ್ಲಿ ಮೆಣಸಿನ ವ್ಯಾಪಾರದಲ್ಲಿ ಹಕ್ಕನ್ನು ಸ್ಥಾಪಿಸಿದ. ಡಚ್ಚರ ಹಿಡಿತದಲ್ಲಿದ್ದ ಬಂದರುಗಳನ್ನು ಮರಳಿ ಪಡೆದ.

ಅಂತಿಮವಾಗಿ 1753ರ ಆಗಸ್ಟ್ 15ರಂದು ನಡೆದ ಒಪ್ಪಂದದಲ್ಲಿ ಡಚ್ ಪಡೆಗಳು ತಮ್ಮ ಸಂಪೂರ್ಣ ಅಧಿಕಾರವನ್ನು ತಿರುವಾಂಕೂರಿಗೆ ಒಪ್ಪಿಸಿ ಶರಣಾದವು. ಈ ರೀತಿ ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ ಎಂದು ಪ್ರಸಿದ್ಧನಾದ

4) ಹಿಮಾಲಯದ ಮಹತ್ವವೇನು?

ಉತ್ತರ : ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಇದರ ಮಹತ್ವ ಹೀಗಿವೆ

1) ಇವು ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2) ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಹಿಡಿಯುತ್ತವೆ.
3) ನದಿಗಳ ಉಗಮ ಪ್ರದೇಶವಾಗಿವೆ. ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
4) ಇದು ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ.
5) ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ
6) ಪ್ರವಾಸೋದ್ಧಿಮೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಪಡೆದಿದೆ .... ಇತ್ಯಾದಿ

ಅಥವಾ

ಭಾರತದ ವ್ಯವಸಾಯವನ್ನು "ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ" ಎಂದು ಕರೆಯುತ್ತಾರೆ. ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ: ಭಾರತದ ಜನತೆಯ ಪ್ರಧಾನ ಉದ್ಯೋಗವು ವ್ಯವಸಾಯವಾಗಿರುವುದರಿಂದ ನೈಋತ್ಯ ಮಾನ್ಸೂನ್ ಮಾರುತ ಗಳು ತರುವ ಮಳೆಯ ಮೇಲೆ ನಿಂತಿವೆ. ಈ ಮಳೆ ವಿಫಲವಾದರೆ ಬರಗಾಲ ಬರುವುದು. ಅತಿ ಹೆಚ್ಚಾದಾಗ ಪ್ರವಾಹ ಉಂಟಾಗಿ ಪ್ರಾಣ ಹಾನಿ ಮತ್ತು ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ. ಆದ್ದರಿಂದಲೇ ಭಾರತದ ವ್ಯವಸಾಯವನ್ನು "ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ" ಎಂದು ಕರೆಯುತ್ತಾರೆ.

5) ಕಪ್ಪು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:- ಕಪ್ಪು ಮಣ್ಣನ್ನು `ರೇಗೂರ್ ಮಣ್ಣು' ಎಂತಲೂ ಕರೆಯುತ್ತಾರೆ. ಈ ಮಣ್ಣು ಹತ್ತಿ ಬೆಳೆಗೆ ಬಹು ಸೂಕ್ತವಾಗಿರುವುದರಿಂದ `ಹತ್ತಿ ಬೆಳೆಯುವ ಕಪ್ಪು ಮಣ್ಣು' ಎಂತಲೂ ಕರೆಯವರು. ಇದು ಸುಮಾರು 5.46 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುತ್ತದೆ. ಕಪ್ಪು ಮಣ್ಣಿನ ಪ್ರದೇಶವನ್ನು ಡೆಕ್ಕನ್ ಟ್ರ್ಯಾಪ್ ಎಂದು ಸಹ ಕರೆಯುತ್ತಾರೆ. ಈ ಮಣ್ಣು ಅಗ್ನಿ ಶಿಲೆಗಳ ಶಿಥಲೀಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಮಣ್ಣು ಫಲವತ್ತಾಗಿದ್ದರು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಇದು ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಮಣ್ಣು ಕಬ್ಬಿಣ, ಸುಣ್ಣ ಹಾಗೂ ಮೆಗ್ನೇಶಿಯಂ ಕಾರ್ಬೋನೇಟ್‌ಗಳನ್ನು ಅಧಿಕ ಪ್ರಮಾಣದಲ್ಲಿ ಒಳಗೊಂಡಿದೆ. ಇದು ಒಣ ಬೇಸಾಯಕ್ಕೆ ಸೂಕ್ತವಾಗಿದ್ದು ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪ್ಪು, ಎಣ್ಣೆ ಕಾಳು, ನಿಂಬೆ, ದ್ರಾಕ್ಷಿ ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾಗಿವೆ.

ಪಿಯುಸಿ

ಪ್ರಜಾವಾಣಿ ನೋಡಿಯೊ

ಪಿಯುಸಿ ರಸಾಯನವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಗಣಿತವಿಜ್ಞಾನ

11)ಯಾವುದೇ ತ್ರಿಭುಜ ABCಯಲ್ಲಿ $a = b\cos C + c\cos B$ ಎಂದು ತೋರಿಸಿ.

ಪರಿಹಾರ: ಉಕ್ತಿ p : ABC ಒಂದು ತ್ರಿಭುಜ ಹಾಗೂ

ಉಕ್ತಿ $q : a = b\cos C + c\cos B$ ಆಗಿರಲಿ. ತ್ರಿಭುಜ ABCಯಲ್ಲಿ ಶೃಂಗ A ದಿಂದ BCಯ ಮೇಲೆ ADಯನ್ನು ಲಂಬವಾಗಿ ಎಳೆಯಿರಿ (ಅವಶ್ಯವಿದ್ದಲ್ಲಿ BC ಯನ್ನು ವೃದ್ಧಿಸಿ) ಯಾವುದೇ ಒಂದು ತ್ರಿಭುಜವು ಲಘುಕೋನ ತ್ರಿಭುಜ, ವಿಶಾಲಕೋನ ತ್ರಿಭುಜ ಅಥವಾ ಲಂಬಕೋನ ತ್ರಿಭುಜ ಆಗಿರುವುದು ನಮಗೆ ತಿಳಿದ ವಿಷಯ. ಆದುದರಿಂದ p ಉಕ್ತಿಯನ್ನು ನಾವು ಮೂರು ಉಕ್ತಿಗಳಾದ r, s ಮತ್ತು t ಗಳಾಗಿ ವಿಂಗಡಿಸ ಬಹುದಾಗಿದೆ. ಇಲ್ಲಿ.

r : ABC ಯು ವಿಶಾಲಕೋನ ತ್ರಿಭುಜವಾಗಿದ್ದು ಇದರಲ್ಲಿ C ಯು ಲಘುಕೋನವಾಗಿದೆ.


s : ABC ಯು ವಿಶಾಲಕೋನ ತ್ರಿಭುಜವಾಗಿದ್ದು ಇದರಲ್ಲಿ C ಯು ವಿಶಾಲಕೋನವಾಗಿದೆ.

t : ABC ಯು ಲಂಬಕೋನ ತ್ರಿಭುಜವಾಗಿದ್ದು ಇದರಲ್ಲಿ C ಯು ಲಂಬಕೋನವಾಗಿದೆ.

ಆದುದರಿಂದ ಪ್ರಮೇಯವನ್ನು ನಾವು ಮೂರು ಸಂಭವನೀಯ ಪ್ರಕರಣಗಳಿಗೆ ಪ್ರತ್ಯೇಕವಾಗಿ ಸಾಧಿಸುತ್ತೇವೆ.

ಪ್ರಕರಣ (i): ತ್ರಿಭುಜ ABC ಲಘುಕೋನ ತ್ರಿಭುಜ ಇರಲಿ (ಚಿತ್ರ)

ಲಂಬಕೋನ ತ್ರಿಭುಜ ABC



ಯಿಂದ. $\frac{BD}{AB} = \cos B$

ಅಂದರೆ $BD = AB\cos B$

$= C\cos B$

ಲಂಬಕೋನ ತ್ರಿಭುಜ ADC ಯಿಂದ

$\frac{CD}{AC} = \cos C$

ಅಂದರೆ $CD = AC\cos C$


$DC = b\cos C$

ಈಗ $BC = a = BD + DC$

$$a = c\cos B + b\cos C \text{ .... } (1)$$

ಪ್ರಕರಣ (ii): $\angle c$ ವಿಶಾಲ ಕೋನ ಇರಲಿ (ಕೆಳಗಿನ ಚಿತ್ರದಲ್ಲಿರುವಂತೆ)

ಲಂಬಕೋನ ತ್ರಿಭುಜ ABC



ಯಿಂದ. $\frac{BD}{AB} = \cos B$

ಅಂದರೆ $BD = AB\cos B$

$= c\cos B$

ಲಂಬಕೋನ ತ್ರಿಭುಜ ADC ಯಿಂದ

$\frac{CD}{AC} = \cos \underline{|ACD} = \cos(180° - C) = -\cos C$

ಅಂದರೆ $CD = AC\cos C$

$DC = -b\cos C$

ಈಗ $a = BC = BD - CD$

ಅಂದರೆ $a = c\cos B - (-b\cos C)$

$= a\cos B + b\cos C$ .... (2)


ಪ್ರಕರಣ (iii): $\angle c$ ಲಂಬಕೋನ ಇರಲಿ (ಕೆಳಗಿನ ಚಿತ್ರದಲ್ಲಿರುವಂತೆ) ಲಂಬಕೋನ ತ್ರಿಭುಜ ABC ಯಿಂದ

$\frac{BC}{AB} = \cos B$

ಅಂದರೆ $BC = AB\cos B$

$a = c\cos B$

ಹಾಗೂ $b\cos = b\cos 90° = 0$



ಹೀಗಾಗಿ $a = 0 + c\cos B$ ಎಂದು ನಾವು ಬರೆಯಬಹುದು

$a = b\cos c + c\cos B$ .... (3)

(1), (2) ಮತ್ತು (3) ರಿಂದ ನಾವು ಯಾವುದೇ ತ್ರಿಭುಜ ABC ಯಲ್ಲಿ

$a = b\cos C + c\cos B$ ಎಂದು ಪ್ರತಿಪಾದಿಸಿದೆ.

ಪ್ರಕರಣ (i)ರಲ್ಲಿ $r \Rightarrow q$ ಎಂದು ಸಾಧಿಸಿದೆ

ಪ್ರಕರಣ (ii)ರಲ್ಲಿ $s \Rightarrow q$ ಎಂದು ಸಾಧಿಸಿದೆ.

ಹಾಗೂ ಪ್ರಕರಣ (iii)ರಲ್ಲಿ $t \Rightarrow q$ ಎಂದು ಸಾಧಿಸಿದೆ ಇದರಿಂದ

$(r \vee s \vee t) \Rightarrow q$ ಎಂದು ಸಾಧಿಸಿದಂತಾಯಿತು ಅಂದರೆ $p \Rightarrow q$ ಸಾಧಿಸಲ್ಪಟ್ಟಿತು.

12) $\vec{a} = 2\hat{i} + 3\hat{j} + \hat{k}$ **ಆದರೆ $\vec{a}$ ಸದಿಶದ ದಿಕ್ಕಿನಲ್ಲಿರುವ ಏಕಸದಿಶವನ್ನು ಕಂಡುಹಿಡಿಯಿರಿ.**

ಉತ್ತರ:– ಸದಿಶ $\vec{a}$ ದಿಕ್ಕಿನಲ್ಲಿರುವ ಏಕಸದಿಶ $\hat{a}$

$$\hat{a} = \frac{\vec{a}}{|\vec{a}|}$$

$$|\vec{a}| = \sqrt{2^2 + 3^2 + 1^2} = \sqrt{14}$$

ಹಾಗಾಗಿ $\hat{a} = \frac{1}{\sqrt{14}}(2\hat{i} + 3\hat{j} + \hat{k}) = \frac{2}{\sqrt{14}}\hat{i} + \frac{3}{\sqrt{14}}\hat{j} + \frac{1}{\sqrt{14}}\hat{k}$

ಅತಿವೃಷ್ಟಿ ಸಂತ್ರಸ್ತರ ಸೂರಿಗೆ ಅನುದಾನದ ಬರ

ಒಂದನೇ ಪುಟದಿಂದ..

ಪ್ರವಾಹ, ಮಳೆಯಿಂದ ಹಾನಿಯಾದ ಮನೆಗಳ ಪುನರ್‌ನಿರ್ಮಾಣ, ದುರಸ್ತಿಗೆ 2019–20ರಿಂದ 2022–23ರವರೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಹಾಗೂ ಜಿಲ್ಲಾಧಿಕಾರಿಗಳ ಮೂಲಕ ಒಟ್ಟು ₹ 3,580.30 ಕೋಟಿ ವೆಚ್ಚ ಮಾಡಲಾಗಿದೆ. ನಿಗಮಕ್ಕೆ ₹ 300 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆ ಸಮ್ಮತಿ ನೀಡಿದೆ. ಶಿವಮೊಗ್ಗ, ಹಾವೇರಿ ಮತ್ತು ದಾವಣಗೆರೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೂ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಒಪ್ಪಿಗೆ ಸೂಚಿಸಿದೆ. ಶೀಘ್ರದಲ್ಲಿ ಈ ಅನುದಾನ ಬಿಡುಗಡೆ ಮಾಡಲಾಗುವುದು' ಎಂದು ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗದ ಆಯುಕ್ತ ಆರ್. ಮನೋಜ್ ತಿಳಿಸಿದರು.

'ತಕ್ಷಣ ಅನುದಾನ ಬಿಡುಗಡೆಗೆ ಕ್ರಮ'

'ಮಳೆ ಮತ್ತು ಪ್ರವಾಹದಿಂದ ಮನೆ ಕಳೆದುಕೊಂಡವರಿಗೆ ನಮ್ಮ ಸರ್ಕಾರವು ದೇಶದಲ್ಲೇ ಅತ್ಯಧಿಕ ನೆರವು ನೀಡುತ್ತಿದೆ. ಮಾಹಿತಿ ಸಲ್ಲಿಸುವಲ್ಲಿನ ಲೋಪ ಸೇರಿದಂತೆ ತಾಂತ್ರಿಕ ಕಾರಣಗಳಿಂದ ಅನುದಾನ ಬಿಡುಗಡೆ ತಡವಾಗಿರಬಹುದು. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಸರಿಯಾದ ರೀತಿಯಲ್ಲಿ ಮಾಹಿತಿ ಒದಗಿಸಿದರೆ ತಕ್ಷಣವೇ ಅನುದಾನ ಬಿಡುಗಡೆ ಮಾಡಲಾಗವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಜಿಲ್ಲಾಧಿಕಾರಿಗಳ ಬಳಿಯಲ್ಲೂ ಹಣವಿಲ್ಲ

ಪ್ರವಾಹ ಸಂತ್ರಸ್ತರಿಗೆ ಮನೆ ನಿರ್ಮಾಣ, ದುರಸ್ತಿಗೆ ಮೊದಲ ಕಂತಿನ ಅನುದಾನವನ್ನು ಜಿಲ್ಲಾಧಿಕಾರಿ ಕಚೇರಿಗಳಿಂದ ಬಿಡುಗಡೆ ಮಾಡಲಾಗುತ್ತಿದೆ. ಕೆಲವೆಡೆ ಜಿಲ್ಲಾಧಿಕಾರಿಗಳ ಬಳಿಯೂ ಹಣದ ಕೊರತೆ ಎದುರಾಗಿದೆ. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಶಿವಮೊಗ್ಗ, ಹಾವೇರಿ ಮತ್ತು ದಾವಣಗೆರೆ ಜಿಲ್ಲಾಧಿಕಾರಿಗಳು, ತಕ್ಷಣವೇ ಅನುದಾನ ಒದಗಿಸುವಂತೆ ಕೋರಿದ್ದಾರೆ.


ಎಲೆಕ್ಟ್ರಾನಿಕ್ ಸಾಧನಗಳಿಗೆ ಮಿಂಚಿನ ವೇಗ ನೀಡುವ ಚಿಪ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್, ಕಂಪ್ಯೂಟರ್ ಸೇರಿ ಎಲ್ಲ ಬಗೆಯ ಎಲೆಕ್ಟ್ರಾನಿಕ್ ಸಾಧನಗಳು ಮಿಂಚಿನ ವೇಗದಲ್ಲಿ ಕಾರ್ಯ ನಿರ್ವಹಿಸಲು, ಇಂಧನ (ಎನರ್ಜಿ) ಬಳಕೆಯಲ್ಲಿ ಮಿತವ್ಯಯ ಮತ್ತು ಕ್ಷಮತೆ ಸಾಧಿಸುವುದರ ಜೊತೆಗೆ ದತ್ತಾಂಶ ಸಂಗ್ರಹಿಸಿ, ಸ್ವಯಂ ಲೆಕ್ಕಾಚಾರ ಮಾಡಬಲ್ಲ ಸಾಮರ್ಥ್ಯವನ್ನು ಹೊಂದಿರುವ ಪುಟಾಣಿ ಚಿಪ್ ಅಭಿವೃದ್ಧಿಪಡಿಸಲಾಗಿದೆ.

ಸದ್ಯಕ್ಕೆ ಇವೆಲ್ಲ ಕಾರ್ಯಗಳೂ ಪ್ರತ್ಯೇಕವಾಗಿ ನಡೆಯುತ್ತಿವೆ. ಇದರಿಂದ ಅಪಾರ ಪ್ರಮಾಣದ ವಿದ್ಯುತ್ ಬಳಕೆ ಆಗುತ್ತಿದ್ದು, ವೇಗವೂ ಕಡಿಮೆ ಇದೆ. ಈಗ ಅಭಿವೃದ್ಧಿಪಡಿಸಿರುವ ಪುಟಾಣಿ ಚಿಪ್ ಎಲ್ಲ ಕೆಲಸಗಳನ್ನೂ ನಿರ್ವಹಿಸಲಿದ್ದು, ಎಲೆಕ್ಟ್ರಾನಿಕ್ ಸಾಧನಗಳ ಕ್ಷೇತ್ರದಲ್ಲಿ ಕ್ರಾಂತಿಯನ್ನು ಸೃಷ್ಟಿಸಬಲ್ಲದು. ಈ ಚಿಪ್‌ಗೆ 'ಮೆಮ್ರಿಸ್ಟರ್' ಎಂದು ಕರೆಯಲಾಗಿದೆ.

ಜಗತ್ತಿನಲ್ಲಿ ವಿವಿಧ ರೀತಿಯ ಎಲೆಕ್ಟ್ರಾನಿಕ್ ಸಾಧನಗಳು ಅಗಾಧ ಪ್ರಮಾಣದಲ್ಲಿ ಇಂಧನ ಅಥವಾ ವಿದ್ಯುತ್ ಬಳಕೆ ಮಾಡುತ್ತಿದ್ದು, ವಿಶ್ವದೆಲ್ಲೆಡೆ ಇವುಗಳಿಗಾಗಿ ವಿದ್ಯುತ್ ಪೂರೈಕೆ ಮಾಡುವುದೇ ದೊಡ್ಡ ಸಮಸ್ಯೆಯಾಗಿದ್ದು, ಪರ್ಯಾಯಕ್ಕಾಗಿ ಹುಡುಕಾಟ ನಡೆದಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ಭಾರತೀಯ ವಿಜ್ಞಾನ ಸಂಸ್ಥೆಯ 'ನ್ಯಾನೊ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗ'ದ ವಿಜ್ಞಾನಿಗಳು 'ಮೆಮ್ರಿಸ್ಟರ್' ಅಭಿವೃದ್ಧಿಪಡಿಸಿದ್ದಾರೆ.


ಮೆಮ್ರಿಸ್ಟರ್

ಸಾಮಾನ್ಯವಾಗಿ ಎಲೆಕ್ಟ್ರಾನಿಕ್ ಸರ್ಕ್ಯೂಟ್‌ಗಳಲ್ಲಿ ಲೋಹದ ಆಕ್ಸೈಡ್ ಸೆಮಿ ಕಂಡಕ್ಟರ್ ಬಳಸಲಾಗುತ್ತದೆ. ಅವುಗಳ ಬದಲಿಗೆ ಮೆಮ್ರಿಸ್ಟರ್‌ಗಳನ್ನು ಬಳಸಬಹುದು. ಇದರಿಂದಾಗಿ ಇದರ ವೇಗ ಮತ್ತು ಕ್ಷಮತೆ ಹೆಚ್ಚಲು ಕಾರಣವಾಗಿದೆ.

ಜಗತ್ತಿನಲ್ಲಿ ಹೆಚ್ಚು ಬುದ್ಧಿಮತ್ತೆಯುಳ್ಳ ಮತ್ತು ಅತ್ಯಂತ ವೇಗದ ಕಂಪ್ಯೂಟರ್‌ಗಳಿಗೆ ಬೇಡಿಕೆ ಹೆಚ್ಚುತ್ತಿರುವ ಬೆನ್ನಲ್ಲೇ ಮತ್ತು ಮುಂದಿನ ತಲೆಮಾರಿನ ಎಲೆಕ್ಟ್ರಾನಿಕ್ ಸಾಧನಗಳಿಗೆ 'ಮೆಮ್ರಿಸ್ಟರ್'ನ ಅಭಿವೃದ್ಧಿ ಮೈಲಿಗಲ್ಲು ಎನಿಸಿದೆ.

'ಸೂಕ್ಷ್ಮಾತಿ ಸೂಕ್ಷ್ಮ ಕಣಗಳಿಂದ ಕೂಡಿದ ಸರ್ಕ್ಯೂಟ್ (ಮಾಲೆಕ್ಯುಲರ್ ಸರ್ಕ್ಯೂಟ್) ಅನ್ನು ನಾವು ಕಂಡು ಹಿಡಿದಿದ್ದು, ಇದು ಅತ್ಯಂತ ಸಂಕೀರ್ಣ ಕಾರ್ಯಗಳನ್ನು ಗ್ರಹಿಸಿ ತನ್ನಷ್ಟಕ್ಕೇ ನಿರ್ವಹಣೆ ಮಾಡುವ ಗುಣವನ್ನು ಹೊಂದಿದೆ. ಸ್ಮರಣೆಯನ್ನು ಆಧರಿಸಿ ಲೆಕ್ಕವನ್ನೂ ಮಾಡುತ್ತದೆ' ಎಂದು ನ್ಯಾನೊ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರೊಫೆಸರ್ ಸ್ರಿತೋಷ್ ಗೋಸ್ವಾಮಿ ಹೇಳಿದ್ದಾರೆ.

ಮಾಲೆಕ್ಯುಲರ್ ಸರ್ಕ್ಯೂಟ್ ಸೆಮಿ ಕಂಡಕ್ಟರ್ ಎಲೆಕ್ಟ್ರಾನಿಕ್‌ನಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎನ್ನುತ್ತಾರೆ ಇದೇ ವಿಭಾಗದ ಪ್ರೊ.ನವಕಾಂತ್ ಭಟ್.

ವೇಗ 97 ಪಟ್ಟು ಅಧಿಕ

ಇದಕ್ಕೂ ಹಿಂದೆ ಅಭಿವೃದ್ಧಿಪಡಿಸಲಾಗಿದ್ದ ಮೆಮ್ರಿಸ್ಟರ್‌ಗೆ ವೇಗವೂ ಸೇರಿ ಕೆಲವು ಮಿತಿಗಳಿದ್ದವು. ಕಾರ್ಯಾಚರಣೆಗಳನ್ನು ಅನುಕ್ರಮಣಿಕೆಯಲ್ಲಿ ನಡೆಸಬೇಕಾಗುತ್ತಿತ್ತು. ಅದರಿಂದ ಸಾಕಷ್ಟು ಸಮಸ್ಯೆಗಳೂ ಆಗುತ್ತಿದ್ದವು. ಹೊಸದಾಗಿ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿರುವ ಮೆಮ್ರಿಸ್ಟರ್‌ನಲ್ಲಿ ಅಂತಹ ಸಮಸ್ಯೆಗಳು ಇಲ್ಲ. ವಿದ್ಯುತ್ ಕ್ಷಮತೆ 47 ಪಟ್ಟು ಅಧಿಕ, ಕಾರ್ಯಾಚರಣೆ ವೇಗ 97 ಪಟ್ಟು ಅಧಿಕವಾಗಿದೆ ಎಂದು ಸ್ರಿತೋಷ್ ಗೋಸ್ವಾಮಿ ಹೇಳಿದರು.

ಲೋಕಾಯುಕ್ತ ಬಲೆಗೆ ರೈತ ಸಂಘದ ಮುಖಂಡ, ಸರ್ವೇಯರ್

ಚಿಂತಾಮಣಿ: ನಿವೃತ್ತ ಯೋಧರೊಬ್ಬರಿಗೆ ಭೂಮಿ ಮಂಜೂರು ಮಾಡಲು ₹5 ಲಕ್ಷ ಬೇಡಿಕೆ ಇಟ್ಟಿದ್ದ ಸರ್ವೇಯರ್, ಡಿ ಗ್ರೂಪ್ ನೌಕರ ಹಾಗೂ ರೈತ ಸಂಘದ ಮುಖಂಡ ಬುಧವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.


ನಾಗರಾಜ್


ಪ್ರಕಾಶ್

ನಗರದ ಭೂದಾಖಲೆ ಉಪನಿರ್ದೇಶಕರ ಕಚೇರಿಯ ಸರ್ವೇಯರ್ ನಾಗರಾಜ್, ಡಿ ಗ್ರೂಪ್ ನೌಕರ ಪ್ರಕಾಶ್, ರೈತ ಸಂಘದ ಮುಖಂಡ ಕದಿರೇಗೌಡ ಬಂಧಿತರು.

ಆರೋಪಿಗಳು ಮಾಜಿ ಯೋಧನಿಂದ ₹1 ಲಕ್ಷ ಪಡೆಯುತ್ತಿರುವಾಗ ಲೋಕಾಯುಕ್ತ ಡಿವೈಎಸ್ಪಿ ಭೂತೇಗೌಡ, ಇನ್‌ಸ್ಪೆಕ್ಟರ್ ಸಲೀಂ ನದಾಫ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಮೂವರನ್ನು ಬಂಧಿಸಿದ್ದಾರೆ.

ತಾಲ್ಲೂಕಿನ ಉಪ್ಪರಪೇಟೆ ಗ್ರಾ.ಪಂ. ರಾಯಪ್ಪಲ್ಲಿ ಗ್ರಾಮದ ಶಿವಾನಂದ ರೆಡ್ಡಿ 20 ವರ್ಷಗಳಿಂದ ತನಗೆ ಬರಬೇಕಾಗಿದ್ದ ಭೂಮಿ ಮಂಜೂರಾತಿಗಾಗಿ ಹೋರಾಟ ನಡೆಸುತ್ತಿದ್ದಾರೆ.

ತಮಿಳುನಾಡಿನಲ್ಲಿ ಇಂದು ಭಾರಿ ಮಳೆ ಸಾಧ್ಯತೆ

ಚೆನ್ನೈ(ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಬುಧವಾರ ವಾಯುಭಾರ ಕುಸಿತ ಉಂಟಾಗಿದ್ದು, ಇದು ಚಂಡಮಾರುತವಾಗಿ ರೂಪುಗೊಳ್ಳುವುದರಿಂದ ತಮಿಳುನಾಡು, ಪುದುಚೇರಿಯಲ್ಲಿ ಗುರುವಾರದಿಂದ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಅಂದಾಜಿಸಿದೆ. ಆಗ್ನೇಯ ಬಂಗಾಳಕೊಲ್ಲಿಯಲ್ಲಿ ನಿರ್ಮಾಣವಾಗಿದ್ದ ಕಡಿಮೆ ಒತ್ತಡದ ಪ್ರದೇಶವು ವಾಯುಭಾರ ಕುಸಿತವಾಗಿ ಮಾರ್ಪಟ್ಟಿದೆ. ಇದು ಚಂಡಮಾರುತವಾಗಿ ಪರಿವರ್ತನೆಯಾಗಿ ಡಿ.8ರ ಬೆಳಿಗ್ಗೆ ವೇಳೆಗೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ತಿಳಿಸಿದೆ.


ಶೋಭಾಯಾತ್ರೆ ಚಿಕ್ಕಮಗಳೂರಿನಲ್ಲಿ ಬುಧವಾರ ದತ್ತ ಜಯಂತಿ ಅಂಗವಾಗಿ ಜರುಗಿದ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ ಪ್ರಜಾವಾಣಿ ಚಿತ್ರ: ಎ.ಎನ್.ಮೂರ್ತಿ.

ನಟ ಕೃಷ್ಣೋಜಿ ರಾವ್ ನಿಧನ

ಬೆಂಗಳೂರು: 'ಕೆ.ಜಿ.ಎಫ್. ತಾತ' ಎಂದೇ ಖ್ಯಾತಿ ಪಡೆದಿದ್ದ ನಟ ಕೃಷ್ಣೋಜಿ ರಾವ್(72) ಅವರು ಬುಧವಾರ ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ.



ಉಸಿರಾಟದ ತೊಂದರೆ ಹಾಗೂ ರಕ್ತದೊತ್ತಡದ ಸಮಸ್ಯೆಯ ಕಾರಣ ಆರು ದಿನಗಳ ಹಿಂದೆಯೇ ನಗರದ ಸೀತಾ ಸರ್ಕಲ್ ಬಳಿಯ ಖಾಸಗಿ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿತ್ತು. ಮಧ್ಯಾಹ್ನ ಅವರು ಕೊನೆಯುಸಿರೆಳೆದರು. ಗುರುವಾರ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಅಣ್ಣ ನಾಗೇಂದ್ರ ರಾವ್ ತಿಳಿಸಿದ್ದಾರೆ. ಪಾವಗಡದ ವೈ. ಎನ್. ಹೊಸಕೋಟೆ ಮೂಲದ ಕೃಷ್ಣೋಜಿ ಅವರು ಕೆ.ಜಿ.ಎಫ್ ಸೇರಿದಂತೆ ಸುಮಾರು 40 ಸಿನಿಮಾಗಳಲ್ಲಿಅ ನಟಿಸಿದ್ದಾರೆ ಹಾಗೂ ಕೆಲ ಸಿನಿಮಾಗಳಿಗೆ ಸಹಾಯಕ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಅವರು ನಾಯಕನಾಗಿ ನಟಿಸಿರುವ 'ಮುದುಕನ ಲವ್ ಸ್ಟೋರಿ' ಹಾಗೂ 'ನ್ಯಾನೊ ನಾರಾಯಣಪ್ಪ' ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಆಯುಷ್ ಇಲಾಖೆ ಆಯುಕ್ತರಾಗಿ ಮಂಜುನಾಥ್ ವರ್ಗ

ಬೆಂಗಳೂರು: ಐಎಎಸ್ ಅಧಿಕಾರಿ ಮಂಜುನಾಥ್ ಜೆ. ಅವರನ್ನು ಆಯುಷ್ ಇಲಾಖೆ ಆಯುಕ್ತ ಹುದ್ದೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ವರ್ಗಾವಣೆಗೊಂಡಿರುವ ಇತರ ಐಎಎಸ್ ಅಧಿಕಾರಿಗಳು; ಸುಷ್ಮಾ ಗೋಡ್‌ಬೋಲೆ– ಮುಖ್ಯ ಮೌಲ್ಯಮಾಪನ ಅಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ. ಡಾ.ಅರುಂಧತಿ ಚಂದ್ರಶೇಖರ್– ಆಯುಕ್ತೆ, ಖಜಾನೆ ಇಲಾಖೆ. ನಂದಿನಿದೇವಿ– ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ. ಡಾ.ನವೀನ್ ಭಟ್– ಯೋಜನಾ ನಿರ್ದೇಶಕ, ರಾಷ್ಟ್ರೀಯ ಆರೋಗ್ಯ ಮಿಷನ್. ಬಸವರಾಜು ಬಿ.ಎ–ಕುಲಸಚಿವ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ.

ಕರ್ನಾಟಕಕ್ಕೆ ಸೇರಿಸಿ ಎಂದ ಯುವಜನರ ಮೇಲೆ ಮಹಾರಾಷ್ಟ್ರ ಪೊಲೀಸರ ಕೆಂಗಣ್ಣು

ಕನ್ನಡಿಗರ ಹೋರಾಟ ಹತ್ತಿಕ್ಕಲು 'ಧಮ್ಕಿ' ಅಸ್ತ್ರ

• ಸಂತೋಷ ಈ. ಚಿನಗುಡಿ

ಬೆಳಗಾವಿ: ತಮ್ಮ ಊರುಗಳನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು ಹೋರಾಟ ಆರಂಭಿಸಿದ ಮಹಾರಾಷ್ಟ್ರದ ಕನ್ನಡಿಗರ ಧ್ವನಿ ಅಡಗಿಸಲು ಸಾಂಗ್ಲಿ ಜಿಲ್ಲಾಡಳಿತ 'ಫೋನ್ ಎಚ್ಚರಿಕೆ' ಅಸ್ತ್ರ ಬಳಸಿದೆ.

'ಕರ್ನಾಟಕಕ್ಕೆ ಸೇರುವುದಾಗಿ ಯಾರೂ ಹೋರಾಟ ಮಾಡುವಂತಿಲ್ಲ, ಕನ್ನಡ ನಾಡಧ್ವಜ ಪ್ರದರ್ಶಿಸುವಂತಿಲ್ಲ. ಈ ಕೃತ್ಯ ಎಸಗಿದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಜತ್ತ ತಾಲ್ಲೂಕಿನ ಎಲ್ಲ ಗ್ರಾಮ ಪಂಚಾಯಿತಿಗಳಲ್ಲೂ ಪೊಲೀಸ್ ಪಾಟೀಲರ (ಮಹಾರಾಷ್ಟ್ರದಲ್ಲಿ ಗ್ರಾಮ ಮಾಹಿತಿದಾರ ಹುದ್ದೆ) ಮೂಲಕ ಎಚ್ಚರಿಕೆ ನೀಡಲಾಗಿದೆ.

> ಹೋರಾಟ ಕೈಬಿಟ್ಟಿದ್ದೇವೆ. ಬಯಕೆ ಬಿಟ್ಟಿಲ್ಲ. ಬೆಳಗಾವಿ ಅಧಿವೇಶನದ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡುತ್ತೇವೆ
> ಯುವ ಹೋರಾಟಗಾರರು, ಜತ್ತ ತಾಲ್ಲೂಕು

'ಡಿ.4ರಿಂದ ಅನಿರ್ದಿಷ್ಟ ಅವಧಿ ಹೋರಾಟ ಆರಂಭಿಸಲು ಸಿದ್ಧತೆ ಮಾಡಿಕೊಂಡಿದ್ದೆವು. ಈ ಹೋರಾಟದಿಂದ 'ಕೇಸ್' ಎದುರಿಸಬೇಕಾಗುತ್ತದೆ ಎಂದು ಪೊಲೀಸ್ ಪಾಟೀಲರ ಫೋನ್ ಮೂಲಕ ಎಚ್ಚರಿಕೆ ನೀಡಿದ್ದಾರೆ. ನಾವೆಲ್ಲರೂ ಯುವಕರು, ಯುವತಿಯರು ಇದ್ದೇವೆ. ಶಿಕ್ಷಣ, ನೌಕರಿಗೆ ಮುಂದೆ ಸಮಸ್ಯೆ ಮಾಡಬಹುದು ಎಂಬ ಭಯದಿಂದ ಹಿಂದೆ ಸರಿದಿದ್ದೇವೆ' ಎಂದು ಮಹಾರಾಷ್ಟ್ರದ ಕನ್ನಡಿಗರು 'ಪ್ರಜಾವಾಣಿ' ಮುಂದೆ ಅಳಲು ತೋಡಿಕೊಂಡರು.

ಮಹಾರಾಷ್ಟ್ರ ಸರ್ಕಾರಕ್ಕೆ ಬಿಸಿ...: 'ಸಾಂಗ್ಲಿ ಜಿಲ್ಲಾ ತಹಶೀಲ್ದಾರ್ ಕಚೇರಿ, ಜತ್ತ ಪೊಲೀಸ್ ಠಾಣೆಯಿಂದ ನಮಗೆ ಕರೆ ಬಂದಿದೆ. ಕೆಲವರಿಗೆ ಪತ್ರವನ್ನೂ ಕಳಿಸಿದ್ದಾರೆ. ಗಡಿ ಗ್ರಾಮಗಳಲ್ಲಿ ಕನ್ನಡದ ಹೋರಾಟ ನಡೆಸದಂತೆ ತಾಕೀತು ಮಾಡಬೇಕೆಂದು ತಿಳಿಸಲಾಗಿದೆ. ನಾವು ಮಹಾರಾಷ್ಟ್ರ ಸರ್ಕಾರಿ ನೌಕರರಾಗಿದ್ದರಿಂದ ನಮ್ಮ ಕೆಲಸ ಮಾಡಿದ್ದೇವೆ' ಎಂದು ನಾಲ್ವರು ಪೊಲೀಸ್ ಪಾಟೀಲರು ಖುದ್ದಾಗಿ ಮಾಹಿತಿ ನೀಡಿದರು.

ಮೊದಲ ಬಾರಿಗೆ ಜತ್ತ ತಾಲ್ಲೂಕಿನ ಯುವಜನರು ತಮ್ಮನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು ಧ್ವನಿ ಎತ್ತಿದ್ದಾರೆ. ತಿಂಗಳಿಂದ ಜಾಥಾ, ಪ್ರತಿಭಟನೆ ಕೂಡ ಮಾಡಿದ್ದಾರೆ. ಕನ್ನಡ ನಾಡಧ್ವಜ ಹಾರಿಸಿ, ಹೊಸ ನಕಾಶೆ ಸಿದ್ಧಪಡಿಸಿ ಮಹಾರಾಷ್ಟ್ರದ ಗರ್ವಭಂಗ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಕನಿಷ್ಠ ಸೌಕರ್ಯಗಳನ್ನೂ ನೀಡಿಲ್ಲ ಎಂದು ಆರೋಪಿಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದಾರೆ.

ಇದರಿಂದ ಬೆಚ್ಚಿಬಿದ್ದಿರುವ ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರು ಕನ್ನಡಿಗರ ಹೋರಾಟ ಹತ್ತಿಕ್ಕಲು 'ಧಮ್ಕಿ' ಅಸ್ತ್ರ ಬಳಸಿದ್ದಾರೆ. ಆಕ್ರೋಶಿತ ನಿಜದಾಕ್ಷ್ಯದಿಂದ ನಮ್ಮ ಹಕ್ಕು ಕಿತ್ತುಕೊಂಡಿದ್ದಾರೆ ಎಂದೂ ಕನ್ನಡ ಯುವಕರು ದೂರಿದರು.

ಜತ್ತ ತಾಲ್ಲೂಕಿನ ಉಮದಳ್ಳಿ, ಸಿಂಧೂರ, ಯಕ್ಕುಂಡಿ, ತಿಕ್ಕುಂಡಿ, ಬೋಜನಮಡಿ, ಗೋಣಾಪು, ಬಸರಗಿ, ಸಂಕ ಗ್ರಾಮಗಳೂ ಸೇರಿದಂತೆ 20ಕ್ಕೂ ಹೆಚ್ಚು ಹಳ್ಳಿಗಳ ಯುವಕರು ಡಿ.4ರಿಂದ ಅನಿರ್ದಿಷ್ಟಾವಧಿ ಹೋರಾಟ ನಡೆಸಲು ಮುಂದಾಗಿದ್ದರು.

'ಸೌಕರ್ಯ ಕಲ್ಪಿಸಿ, ಇಲ್ಲವೇ ಕರ್ನಾಟಕಕ್ಕೆ ಸೇರಿಸಿ'

ಸೋಲಾಪುರ (ವಿಜಯಪುರ): 'ಮೂಲ ಸೌಕರ್ಯ ಒದಗಿಸುವಲ್ಲಿ ಮಹಾರಾಷ್ಟ್ರ ಸರ್ಕಾರ ನಿರ್ಲಕ್ಷ್ಯ ತೋರಿದ ಕಾರಣ ನಾವು ಕರ್ನಾಟಕಕ್ಕೆ ಸೇರುತ್ತೇವೆ' ಎಂದು ಅಕ್ಕಲಕೋಟ ತಾಲ್ಲೂಕಿನ 11 ಗ್ರಾಮ ಪಂಚಾಯಿತಿಗಳಲ್ಲಿ ಠರಾವು ಪಾಸ್ ಮಾಡಲಾಗಿದೆ.

ತಡವಳ, ಆಳಗೆ, ಶಾವಾಳ, ಧಾರಸಂಗ, ಕಲಕರ್ಜಾಳ, ಕೆಗಾವ ಬದ್ರುಕ, ಪಾನ್ ಮಂಗರೂಳ, ಹಿಳ್ಳಿ, ಅಂಬೆವಾಡಿ ಸುತ್ತಮುತ್ತಲಿನ ಗ್ರಾಮ ಪಂಚಾಯಿತಿಗಳ ಸದಸ್ಯರು ಸೋಲಾಪುರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಮಹಾರಾಷ್ಟ್ರ ಕನ್ನಡಿಗರು ಎಚ್ಚರಿಕೆ ನೀಡುತಿದ್ದಂತೆ ಕಾರ್ಯ ಪ್ರವೃತ್ತರಾದ ಶಾಸಕ ಸಚಿನ್ ಕಲ್ಯಾಣಶೆಟ್ಟಿ, ಕನ್ನಡಿಗರನ್ನು ಅಕ್ಕಲಕೋಟಕ್ಕೆ ಕರೆಯಿಸಿ ಸಭೆ ನಡೆಸಿದರು. 'ಕರ್ನಾಟಕ ಗಡಿಗೆ ಹೊಂದಿಕೊಂಡಿರುವ ರಾಜ್ಯದ ಗ್ರಾಮಗಳಿಗೆ ಅಗತ್ಯ ಮೂಲ ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ' ಎಂದು ಆಶ್ವಾಸನೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ರಾಜ್ಯ ಘಟಕದ ಅಧ್ಯಕ್ಷ ಸೋಮಶೇಖರ ಜಮಶೆಟ್ಟಿ, ಮಲ್ಲುಗೌಡ ಪಾಟೀಲ, ಮಹಾಂತೇಶ ಹತ್ತುರೆ, ಮಲ್ಲುರ್ಪ್ಪೆ, ಬಾಪು ರಾವ್ ಪಾಟೀಲ, ಅಕ್ಷಯ ಗಂಧಗೆ, ಬಸವರಾಜ ಬಾಕೆ, ವಿವೇಕ ಈಶ್ವರಕಟ್ಟಿ, ಮಹದೇವ ಚರಾಟೆ ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಮಿತ್ ಶಾಗೆ ಮಾಹಿತಿ ನೀಡಿದ ಫಡಣವೀಸ್

ಮುಂಬೈ (ಪಿಟಿಐ): 'ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಮಾತನಾಡಿದ್ದು, ಗಡಿ ವಿವಾದದ ಹಿನ್ನೆಲೆಯಲ್ಲಿ ಒಂದು ವಾರದಿಂದ ನಡೆಯುತ್ತಿರುವ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿ ದ್ದಾರೆ' ಎಂದು ಫಡಣವೀಸ್ ಅವರ ಕಾರ್ಯಾಲಯ ತಿಳಿಸಿದೆ.

'ಮುಂದಿನ ವರ್ಷ ಕರ್ನಾಟಕ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಹೀಗಾಗಿ ಕರ್ನಾಟಕದ ಕೆಲವರು ಉದ್ದೇಶಪೂರ್ವಕವಾಗಿಯೇ ಗಡಿ ವಿವಾದ ಕೆದಕುತ್ತಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿ ಪ್ರಚೋದನಾಕಾರಿ ಹೇಳಿಕೆ ನೀಡಬಾರದು' ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನೆ ಅಧ್ಯಕ್ಷ ರಾಜ್ ಠಾಕ್ರೆ ತಿಳಿಸಿದ್ದಾರೆ.

382 ಬಸ್ ಸೇವೆ ಸ್ಥಗಿತಗೊಳಿಸಿದ ಮಹಾರಾಷ್ಟ್ರ

ಮುಂಬೈ (ಪಿಟಿಐ): ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ಗಡಿ ವಿವಾದ ತಾರಕಕ್ಕೇರಿರುವ ಕಾರಣ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮವು (ಎಂಎಸ್‌ಆರ್‌ಟಿಸಿ), ಕರ್ನಾಟಕಕ್ಕೆ ಸಂಚರಿಸುವ ತನ್ನ 1,156 ಬಸ್‌ಗಳ ಪೈಕಿ 382 ಬಸ್‌ಗಳ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

ಗಡಿ ಭಾಗದ ಜಿಲ್ಲಾಡಳಿತಗಳು ನೀಡಿದ ಸೂಚನೆಯನ್ನಾಧರಿಸಿ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ನಿಗಮ ತಿಳಿಸಿದೆ. ಮಹಾರಾಷ್ಟ್ರದ ನಾಂದೇಡ್, ಉಸ್ಮಾನಾಬಾದ್, ಸೋಲಾಪುರ, ಸಾಂಗ್ಲಿ, ಕೊಲ್ಹಾಪುರ ಮತ್ತು ಸಿಂಧೂದುರ್ಗ ಜಿಲ್ಲೆಗಳಿಂದ ಕರ್ನಾಟಕಕ್ಕೆ ಬಸ್ ಸೇವೆಯನ್ನು ಎಂಎಸ್‌ಆರ್‌ಟಿಸಿ ಒದಗಿಸುತ್ತಿದೆ.

ಜಾತಿ, ಭಾಷೆ ಸಂಘ: ನೌಕರರಿಗೆ ನಿರ್ಬಂಧ

ಒಂದನೇ ಪುಟದಿಂದ...

ಅಧೀನ ಶಾಸನಾ ರಚನಾ ಸಮಿತಿಯು ಈ ಕಾಳಜಿಯಿಂದ ನಿಯಮ ರೂಪಿಸಲು ಶಿಫಾರಸು ಮಾಡಿದೆ. ಹೀಗಾಗಿ, ಸರ್ಕಾರ ಮತ್ತು ಸಮಾಜದ ಒಟ್ಟು ಹಿತದೃಷ್ಟಿ ನಿಯಮ ತಿದ್ದುಪಡಿಗೆ ಪ್ರಸ್ತಾವ ಮಂಡಿಸಲಾಗಿದೆ' ಎಂದು ಟಿಪ್ಪಣಿಯಲ್ಲಿ ಡಿಪಿಎಆರ್ ಕಾರ್ಯದರ್ಶಿ ಪಿ. ಹೇಮಲತಾ ಸಮರ್ಥನೆ ನೀಡಿದ್ದಾರೆ.

'ತಿದ್ದುಪಡಿ ನಿಯಮವನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿ, ಸರ್ಕಾರಿ ನೌಕರರಿಂದ ಆಕ್ಷೇಪಣೆ, ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಬಹುದು. ಯಾವುದೇ ಮಹತ್ವದ ಆಕ್ಷೇಪಣೆ ಅಥವಾ ಸಲಹೆ ಇಲ್ಲದೇ ಇದ್ದರೆ, ಮತ್ತೊಮ್ಮೆ ಸಚಿವ ಸಂಪುಟ ಸಭೆಗೆ ಮಂಡಿಸದೆ ಈ ಕರಡು ನಿಯಮವನ್ನೇ ಅಂತಿಮಗೊಳಿಸಬಹುದು' ಎಂದೂ ಅವರು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ.

'ಆಸ್ತಿ ವಿವರ ಸಲ್ಲಿಕೆ: ಮಾರ್ಚ್ 31 ಗಡುವು'

ಸದ್ಯ ಇರುವ ಸೇವಾ (ನಡತೆ) ನಿಯಮದ ಪ್ರಕಾರ, ಸರ್ಕಾರಿ ನೌಕರರು ತನ್ನ ಮತ್ತು ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ವಾರ್ಷಿಕ ವಿವರಗಳನ್ನು ಪ್ರತಿ ವರ್ಷ ಡಿಸೆಂಬರ್ 31ರ ಒಳಗೆ ಸರ್ಕಾರಕ್ಕೆ ಸಲ್ಲಿಸಬೇಕು. ಆದಾಯ ತೆರಿಗೆ ಪಾವತಿಗೆ ಮಾರ್ಚ್ 31ನ್ನು ಪರಿಗಣಿಸುವುದರಿಂದ, ಸರ್ಕಾರಿ ನೌಕರರು ಆಸ್ತಿ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾದ ಅವಧಿಯನ್ನೂ ಮಾರ್ಚ್ 31ಕ್ಕೆ ಪರಿಗಣಿಸಲು 'ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು-2021'ಕ್ಕೆ ತಿದ್ದುಪಡಿಗೆ ಕೂಡಾ ಸರ್ಕಾರ ನಿರ್ಧರಿಸಿದೆ.

ಸುದ್ದಿ 2 ನಿಮಿಷ

ಮತ್ತೆ ₹ 2.99 ಲಕ್ಷ ಹಣ ಪೊಲೀಸರ ವಶಕ್ಕೆ

ಮಂಗಳೂರು: ನಗರದ ಪಂಪ್‌ವೆಲ್‌ನಲ್ಲಿ ಸಾರ್ವಜನಿಕ ಸ್ಥಳದಲ್ಲಿ ಪಾನಮತ್ತ ವ್ಯಕ್ತಿಯೊಬ್ಬರಿಗೆ ಸಿಕ್ಕಿದ್ದ ಹಣದಲ್ಲಿ, ಆತ ₹ 3 ಲಕ್ಷ ನಗದನ್ನು ಮತ್ತೊಬ್ಬ ವ್ಯಕ್ತಿಗೆ ನೀಡಿದ್ದು, ಅದರಲ್ಲಿ ₹ 2,99,500 ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

'ನ.26ರಂದು ಬೆಳಿಗ್ಗೆ ಶಿವರಾಜ್ ಎಂಬವರಿಗೆ ₹ 500 ಮುಖಬೆಲೆಯ ನೋಟುಗಳಿದ್ದ ಕಟ್ಟು ಸಿಕ್ಕಿತ್ತು. ಅದರಲ್ಲಿ ಆತ ಇನ್ನೊಬ್ಬ ವ್ಯಕ್ತಿಗೆ ನೋಟಿನ ಕಂತೆಗಳನ್ನು ನೀಡಿದ್ದಾಗಿ ಹೇಳಿದ್ದ. ಶಿವರಾಜ್‌ನಿಂದ ಹಣ ಪಡೆದ ತುಕಾರಾಮ್ ಎಂಬ ವ್ಯಕ್ತಿಯನ್ನು ಪೊಲೀಸರು ಪತ್ತೆ ಹಚ್ಚಿದ್ದು, ಅವರಿಂದ ₹ 2,99,500 ವಶಪಡಿಸಿಕೊಳ್ಳಲಾಗಿದೆ. ₹ 500 ಅನ್ನು ಅವರು ಖರ್ಚು ಮಾಡಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

'ನಾನು ಒಂದು ಕಟ್ಟಿನಿಂದ ₹ 500ರ ಒಂದು ನೋಟು ತೆಗೆದಿದ್ದೆ. ಅದರಿಂದ ಮದ್ಯ ಖರೀದಿಸಿ ಕುಡಿದು ಮಲಗಿದ್ದೆ. ನಾನು ನೋಟು ತೆಗೆದ ಕಟ್ಟು ಬಿಟ್ಟು ಬೇರೆ ಯಾವುದೇ ಹಣ ನನ್ನ ಬಳಿ ಇಲ್ಲ ಎಂದು ತುಕಾರಾಂ ತಿಳಿಸಿದ್ದಾನೆ' ಎಂದು ಕಮಿಷನರ್ ಹೇಳಿದರು.

'ಕಟ್ಟಿನಲ್ಲಿ ಎಷ್ಟು ಹಣ ಇತ್ತು ಎಂದು ಶಿವರಾಜ್ ಸ್ಪಷ್ಟವಾಗಿ ಮಾಹಿತಿ ನೀಡುತ್ತಿಲ್ಲ. ಪೊಲೀಸರು ಆತನಿಂದ ₹ 49,500 ನಗದನ್ನು ವಶಕ್ಕೆ ಪಡೆದಿದ್ದಾರೆ. ಈಗ ಶಿವರಾಜ್‌ನಿಂದ ಹಣ ಪಡೆದ ತುಕಾರಾಂನಿಂದ ₹ 2,99,500 ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಹಣದ ವಾರಸುದಾರರು ಯಾರು ಎಂಬುದು ಇನ್ನೂ ಗೊತ್ತಾಗಿಲ್ಲ.



'2023ರ ಕೊನೆಗೆ ಗಗನಯಾನ'

ಮೈಸೂರು: 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಹತ್ವಾಕಾಂಕ್ಷೆಯ ಗಗನಯಾನ ಯೋಜನೆಯು 2023ರ ಅಂತ್ಯಕ್ಕೆ ಅನುಷ್ಠಾನಗೊಳ್ಳಲಿದ್ದು, ಸಿದ್ಧತೆಗಳು ಭರದಿಂದ ಸಾಗಿವೆ' ಎಂದು ಸಂಸ್ಥೆಯ ಹ್ಯೂಮನ್ ಸ್ಪೇಸ್ ಫ್ಲೈಟ್ ಸೆಂಟರ್‌ನ (ಎಚ್‌ಎಸ್‌ಎಫ್‌ಸಿ) ನಿರ್ದೇಶಕ ಡಾ.ಆರ್.ಉಮಾಮಹೇಶ್ವರನ್ ತಿಳಿಸಿದರು.

ನಗರದಲ್ಲಿ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯವು (ಡಿಎಫ್‌ಆರ್‌ಎಲ್) ಬುಧವಾರ ಆಯೋಜಿಸಿದ್ದ 'ರಕ್ಷಣಾ ಪಡೆಗಳ ಸುಸ್ಥಿರತೆಗಾಗಿ ಭವಿಷ್ಯದ ಕಾರ್ಯತಂತ್ರಗಳು' ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿ, 'ಮಾನವರಹಿತ ಎರಡು ಬಾಹ್ಯಾಕಾಶ ನೌಕೆಗಳನ್ನು 2023ರ ಅಂತ್ಯದಲ್ಲಿ ಕಳಿಸಲಾಗುವುದು. ಅದಕ್ಕೆ ಜಿಎಸ್‌ಎಲ್‌ವಿ ಮಾರ್ಕ್ 3 ಉಡಾವಣಾ ವಾಹನವನ್ನು ಬಳಸಲಾಗುತ್ತಿದೆ. ಎಂಜಿನ್ ಪರೀಕ್ಷೆಗಳು ಮುಗಿದಿವೆ' ಎಂದರು.

'ಮಾನವ ಸಹಿತ ಗಗನಯಾನ ಯೋಜನೆಯು ಕೋವಿಡ್‌ನಿಂದ ತಡವಾಗಿದೆ. ದೇಶದ ನಾಲ್ವರು ಗಗನಯಾನಿಗಳಿಗೆ ರಷ್ಯಾದಲ್ಲಿ ತರಬೇತಿ ನೀಡಲಾಗಿದೆ. ದೇಶದಲ್ಲೂ ಭಿನ್ನ ವಾತಾವರಣ ಮತ್ತು ಮೇಲ್ಮೈನಲ್ಲಿ ಸುರಕ್ಷಿತ ಲ್ಯಾಂಡಿಂಗ್ ಮಾಡುವ ತರಬೇತಿಯನ್ನು 17 ಬಾರಿ ನೀಡಲಾಗಿದೆ' ಎಂದರು.

'ಗಗನಯಾನಿಗಳು 7 ದಿನ ಬಾಹ್ಯಾಕಾಶದಲ್ಲಿರಲಿದ್ದಾರೆ. ನೌಕೆಯು 400 ಕಿ.ಮೀ ಎತ್ತರದ ಭೂ ಕಕ್ಷೆಯಲ್ಲಿ ಮೂರು ದಿನ ಸುತ್ತಲಿದ್ದು, ನಂತರ ಬಂಗಾಳಕೊಲ್ಲಿಯ ಅಂಡಮಾನ್- ನಿಕೋಬಾರ್ ದ್ವೀಪದ ಸಮೀಪ ಇಳಿಸಲು ಯೋಜಿಸಲಾಗಿದೆ' ಎಂದರು.

ಏಟು ತಿಂದ ಶಿಕ್ಷಕ ಅಮಾನತು

ನರಸಾಪುರ (ಕೋಲಾರ): 'ಹನಿಮೂನ್ ಅರ್ಥ ಗೊತ್ತಾ' ಎಂದು ವಿದ್ಯಾರ್ಥಿನಿಯರನ್ನು ಕೇಳಿ, ಅಶ್ಲೀಲ ಸಂದೇಶ ಕಳುಹಿಸಿದ ಆರೋಪದ ಮೇಲೆ ನರಸಾಪುರದ ಕರ್ನಾಟಕ ಪಬ್ಲಿಕ್ ಶಾಲೆಯ (ಕೆಪಿಎಸ್) ಶಿಕ್ಷಕರೊಬ್ಬರನ್ನು ಗ್ರಾಮಸ್ಥರು ಹಾಗೂ ಪೋಷಕರು ಬುಧವಾರ ಕ್ಷೇತ್ರ ಶಿಕ್ಷಣಾಧಿಕಾರಿ ಎದುರೇ ಥಳಿಸಿದ್ದಾರೆ.

ಕೋಲಾರ ಕ್ಷೇತ್ರ ಶಿಕ್ಷಣಾಧಿಕಾರಿ(ಬಿಇಒ) ಕನ್ನಯ್ಯ ಅವರು ಪ್ರಕರಣದ ವಿಚಾರಣೆಗಾಗಿ ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿಗೆ ಬಂದ ಪೋಷಕರು ಹಾಗೂ ಗ್ರಾಮಸ್ಥರು ಆರೋಪಿ ಶಿಕ್ಷಕನನ್ನು ಥಳಿಸಿದ್ದಾರೆ ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಪ್ರೌಢಶಾಲೆಯ ಕನ್ನಡ ಸಹಶಿಕ್ಷಕ ಸಿ.ಎಂ.ಪ್ರಕಾಶ್ ಅವರನ್ನು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಕೃಷ್ಣಮೂರ್ತಿ ಅವರು ಅಮಾನತುಗೊಳಿಸಿದ್ದಾರೆ. ಆರೋಪಿ ಶಿಕ್ಷಕ ವಿಚಾರಣೆ ವೇಳೆ ತಪ್ಪು ಒಪ್ಪಿಕೊಂಡಿದ್ದು, ಕ್ಷಮಾಪಣಾ ಪತ್ರ ಬರೆದುಕೊಟ್ಟಿದ್ದಾರೆ.

ಅಪಘಾತ: ಸಿಪಿಐ, ಪತ್ನಿ ಸಾವು

ಪ್ರಜಾವಾಣಿ ವಾರ್ತೆ



ರವಿ ಉಕ್ಕುಂದ,



ಮಧು

ಜೇವರ್ಗಿ/ವಿಜಯಪುರ: ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ನೆಲೋಗಿ ಕ್ರಾಸ್ ಬಳಿ ಬುಧವಾರ ಬೆಳಿಗ್ಗೆ ಕಾರು ಮತ್ತು ಕಂಟೇನರ್ ನಡುವೆ ಸಂಭವಿಸಿದ ಅಪಘಾತದಲ್ಲಿ ವಿಜಯಪುರ ಜಿಲ್ಲೆಯ ಸಿಂದಗಿಯ ಸರ್ಕಲ್ ಇನ್‌ಸ್ಪೆಕ್ಟರ್ ರವಿ ಉಕ್ಕುಂದ (43) ಮತ್ತು ಅವರ ಪತ್ನಿ ಮಧು (40) ಸ್ಥಳದಲ್ಲೇ ಮೃತಪಟ್ಟರು.

ಅವರಿಗೆ ಆರ್ಯನ್ (9) ಮತ್ತು ಅದಿತಿ (6) ಎಂಬ ಇಬ್ಬರು ಮಕ್ಕಳು ಇದ್ದಾರೆ.

'ರವಿ ಉಕ್ಕುಂದ ಮತ್ತು ಮಧು ಇಬ್ಬರೂ ಸಿಂದಗಿಯಿಂದ ಕಲಬುರಗಿಗೆ ಕಾರಿನಲ್ಲಿ ಹೊರಟಿದ್ದರು. ರವಿ ಕಾರು ಚಾಲನೆ ಮಾಡುತ್ತಿದ್ದರು. ನೆಲೋಗಿ ಕ್ರಾಸ್‌ನಲ್ಲಿ ರಸ್ತೆ ಬದಿ ನಿಂತಿದ್ದ ಕಂಟೇನರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ರಭಸಕ್ಕೆ ಕಾರಿನ ಮುಂಭಾಗ ನಜ್ಜುಗುಜ್ಜಾಗಿದೆ' ಎಂದು ನೆಲೋಗಿ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಅರಳಿಕಟ್ಟೆ ಗ್ರಾಮದ ರವಿ ಅವರು 2004ರಲ್ಲಿ ಪಿಎಸ್‌ಐ ಹುದ್ದೆಗೆ ನೇಮಕಗೊಂಡು ಬೆಂಗಳೂರು ಸೇರಿ ವಿವಿಧೆಡೆ ಕಾರ್ಯ ನಿರ್ವಹಿಸಿದ್ದರು. ಅರಳಿಕಟ್ಟೆ ಗ್ರಾಮದಲ್ಲಿ ಶಾಲಾ ಶಿಕ್ಷಣ, ಬ್ಯಾಡಗಿಯಲ್ಲಿ ಪದವಿ ಮತ್ತು ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಅರಳಿಕಟ್ಟೆಯಲ್ಲಿ ಒಂದು ಎಕರೆ ಹೊಲವನ್ನು ಸರ್ಕಾರಿ ಶಾಲೆ ನಿರ್ಮಾಣಕ್ಕೆ ವರ್ಷದ ಹಿಂದೆ ದಾನ ಮಾಡಿದ್ದರು' ಎಂದು ಕುಟುಂಬದವರು ತಿಳಿಸಿದ್ದಾರೆ.

ಅಕ್ಕ ಸಾವು, ತಂಗಿ ಸ್ಥಿತಿ ಗಂಭೀರ; ಆಂಧ್ರದ ಜ್ಯೋತಿ ಬಂಧನ

ಮಕ್ಕಳಿಬ್ಬರಿಗೆ ಬೆಂಕಿ ಹಚ್ಚಿದ ಮಹಿಳೆ

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ ಜಿಲ್ಲೆ): ಕೌಟುಂಬಿಕ ಕಲಹದಿಂದ ಬೇಸತ್ತು ನಗರದ ಅಂಜನಾದ್ರಿ ಬೆಟ್ಟದ ಬಳಿ ಮಹಿಳೆಯೊಬ್ಬಳು ಮಂಗಳವಾರ ರಾತ್ರಿ ಆತ್ಮಹತ್ಯೆಗೆ ಯತ್ನಿಸಿ, ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾಳೆ. ಹಿರಿಯ ಮಗಳು ಮೃತಪಟ್ಟಿದ್ದು, ಕಿರಿಯ ಮಗಳಿಗೆ ಗಂಭೀರ ಗಾಯಗಳಾಗಿವೆ.

ಆಂಧ್ರಪ್ರದೇಶದ ರಾಮಸಮುದ್ರದ ಜ್ಯೋತಿ (25 ವರ್ಷ) ಮಕ್ಕಳೊಂದಿಗೆ ಆತ್ಮಹತ್ಯೆಗೆ ಯತ್ನಿಸಿದವರು. ಅಕ್ಷಯ (7 ವರ್ಷ) ಮೃತ ಬಾಲಕಿ. ಉದಯಶ್ರೀ (6 ವರ್ಷ) ಎಂಬ ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮಹಿಳೆಯನ್ನು ಮುಳಬಾಗಿಲು ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಬೆಟ್ಟದ ತಪ್ಪಲಿಗೆ ತನ್ನ ಇಬ್ಬರು ಮಕ್ಕಳನ್ನು ಕರೆದೊಯ್ದ ಮಹಿಳೆ, ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾಳೆ. ತಾನೂ ಆತ್ಮಹತ್ಯೆಗೆ ಯತ್ನಿಸಿ ಕೊನೆಗೆ ಮನಸ್ಸು ಬದಲಿಸಿದ್ದಾಳೆ ಎನ್ನಲಾಗಿದೆ. ಅಷ್ಟರಲ್ಲಿ ಅಕ್ಷಯ ಸುಟ್ಟು ಕರಕಲಾಗಿದ್ದಾಳೆ. ಇನ್ನೊಬ್ಬ ಮಗಳು ಉದಯಶ್ರೀ ಸುಟ್ಟ ಗಾಯಗಳಿಂದ ರಾತ್ರಿಯಿಡೀ ನರಳಾಡಿದ್ದಾಳೆ. ಬುಧವಾರ ಬೆಳಿಗ್ಗೆ ಪಳ್ಳಿಗರಪಾಳ್ಯ ನಿವಾಸಿಗಳಿಗೆ ವಿಚಾರ ಗೊತ್ತಾಗಿದ್ದು, ಪೊಲೀಸರ ಗಮನಕ್ಕೆ ತಂದಿದ್ದಾರೆ.

ಕೌಟುಂಬಿಕ ಕಲಹದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳಲು ಬೆಟ್ಟದ ತಪ್ಪಲಿಗೆ ಬಂದಿದ್ದಾಗಿ ಮಹಿಳೆ ಪೊಲೀಸರಿಗೆ ತಿಳಿಸಿದ್ದಾರೆ. ಮನೆಯವರ ವಿರೋಧದ ನಡುವೆಯೂ ಈಕೆ ತನ್ನ ಗ್ರಾಮದ ತಿರುಮಲೇಶ ಎಂಬುವರನ್ನು ಪ್ರೀತಿಸಿ ಮದುವೆಯಾಗಿದ್ದರು ಎಂಬ ಮಾಹಿತಿ ದೊರೆತಿದೆ.

ಬಾಲಕಿ ಎತ್ತಿಕೊಂಡು ಬಂದ ಪಿಎಸ್‌ಐ: ಸ್ಥಳಕ್ಕೆ ಧಾವಿಸಿದ ಮುಳಬಾಗಿಲು ನಗರ ಠಾಣೆ ಸಬ್ ಇನ್‌ಸ್ಪೆಕ್ಟರ್ ಬಿ.ಮಂಜುನಾಥ್ ಸುಟ್ಟು ತೀವ್ರವಾಗಿ ಗಾಯಗೊಂಡಿದ್ದ ಬಾಲಕಿಯನ್ನು ಬಾಚಿಕೊಂಡು ಬೆಟ್ಟದಿಂದ ಕೆಳಕ್ಕೆ ಎತ್ತಿಕೊಂಡು ಬಂದು ಮಾನವೀಯತೆ ಮೆರೆದಿದ್ದಾರೆ. ಬಳಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಕ್ಕಳಿಗೆ ಚಾಪೆ ಸುತ್ತಿ ಕುಳಿತಿದ್ದ ಮಹಿಳೆ

ಬೆಟ್ಟದ ತಪ್ಪಲಿನ ಕಲ್ಲು ಬಂಡೆ ಬಳಿ ಸುಟ್ಟು ಕರಕಲಾಗಿದ್ದ ಹಿರಿಯ ಮಗಳು ಹಾಗೂ ಗಾಯಗೊಂಡು ನರಳಾಡುತ್ತಿದ್ದ ಕಿರಿಯ ಮಗಳಿಗೆ ಚಾಪೆ ಸುತ್ತಿ ಮಹಿಳೆ ಕುಳಿತಿದ್ದ ದೃಶ್ಯ ಮನಕಲಕುವಂತಿತ್ತು. ಸ್ಥಳೀಯರು ತೆಲುಗಿನಲ್ಲಿ ಮಹಿಳೆಯನ್ನು ಮಾತನಾಡಿಸಿ ವಿಷಯ ತಿಳಿದು ಪೊಲೀಸರ ಗಮನಕ್ಕೆ ತಂದರು.

ಕೃಷಿ ಸಮಸ್ಯೆ ಚರ್ಚೆಗೆ ಹೆಚ್ಚು ಸಮಯ ಕೊಡಿ: ದೇವೇಗೌಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನಲ್ಲಿ ರೈತರು ಹಾಗೂ ಕೃಷಿ ಸಮಸ್ಯೆಗಳ ಚರ್ಚೆಗೆ ಹೆಚ್ಚು ಸಮಯ ನೀಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಒತ್ತಾಯಿಸಿದರು.

ರಾಜ್ಯಸಭೆಯ ನೂತನ ಅಧ್ಯಕ್ಷ ಜಗದೀಪ್ ಧನಕರ್ ಅವರನ್ನು ಸ್ವಾಗತಿಸಿ ಬುಧವಾರ ಮಾತನಾಡಿದ ಅವರು, 'ಪಕ್ಷದ ಸದಸ್ಯರ ಸಂಖ್ಯೆಯನ್ನು ನೋಡಿಕೊಂಡು ಸದನದಲ್ಲಿ ಮಾತನಾಡಲು ಕಾಲಾವಕಾಶ ನೀಡಲಾಗುತ್ತದೆ. ಕೆಲವು ಬಾರಿ ಒಂದೆರಡು ನಿಮಿಷಗಳಷ್ಟೇ ಕಾಲಾವಕಾಶ ನೀಡಲಾಗಿದೆ. ಕಳೆದ 20 ವರ್ಷಗಳಲ್ಲಿ ಹಲವು ಬಾರಿ ಇಂತಹ ಅನುಭವಗಳು ಆಗಿವೆ' ಎಂದರು.

ಉಭಯ ಸದನಗಳ ಅಧ್ಯಕ್ಷರು ಈ ವ್ಯವಸ್ಥೆಯನ್ನು ಮರುಪರಿಶೀಲಿಸಿ ಸದಸ್ಯರಿಗೆ ಮಾತನಾಡಲು ಹೆಚ್ಚು ಸಮಯ ನೀಡಬೇಕು ಎಂದು ಮನವಿ ಮಾಡಿದರು.

'ಸದನದಲ್ಲಿ ಮಾತನಾಡಲು ಅವಕಾಶ ಸಿಗುವುದೇ ಅಪರೂಪ ಎಂಬಂತೆ ಆಗಿದೆ. 20 ವರ್ಷಗಳಲ್ಲಿ ಇಂತಹ ಕಹಿ ಅನುಭವ ಉಂಡ ಸದನದ ಏಕೈಕ ಸದಸ್ಯ ನಾನು. ಕೃಷಿ ಕುಟುಂಬ ಹಾಗೂ ಗ್ರಾಮೀಣ ಭಾರತದಿಂದ ಬಂದಿರುವ ನಾನು, ದೇಶದ ಗ್ರಾಮೀಣ ಪ್ರದೇಶದ ಸಮಸ್ಯೆಗಳು ಹಾಗೂ ಕೃಷಿ ಸಂಬಂಧಿತ ವಿಷಯಗಳ ಬಗ್ಗೆ ಸದನದಲ್ಲಿ ಧ್ವನಿ ಎತ್ತಬೇಕಿದೆ' ಎಂದರು.

ಮೂಗಿಗೆ ತುಪ್ಪ ಸವರುವ ಕೆಲಸ ಬೇಡ: ವಚನಾನಂದ ಸ್ವಾಮೀಜಿ

'ಮೀಸಲಾತಿಗಾಗಿ ಪ್ರಾಣ ಕೊಡಲು ಸಿದ್ಧ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಪಟ್ಟಿಯಲ್ಲಿ ಮೀಸಲಾತಿ ನೀಡಬೇಕೆಂಬ ಬೇಡಿಕೆ ಈಡೇರಿಕೆಗಾಗಿ ಪ್ರಾಣ ಕೊಡುವುದಕ್ಕೂ ಸಿದ್ಧ ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

ಸ್ವಾಮೀಜಿ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮಂಗಳವಾರ ಭೇಟಿಮಾಡಿದ ಪಂಚಮಸಾಲಿ ಸಮುದಾಯದ ಮುಖಂಡರ ನಿಯೋಗ, ಮೀಸಲಾತಿಗೆ ಸಂಬಂಧಿಸಿದ ಬೇಡಿಕೆಯನ್ನು ತ್ವರಿತವಾಗಿ ಈಡೇರಿಸುವಂತೆ ಮನವಿ ಸಲ್ಲಿಸಿತು. ರೇಸ್‌ಕೋರ್ಸ್ ರಸ್ತೆಯಲ್ಲಿರುವ ಮುಖ್ಯಮಂತ್ರಿಯವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಸ್ವಾಮೀಜಿ ಮಾತನಾಡಿದರು.

'28 ವರ್ಷಗಳಿಂದ ಪಂಚಮಸಾಲಿ ಸಮುದಾಯ 2–ಎ ಪಟ್ಟಿಯಡಿ ಮೀಸಲಾತಿಗಾಗಿ ಹೋರಾಟ ನಡೆಸುತ್ತಿದೆ. ಈವರೆಗೂ ಅದು ಈಡೇರಿಲ್ಲ. ನಮ್ಮ ಸಮುದಾಯದ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಅವಕಾಶವಾಗುತ್ತಿಲ್ಲ. ಇನ್ನೂ ಮೂಗಿಗೆ ತುಪ್ಪ ಸವರುವ ಕೆಲಸ ಬೇಡ. ಇದು ಕೊನೆಯ ಮನವಿ. ಇನ್ನು ಮತ್ತೆ ಮನವಿ ಸಲ್ಲಿಸುವುದಿಲ್ಲ. ನಮ್ಮ ಪ್ರಾಣ ತ್ಯಾಗದಿಂದ ಮೀಸಲಾತಿ ಸಿಗುವುದಾದರೆ ಅದಕ್ಕೂ ಸಿದ್ಧ' ಎಂದು ಹೇಳಿದರು.

ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಮತ್ತು ಹಿಂದುಳಿದ ವರ್ಗಗಳ ಆಯೋಗದ ವರದಿ ಬರುವುದು ವಿಳಂಬವಾಗುತ್ತಿದೆ. ತಕ್ಷಣವೇ ವರದಿ ಪಡೆದು ಮೀಸಲಾತಿ ನೀಡಬೇಕು. ಕೆಲವರು ಜೋಕರ್‌ಗಳ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆ ಬಗ್ಗೆ ಮಾತನಾಡುವುದಿಲ್ಲ. ವಿಧಾನಮಂಡಲದ ಚಳಿಗಾಲದ ಅಧಿವೇಶನಕ್ಕೆ ಮುನ್ನವೇ ಪಂಚಮಸಾಲಿ ಸಮುದಾಯದ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿದ ಬಳಿಕ ಮಾತನಾಡಿದ ಬಸವರಾಜ ಬೊಮ್ಮಾಯಿ, 'ಹಿಂದೆ ಪಂಚಮಸಾಲಿ ಸಮುದಾಯ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರಲಿಲ್ಲ. ಬಿ.ಎಸ್. ಯಡಿಯೂರಪ್ಪ ಅವರ ಪ್ರಯತ್ನದಿಂದ ಅದು ಸಾಧ್ಯವಾಯಿತು. ಪ್ರವರ್ಗ 2–ಎ ಪಟ್ಟಿಗೆ ಸೇರಿಸುವಂತೆ 2016ರಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಆಗ, ಹಿಂದುಳಿದ ವರ್ಗಗಳ ಆಯೋಗ ಮನವಿಯನ್ನು ತಿರಸ್ಕರಿಸಿತ್ತು. ಈಗ ಮತ್ತೆ ಬೇಡಿಕೆಯನ್ನು ಆಯೋಗದಿಂದ ವರದಿ ಕೇಳಲಾಗಿದೆ. ಸಂವಿಧಾನಬದ್ಧವಾಗಿಯೇ ತೀರ್ಮಾನವನ್ನು ಕೈಗೊಳ್ಳುತ್ತೇವೆ' ಎಂದು ಹೇಳಿದರು.

'ವಿವಿಧ ರಾಜ್ಯಗಳಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಕೈಗೊಂಡಿರುವ ತೀರ್ಮಾನಗಳನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಅಂತಹ ಪರಿಸ್ಥಿತಿ ಉದ್ಭವಿಸದಂತೆ ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳಬೇಕಿದೆ. ಆಯೋಗದ ವರದಿ ಬಂದ ತಕ್ಷಣ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಸಚಿವರಾದ ಮುರುಗೇಶ ನಿರಾಣಿ, ಶಂಕರಪಾಟೀಲ ಮುನೇನಕೊಪ್ಪ, ಶಾಸಕ ಅರುಣ್ ಕುಮಾರ್ ಪೂಜಾರ್, ಮುಖಂಡರಾದ ಬಿ.ಸಿ. ಉಮಾಪತಿ, ಬಸವರಾಜ ದಿಂಡೂರ ನಿಯೋಗದಲ್ಲಿದ್ದರು.

'17ರಂದು ಗದುಗಿನಲ್ಲಿ ರ್‍ಯಾಲಿ'

ಗದಗ: 'ಡಿ.17ರಂದು ಗದುಗಿನ ತೋಂಟದಾರ್ಯ ಮಠದಿಂದ ರ್‍ಯಾಲಿ ಮಾಡಿ, ಸಮಾವೇಶ ಮಾಡಲಿದ್ದೇವೆ ಎಂದು ಬುಧವಾರ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು. ಡಿ.19ಕ್ಕೆ ಸವದತ್ತಿಯಲ್ಲಿ ಕೊನೆ ಸಮಾವೇಶ ನಡೆಯಲಿದೆ. ಅಷ್ಟರಲ್ಲಿ ಮೀಸಲಾತಿ ಘೋಷಣೆ ಆಗಲಿದೆ. ಮೀಸಲಾತಿ ಘೋಷಣೆಯಾದಲ್ಲಿ ಅಲ್ಲೇ ಸಂಭ್ರಮಾಚರಣೆ ಮಾಡುತ್ತೇವೆ' ಎಂದರು.

'ನನ್ನ ಕೆಲಸಕ್ಕೆ 'ಸಿದ್ರಾಮುಲ್ಲಾ ಖಾನ್' ಎಂದರೆ ಖುಷಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮುಸ್ಲಿಂ ಸಮುದಾಯಕ್ಕೆ ಮಾಡಿರುವ ಕೆಲಸವನ್ನು ಗುರುತಿಸಿ ನನ್ನನ್ನು 'ಸಿದ್ರಾಮುಲ್ಲಾ ಖಾನ್' ಎಂದು ಕರೆದರೆ ಖುಷಿಪಡುವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

'ಮುಖ್ಯಮಂತ್ರಿಯಾಗಿ ಮಾಡಿರುವ ಸೇವೆಯನ್ನು ಗುರುತಿಸಿ ಅನೇಕರು ನನ್ನನ್ನು ಅನ್ನರಾಮಯ್ಯ, ರೈತ ರಾಮಯ್ಯ, ಕನ್ನಡ ರಾಮಯ್ಯ, ದಲಿತರಾಮಯ್ಯ ಎಂದೆಲ್ಲ ಕರೆಯುತ್ತಾರೆ. ಅದೇ ರೀತಿ 'ಸಿದ್ರಾಮುಲ್ಲಾಖಾನ್' ಎಂದು ನನ್ನ ಹೆಸರಿಗೆ ಮುಸ್ಲಿಂ ಹೆಸರು ಸೇರಿಸಿರುವ ಬಗ್ಗೆ ನನಗೇನು ಬೇಸರವಿಲ್ಲ' ಎಂದಿದ್ದಾರೆ.

'ಮುಸ್ಲಿಂ ಕುಟುಂಬದಲ್ಲಿ ಹುಟ್ಟಿ ಗೋವಿಂದ ಭಟ್ಟರ ಶಿಷ್ಯನಾಗಿ ಈಗಲೂ ನಮ್ಮ ಆತ್ಮಸಾಕ್ಷಿಯನ್ನು ಎಚ್ಚರಿಸುತ್ತಲೇ ಇರುವ ಸಂತ ಶಿಶುನಾಳ ಷರೀಫರ ಪರಂಪರೆ ನಮ್ಮದು' ಎಂದಿರುವ ಅವರು, 'ಸುಳ್ಳು, ಅಪಪ್ರಚಾರ ಮತ್ತು ಚಾರಿತ್ರ್ಯಹನನವನ್ನೇ ರಾಜಕೀಯ ಪ್ರಚಾರದ ಸರಕನ್ನಾಗಿ ಮಾಡಿಕೊಂಡ ಬಿಜೆಪಿ ನಾಯಕರ ವರ್ತನೆ, ಅವರ ಸೋಲು, ಹತಾಶೆ ಮತ್ತು ಅಸಹಾಯಕತೆಯನ್ನು ಸೂಚಿಸುತ್ತದೆ' ಎಂದು ಕುಟುಕಿದ್ದಾರೆ.

'ಹಿಂದೂ ಕೋಮುವಾದದಷ್ಟೇ ಸ್ಪಷ್ಟ ಮತ್ತು ಬದ್ಧತೆಯಿಂದ ನಾನು ಮುಸ್ಲಿಂ ಮತ್ತಿತರ ಧರ್ಮಗಳ ಕೋಮುವಾದವನ್ನು ವಿರೋಧಿಸುತ್ತಾ ಬಂದಿದ್ದೇನೆ. ಬಿಜೆಪಿಯವರಂತೆ ಸಾರಾಸಗಟಾಗಿ ಮುಸ್ಲಿಮರನ್ನು ಗುರಿಯಾಗಿಟ್ಟುಕೊಂಡ ಕೋಮುವಾದದ ರಾಜಕೀಯವನ್ನು ನಾನು ಮಾಡಿದವನಲ್ಲ' ಎಂದಿದ್ದಾರೆ.

'ಮುಸ್ಲಿಂ ಬಂಧುಗಳ ಮೂಲಭೂತ ಅವಶ್ಯಕತೆಗಳಾದ ಭದ್ರತೆ, ಶಿಕ್ಷಣ, ಆರೋಗ್ಯ, ಉದ್ಯೋಗಗಳನ್ನು ಒದಗಿಸಲು ಮುಂಗಡಪತ್ರದಲ್ಲಿ ನ್ಯಾಯಬದ್ಧವಾದ ಪಾಲನ್ನು ಎತ್ತಿಟ್ಟು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದೇನೆ. ಈ ಬಗ್ಗೆ ನನಗೆ ಹೆಮ್ಮೆ ಇದೆ. ಅಭಿಮಾನವೂ ಇದೆ. ಟಿಪ್ಪು ಸುಲ್ತಾನ್ ಜಯಂತಿ ಆಚರಣೆಯನ್ನೇ ನೆಪವಾಗಿಟ್ಟುಕೊಂಡು ಕೆಲವು ವರ್ಷಗಳಿಂದ ಬಿಜೆಪಿ ಮತ್ತು ಸಂಘ ಪರಿವಾರ ಹುಟ್ಟುಹಾಕಿದ ವಿವಾದ ಮತ್ತು ಗಲಭೆಗಳು ರಾಜಕೀಯ ಪ್ರೇರಿತವಾದುದು ಎಂದು ರಾಜ್ಯದ ಜನರಿಗೆ ಈಗ ಮನದಟ್ಟಾಗಿದೆ' ಎಂದೂ ಅವರು ಹೇಳಿದ್ದಾರೆ.

ಕಾಂಗ್ರೆಸ್‌ನಿಂದ ಜ. 8ಕ್ಕೆ ಎಸ್‌ಸಿ, ಎಸ್‌ಟಿ 'ಐಕ್ಯತಾ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ (ಎಸ್‌ಸಿ) ಹಾಗೂ ಪರಿಶಿಷ್ಟ ಪಂಗಡಗಳ (ಎಸ್‌ಟಿ) 'ಐಕ್ಯತಾ ಸಮಾವೇಶ'ವನ್ನು ಜ. 8ರಂದು ಚಿತ್ರದುರ್ಗದಲ್ಲಿ ನಡೆಸಲು ತೀರ್ಮಾನಿಸಲಾಗಿದೆ' ಎಂದು ಕಾಂಗ್ರೆಸ್ ಶಾಸಕ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಎಲ್ಲ ಪರಿಶಿಷ್ಟ ಜಾತಿ, ಪಂಗಡಗಳನ್ನು ಒಂದು ವೇದಿಕೆ ಮೇಲೆ ತರಬೇಕೆಂಬ ಉದ್ದೇಶದಿಂದ ಈ ಸಮಾವೇಶ ಆಯೋಜಿಸಲಾಗಿದೆ' ಎಂದರು.

'ಬೆಂಗಳೂರಿನಲ್ಲಿ ಸಮಾವೇಶ ಮಾಡಿದರೆ ಉತ್ತರ ಕರ್ನಾಟಕದ ಜನರಿಗೆ ದೂರವಾಗುತ್ತದೆ. ಹೀಗಾಗಿ, ಮಧ್ಯಕರ್ನಾಟಕ ಭಾಗದಲ್ಲಿ ಸಮಾವೇಶ ಮಾಡಲು ತೀರ್ಮಾನಿಸಲಾಗಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಮೇಲ್ಮನೆ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿಯ ಅಧ್ಯಕ್ಷ ಎಂ.ಬಿ. ಪಾಟೀಲ ಭಾಗವಹಿಸಲಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅಥವಾ ಪ್ರಿಯಾಂಕಾ ಗಾಂಧಿ ಪೈಕಿ ಯಾರಾದರೂ ಒಬ್ಬರು ಭಾಗವಹಿಸಬೇಕೆಂದು ನಾವು ಮನವಿ ಮಾಡುತ್ತೇವೆ' ಎಂದರು.

'ಪರಿಶಿಷ್ಟ ಜಾತಿಯಲ್ಲಿ 101, ಪರಿಶಿಷ್ಟ ಪಂಗಡದಲ್ಲಿ 52 ಸಮುದಾಯಗಳಿವೆ. ಎರಡೂ ಸೇರಿ ಶೇ 24.1ರಷ್ಟು ಜನರಿದ್ದು, ಸುಮಾರು 1.5 ಕೋಟಿ ಜನರಿದ್ದಾರೆ. ಸಮುದಾಯವನ್ನು ಒಡೆದು ಆಳುವ ಪ್ರಯತ್ನ ನಡೆಯುತ್ತಿದೆ. ಹೀಗಾಗಿ, ಸಮುದಾಯಗಳ ನಾಯಕರೆಲ್ಲರೂ ಒಟ್ಟಾಗಿ ಈ ಸಮಾವೇಶ ನಡೆಸಲು ನಿರ್ಧರಿಸಿದ್ದೇವೆ' ಎಂದರು.

'ರಾಜ್ಯದಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ, ಬಡತನ ರೇಖೆಯಿಂದ ಹೊರಗೆ ಮುಖ್ಯವಾಹಿನಿಗೆ ತರಲು ಕಾಂಗ್ರೆಸ್ ಕಾನೂನಾತ್ಮಕವಾಗಿ ಕೆಲಸ ಮಾಡಿಕೊಂಡು ಬಂದಿದೆ. ಆದರೆ, ಇಂದು ಬೇರೆ ಬೇರೆ ಪಕ್ಷಗಳು ಅವರ ಮನವೊಲಿಸುವ ಪ್ರಯತ್ನ ಮಾಡುತ್ತಿವೆ. ಯಾವುದೇ ಪಕ್ಷ ಅವರ ಯೋಗಕ್ಷೇಮಕ್ಕೆ ಪ್ರಯತ್ನಿಸಲಿಲ್ಲ. ಪಕ್ಷದ ಕಚೇರಿಗಳಲ್ಲಿ ಅಂಬೇಡ್ಕರ್ ಪೋಟೋಗಳನ್ನು ಹಾಕಿಕೊಳ್ಳದವರು ಇಂದು ದಲಿತರ ಮನೆಗಳಲ್ಲಿ ಮಲಗುತ್ತಾರೆ. ಹೋಟೆಲ್‌ನಿಂದ ಊಟ ತರಿಸಿಕೊಂಡು ಅವರ ಮನೆಗಳಲ್ಲಿ ತಿಂದು ಬರುತ್ತಿದ್ದಾರೆ' ಎಂದರು.

'ಪರಿಶಿಷ್ಟರಿಗೆ ಮೀಸಲಾತಿ ಎಂಬುದು ಭಿಕ್ಷೆಯಲ್ಲ. ಅದು ಈ ಸಮುದಾಯದ ಹಕ್ಕು. ಎಲ್ಲಿಯವರೆಗೆ ಅಸ್ಪೃಶ್ಯತೆ ಇರುತ್ತದೆ, ಈ ಸಮುದಾಯದ ಏಳಿಗೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ಮೀಸಲಾತಿ ಮುಂದುವರಿಯಬೇಕು' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ, ಮುಖಂಡರಾದ ಕೆ.ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ಎಚ್. ಆಂಜನೇಯ, ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್ ತಂಗಡಗಿ ಇದ್ದರು.



ರಾಜಸ್ಥಾನದ ಕೋಟದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆ ವೇಳೆ ಬುಧವಾರ ವೃದ್ಧೆಯೊಬ್ಬರು ನೀಡಿದ ಫೋಟೊವನ್ನು ರಾಹುಲ್ ಗಾಂಧಿ ವೀಕ್ಷಿಸಿದರು–ಪಿಟಿಐ ಚಿತ್ರ

ಅಧಿವೇಶನ ಫಲಪ್ರದಗೊಳಿಸಿ: ಮೋದಿ ಮನವಿ

ನವದೆಹಲಿ(ಪಿಟಿಐ): ಸಂಸತ್ತಿನ ಚಳಿಗಾಲದ ಅಧಿವೇಶನವನ್ನು ಫಲಪ್ರದಗೊಳಿಸಲು ಸಾಮೂಹಿಕ ಪ್ರಯತ್ನ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಸರ್ವ ಪಕ್ಷಗಳ ನಾಯಕರಿಗೆ ಕರೆ ನೀಡಿದರು.

ಅಧಿವೇಶನ ಆರಂಭಕ್ಕೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಂಸತ್ತಿನಲ್ಲಿ ಪದೇ ಪದೇ ಅಡೆತಡೆ ಉಂಟು ಮಾಡುವುದರಿಂದ ಮತ್ತು ಕಲಾಪ ಮುಂದೂಡುವುದರಿಂದ ಮಾತನಾಡಲು ಅವಕಾಶ ಸಿಗುತ್ತಿಲ್ಲ ಎಂದು ಯುವ ಸಂಸದರು ಹೇಳಿದ್ದಾರೆ. ಹಾಗಾಗಿ ಎಲ್ಲ ಪಕ್ಷಗಳ ನಾಯಕರಿಗೆ ಈ ಮನವಿ ಮಾಡುತ್ತಿದ್ದೇನೆ ಎಂದರು.

ಸಂಸತ್ತು ಪ್ರಜಾಪ್ರಭುತ್ವದ ದೊಡ್ಡ ವಿಶ್ವವಿದ್ಯಾಲಯವಾಗಿದೆ ಎಂದು ಯುವ ಸಂಸದರು ಹೇಳುತ್ತಾರೆ. ಆದರೆ, ಕಲಾಪಕ್ಕೆ ಅಡ್ಡಿಪಡಿಸುವುದರಿಂದ ಮತ್ತು ಚರ್ಚೆಗಳು ಸರಿಯಾಗಿ ನಡೆಯದ ಕಾರಣ ಕಲಿಕೆ ಮತ್ತು ಹೊಸ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ ಎಂದಿದ್ದಾರೆ.

ಯುವ ಸಂಸದರು ತಮಗೆ ಅವಕಾಶಗಳು ಸಿಗುತ್ತಿಲ್ಲ ಎಂದು ಹೇಳುತ್ತಾರೆ. ಇದು ಎಲ್ಲಾ ಪಕ್ಷಗಳ ಯುವ ಸಂಸದರ ಧ್ವನಿಯಾಗಿದೆ ಎಂದರು. ಹೀಗಾಗಿ, ಉಭಯ ಸದನಗಳ ಕಲಾಪ ನಡೆಯುವುದು ಬಹಳ ಮುಖ್ಯ ಎಂದು ಅವರು ಪ್ರತಿಪಾದಿಸಿದರು.

ಭಾರತ ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡಿರುವ ಬಗ್ಗೆ ಇತ್ತೀಚೆಗೆ ನಡೆದ ಸರ್ವಪಕ್ಷಗಳ ಸಭೆಯಲ್ಲಿ ವಿವಿಧ ಪಕ್ಷಗಳ ನಾಯಕರೊಂದಿಗೆ ಸೌಹಾರ್ದಯುತವಾಗಿ ಚರ್ಚಿಸಿರುವುದಾಗಿ ಅವರು ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಿದರು.

ಮುಂದಿನ ವರ್ಷ ನಡೆಯಲಿರುವ ಜಿ–20 ಶೃಂಗಸಭೆಯ ಆತಿಥ್ಯವನ್ನು ಭಾರತ ವಹಿಸಿರುವುದು ಕೇವಲ ರಾಜತಾಂತ್ರಿಕ ಕಾರ್ಯಕ್ರಮವಲ್ಲ. ದೇಶದ ಸಾಮರ್ಥ್ಯವನ್ನು ಸಮಗ್ರ ರೀತಿಯಲ್ಲಿ ವಿಶ್ವದ ಮುಂದೆ ಪ್ರದರ್ಶಿಸುವ ಅವಕಾಶವಾಗಿದೆ ಎಂದು ಪ್ರಧಾನಿ ಹೇಳಿದರು.

ಗುಜರಾತ್: ₹121.40 ಕೋಟಿ ಮೌಲ್ಯದ ಮಾದಕವಸ್ತು ವಶ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಭಯೋತ್ಪಾದನಾ ನಿಗ್ರಹ ಪಡೆಯು (ಎಟಿಎಸ್) ವಡೋದರಾ ನಗರದಲ್ಲಿ ವಾಸವಿರುವ ರಸಾಯನಶಾಸ್ತ್ರಜ್ಞ ಶೈಲೇಶ್ ಕಠಾರಿಯಾ ಅವರ ಮನೆಯಿಂದ ₹121.40 ಕೋಟಿ ಮೌಲ್ಯದಷ್ಟು ಎಂಡಿ ಎಂಬ ಮಾದಕವಸ್ತುವನ್ನು ಬುಧವಾರ ವಶಪಡಿಸಿಕೊಂಡಿದೆ.

'ವಡೋದರಾ ನಗರದ ಹೊರಲಯದಲ್ಲಿ ಎಂಡಿ ಎನ್ನುವ ಮಾದಕವಸ್ತುವನ್ನು ತಯಾರು ಮಾಡುತ್ತಿದ್ದ ಉತ್ಪಾದನಾ ಘಟಕದ ಮೇಲೆ ಸರಣಿ ದಾಳಿಗಳನ್ನು ನಡೆಸಲಾಗಿದೆ. ಮಂಗಳವಾರ ನಡೆಸಿದ್ದ ದಾಳಿಯಲ್ಲಿ ಮಾದಕವಸ್ತು ತಯಾರಿಕೆಯಲ್ಲಿ ಬಳಸುವ ₹478 ಕೋಟಿ ಮೌಲ್ಯದಷ್ಟು ಕಚ್ಚಾ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಘಟಕದಲ್ಲಿ ಶೈಲೇಶ್ ಕಠಾರಿಯಾ ಮಾದಕವಸ್ತು ತಯಾರಿಸುತ್ತಿದ್ದರು' ಅಧಿಕಾರಿಗಳು ತಿಳಿಸಿದರು.

'ನವೆಂಬರ್ 29ರಂದು ಘಟಕದ ಮೇಲೆ ದಾಳಿ ನಡಿಸಿದ್ದ ವೇಳೆ ಐವರನ್ನು ಬಂಧಿಸಲಾಗಿತ್ತು.

ಚಿಕ್ಕಮಗಳೂರು: 'ನನ್ನನ್ನು ಮುಲ್ಲಾ ಎಂದು ಕರೆಯಲಾಗದು, ಹಿಂದೂ ಹುಲಿ ಎಂದು ಕರೆಯಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಪ್ರತಿಕ್ರಿಯಿಸಿದರು.

ಸುದ್ದಿಗಾರರೊಂದಿಗೆ ಅವರು ಬುಧವಾರ ಮಾತನಾಡಿ, 'ಶಾದಿ ಭಾಗ್ಯ ಕೊಟ್ಟವರಿಗೆ, ಟೋಪಿಯನ್ನು ಪ್ರೀತಿಯಿಂದ ಹಾಕಿಕೊಳ್ಳುವವರಿಗೆ, 'ದೇ ಆರ್ ಆಲ್ ಮೈ ಬ್ರದರ್ಸ್' ಎನ್ನುವವರಿಗೆ, ಬೆಂಕಿ ಹಚ್ಚಿದರೂ ಅಮಾಯಕರು ಎಂದು ಹೇಳುವವರಿಗೆ ಅದೆಲ್ಲ ಕನೆಕ್ಟ್ ಆಗುತ್ತೆ' ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ಅವರನ್ನು ಛೇಡಿಸಿದರು.

'ನಮ್ಮ ಸ್ವಭಾವ, ನಡವಳಿಕೆಗೆ ತಕ್ಕಂತೆ ಕರೆಯುತ್ತಾರೆ. ಸ್ವಭಾವಕ್ಕೆ ತಕ್ಕಂತೆ ಬಿರುದುಗಳು ಹೊಂದುತ್ತವೆ' ಎಂದು ಸಿ.ಟಿ.ರವಿ ಅವರು ಹೇಳಿದರು.

ಧನ ಸಹಾಯ: ಏಕರೂಪದ ಮಾರ್ಗಸೂಚಿ ಪಾಲನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಘ ಸಂಸ್ಥೆಗಳಿಗೆ ಧನ ಸಹಾಯ ನೀಡುವ ಸಂದರ್ಭದಲ್ಲಿ ಏಕರೂಪದ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದು ಕರ್ನಾಟಕ ರಾಜ್ಯ ಸಾಹಿತಿ, ಕಲಾವಿದರ, ಸಾಂಸ್ಕೃತಿಕ ಚಿಂತಕರ ಸಂಘ–ಸಂಸ್ಥೆಗಳ ಒಕ್ಕೂಟ ಬುಧವಾರ ಒತ್ತಾಯಿಸಿದೆ.

'ಈ ಆರ್ಥಿಕ ವರ್ಷದಿಂದಲೇ ಕನಿಷ್ಠ ₹5 ಲಕ್ಷದಿಂದ ಗರಿಷ್ಠ ₹15 ಲಕ್ಷದವರೆಗೂ ಧನಸಹಾಯ ನಿಗದಿಗೊಳಿಸಿ ಬಿಡುಗಡೆಗೊಳಿಸಬೇಕು. ಆರ್‌ಟಿಜಿಎಸ್ ಪದ್ಧತಿಯನ್ನು ಮತ್ತು ಅವೈಜ್ಞಾನಿಕವಾದ ಕಲಾವಿದರ ಪೋರ್ಟಲ್ ತಕ್ಷಣ ರದ್ದುಗೊಳಿಸಬೇಕು. ಜ್ಯೇಷ್ಠತೆ ಆಧಾರದ ಮೇಲೆ ವಲಯ ಮತ್ತು ಪ್ರಾದೇಶಿಕವಾರು ಧನ ಸಹಾಯವನ್ನು ವಿತರಿಸಬೇಕು' ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ರಾಜ್ಯದಾದ್ಯಂತ ನಡೆಯುವ ಎಲ್ಲ ಉತ್ಸವಗಳನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಯುತ್ತಿರುವುದನ್ನು ರದ್ದುಪಡಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೇ ನೇರವಾಗಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಈ ಉತ್ಸವಗಳಲ್ಲಿ ರಾಜ್ಯದ ಕಲಾವಿದರಿಗೆ ಆದ್ಯತೆ ನೀಡಬೇಕು. ಪ್ರಾಧಿಕಾರದ ಕಲಾವಿದರ, ಸಾಹಿತಿಗಳ ವೈದ್ಯಕೀಯ ಸಂಪೂರ್ಣ ವೆಚ್ಚವನ್ನು ಏಕಗವಾಕ್ಷಿ ವ್ಯವಸ್ಥೆಯಲ್ಲಿ ಭರಿಸಬೇಕು' ಎಂದು ಒತ್ತಾಯಿಸಿದರು.

'ಜಾನಪದ ಜಾತ್ರೆಯನ್ನು ಮಧ್ಯವರ್ತಿಗಳ ಹಾವಳಿ ಇಲ್ಲದೆ ಮತ್ತೆ ಪ್ರಾರಂಭಿಸಬೇಕು. ತಾರತಮ್ಯ ಮಾಡದೇ ಎಲ್ಲಾ ಸಂಘ– ಸಂಸ್ಥೆಗಳಿಗೆ ಅನುದಾನವನ್ನು ಸಕಾಲದಲ್ಲಿ ಬಿಡುಗಡೆಗೊಳಿಸಬೇಕು. ಇಲಾಖೆಯ ಅನುದಾನವನ್ನು ಮಠಮಾನ್ಯಗಳನ್ನು ನೀಡುತ್ತಿರುವುದನ್ನು ಸ್ಥಗಿತಗೊಳಿಸಬೇಕು' ಎಂದರು.

'ಇಲಾಖೆಯ ನಿಯಮಾನುಸಾರ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳ ಮೌಲ್ಯಮಾಪನ ಮಾಡಿ, ಅನುದಾನವನ್ನು ಹಂಚಿಕೆ ಮಾಡಬೇಕು. ಇಲ್ಲದಿದ್ದರೆ ಡಿ. 12ರಂದು ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಕುಮಾರ್ ಎಚ್ಚರಿಕೆ ನೀಡಿದರು.

1,334 ಅರ್ಜಿಗಳು ಮಾತ್ರ ಆಯ್ಕೆ

'2022ನೇ ಸಾಲಿನಲ್ಲಿ ಸಾಮಾನ್ಯ ವರ್ಗದಲ್ಲಿ 1200ಕ್ಕೂ ಅರ್ಜಿಗಳನ್ನು ಸಲ್ಲಿಕೆಯಾಗಿದ್ದವು, ಅದರಲ್ಲಿ 650 ಅರ್ಜಿಗಳನ್ನು ಆಯ್ಕೆ ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದಲ್ಲಿ 1000ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಅದರಲ್ಲಿ ಪರಿಶಿಷ್ಟ ಜಾತಿಯ 580, ಪರಿಶಿಷ್ಟ ಪಂಗಡದ 104 ಅರ್ಜಿಗಳನ್ನು ಆಯ್ಕೆ ಮಾಡಲಾಗಿದೆ' ಎಂದು ಕರ್ನಾಟಕ ರಾಜ್ಯ ಸಾಹಿತಿ, ಕಲಾವಿದರ, ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಕುಮಾರ್ ಮಾಹಿತಿ ನೀಡಿದರು.

ಅಧಿವೇಶನದಲ್ಲಿ ಜನಪರ ವಿಷಯಗಳ ಪ್ರಸ್ತಾಪ: ವಿಪಕ್ಷಗಳ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ ಚಳಿಗಾಲದ ಅಧಿವೇಶನದಲ್ಲಿ ಬೆಲೆ ಏರಿಕೆ, ನಿರುದ್ಯೋಗ ಮತ್ತು ಸಂವಿಧಾನದ ಮೇಲಿನ ದಾಳಿಯಂತಹ ವಿಷಯ ಮುಂದಿಟ್ಟುಕೊಂಡು ಕೇಂದ್ರ ಸರ್ಕಾರದ ವಿರುದ್ಧ ಒಗ್ಗಟ್ಟಿನ ದನಿ ಎತ್ತಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಬುಧವಾರ 13 ವಿರೋಧ ಪಕ್ಷಗಳು ಒಮ್ಮತದ ನಿರ್ಧಾರ ತೆಗೆದುಕೊಂಡಿವೆ.

ಸಂಸತ್ ಚಳಿಗಾಲದ ಅಧಿವೇಶನದ ಕಾರ್ಯತಂತ್ರ ರೂಪಿಸಲು ಖರ್ಗೆ ಅವರ ನೇತೃತ್ವದಲ್ಲಿ ನಡೆದ ಸಭೆಗೆ ತೃಣಮೂಲ ಕಾಂಗ್ರೆಸ್, ಎನ್‌ಸಿಪಿ, ಆಮ್ ಆದ್ಮಿ ಪಕ್ಷ, ಡಿಎಂಕೆ, ಸಿಪಿಎಂ, ಆರ್‌ಎಸ್‌ಪಿ, ಶಿವಸೇನಾ (ಠಾಕ್ರೆ), ಆರ್‌ಎಲ್‌ಡಿ, ಎಂಡಿಎಂಕೆ ಸೇರಿ ಪ್ರಮುಖ ಪಕ್ಷಗಳ ನಾಯಕರು ಹಾಜರಾಗಿದ್ದರು.

'ಕಳೆದ ಬಾರಿಯಂತೆ ಪ್ರತಿಪಕ್ಷಗಳು ಚರ್ಚೆಗೆ ಅಡ್ಡಿಪಡಿಸುವ ಸಾಧ್ಯತೆಯಿಲ್ಲ. ಆದರೆ, ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲಿವೆ. ಕಲಾಪಕ್ಕೆ ಅಡ್ಡಿಪಡಿಸಿದ್ದನ್ನು ನೆಪವಾಗಿಸಿ, ಸರ್ಕಾರ ಉತ್ತರದಾಯಿತ್ವದಿಂದ ತಪ್ಪಿಸಿಕೊಳ್ಳುತ್ತಿತ್ತು. ಆದರೆ, ಈ ಬಾರಿ ಅದಕ್ಕೆ ಅವಕಾಶ ಕಲ್ಪಿಸದೆ ಸುಗಮ ಕಲಾಪಕ್ಕೆ ದಾರಿ ಮಾಡಿಕೊಡಲು ನಿರ್ಧರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಸಮಾನಮನಸ್ಕ ಪಕ್ಷಗಳೆಲ್ಲವೂ ಸೇರಿ ಜನರ ಸಮಸ್ಯೆಗಳ ಬಗ್ಗೆ ದನಿ ಎತ್ತುತ್ತೇವೆ ಎಂದು ಖರ್ಗೆ ಹೇಳಿದ್ದಾರೆ.



ಸುಭಾಷಿತ

ಸುಳ್ಳನ್ನು ಹೇಳಲು ಒಂದು ನಿಮಿಷ ಸಾಕು, ಆದರೆ ಅದನ್ನು ಸಮರ್ಥಿಸಿಕೊಳ್ಳಲು ಒಂದು ಗಂಟೆ ಬೇಕು.

–ನೋಮ್ ಚೋಮ್‌ಸ್ಕಿ

ದಲಿತ ಸಂಘಟನೆಗಳ ಏಕತೆ ಪ್ರದರ್ಶನ ಹೊಸ ಸಂದೇಶ, ಹೊಸ ಭರವಸೆ

ಕೋಮುದ್ವೇಷದ ಮಾತು–ಚಟುವಟಿಕೆಗಳು ಎಲ್ಲೆಡೆ ತುಂಬಿರುವ ಸಂದರ್ಭದಲ್ಲಿ, ಸಂವಿಧಾನದ ನೆಲೆಗಟ್ಟಿನಲ್ಲಿ ಬಹುತ್ವಕ್ಕೆ ಹಂಬಲಿಸುವ ಸಮಾನಮನಸ್ಕರು ಒಂದೆಡೆ ಸೇರಿ ಚರ್ಚಿಸುವುದು ಆಶಾದಾಯಕ ಸಂಗತಿ. ಇಂಥದೊಂದು ಆರೋಗ್ಯಕರ ಬೆಳವಣಿಗೆಗೆ ‘ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ದಲಿತರ ಸಾಂಸ್ಕೃತಿಕ ಪ್ರತಿರೋಧ– ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ’ ನಾಂದಿ ಹಾಡಿದೆ. ‘ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ’ ಬೆಂಗಳೂರಿನಲ್ಲಿ ಸಂಘಟಿಸಿದ್ದ ಈ ಸಮಾವೇಶಕ್ಕೆ ದಲಿತರ ಹಿತದೃಷ್ಟಿಯಿಂದ ವಿಶೇಷ ಮಹತ್ವವಿದೆ. ಸಮುದಾಯದ ಚೌಕಟ್ಟನ್ನು ಮೀರಿ ಇಡೀ ಸಮಾಜಕ್ಕೆ ಒಳಿತನ್ನುಂಟುಮಾಡುವ ಪ್ರಯತ್ನದ ರೂಪದಲ್ಲೂ ಪ್ರಸಕ್ತ ಬೆಳವಣಿಗೆಯನ್ನು ಗಮನಿಸಬಹುದು. ದಲಿತರು, ಅಲ್ಪಸಂಖ್ಯಾತರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವ ಹಾಗೂ ಅವರು ದೇಶದ ನಾಗರಿಕರಾಗಿ ಆತ್ಮಘನತೆಯಿಂದ ಬದುಕುವ ಭರವಸೆಯನ್ನು ಇಂಥ ಸಮಾವೇಶಗಳು ತುಂಬುತ್ತವೆ. ತಾತ್ವಿಕ ಭಿನ್ನಾಭಿಪ್ರಾಯಗಳ ಕಾರಣದಿಂದ ಚೆಲ್ಲಾಪಿಲ್ಲಿಯಾಗಿದ್ದ ರಾಜ್ಯದ ದಲಿತ ಸಂಘಟನೆಗಳು, ತಮ್ಮ ತಕರಾರುಗಳನ್ನು ಮರೆತು ಒಟ್ಟುಗೂಡಿ ಕೆಲಸ ಮಾಡಲು ನಿರ್ಧರಿಸುವುದು ಒಂದು ವಿಶೇಷ ಸಂಗತಿ. ದಲಿತ ಸಂಘಟನೆಗಳು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಒಗ್ಗೂಡಿ ಹೋರಾಟ ನಡೆಸಲು ನಿರ್ಧರಿಸಿರುವುದಕ್ಕೆ ಸಾಮಾಜಿಕ ಹಾಗೂ ರಾಜಕೀಯ ಮಹತ್ವವಿದೆ. ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನವಾದ ಡಿಸೆಂಬರ್ 6ರಂದು ನಡೆಯುವ ಮೂಲಕ ಈ ಸಮಾವೇಶವು ತನ್ನ ಬದ್ಧತೆ ಸಂವಿಧಾನಕ್ಕೆ ಎನ್ನುವುದನ್ನು ಸ್ಪಷ್ಟಪಡಿಸಿದೆ. ಅಂಬೇಡ್ಕರ್ ಚಿಂತನೆಗಳ ಬೆಳಕಿನಲ್ಲಿ ಭಾರತೀಯ ಸಮಾಜ ನಡೆಯಬೇಕಾದ ಅಗತ್ಯವನ್ನೂ ಸಮಾವೇಶ ಮನದಟ್ಟು ಮಾಡುವಂತಿದೆ. ರಾಜಕೀಯ ಪಕ್ಷಗಳೊಂದಿಗೆ ನಂಟು ಹೊಂದಿರುವವರು ಹಾಗೂ ಕೋಮುವಾದಿ ಶಕ್ತಿಗಳನ್ನು ದೂರವಿಟ್ಟು ಹೋರಾಟ ನಡೆಸಲು ನಿರ್ಧರಿಸಿರುವುದು, ಈ ಕಾಲಕ್ಕೆ ಅತ್ಯಗತ್ಯವಾದ ವಿವೇಕ. ‘ಸಂವಿಧಾನದತ್ತವಾದ ಹಕ್ಕುಗಳನ್ನು ರಕ್ಷಿಸಲು ಹೋರಾಟ ನಡೆಸುವ ಮೂಲಕ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಬೇಕು’ ಎಂದು ಬೃಹತ್ ಸಮಾವೇಶದಲ್ಲಿ ವ್ಯಕ್ತವಾದ ಅಭಿಪ್ರಾಯವೂ ಸರಿಯಾಗಿದೆ.



ಕರ್ನಾಟಕದ ದಲಿತ ಸಂಘಟನೆಗಳ ಒಗ್ಗಟ್ಟಿನ ಪ್ರಯತ್ನ ಉಳಿದ ರಾಜ್ಯಗಳಿಗೂ ಮಾದರಿಯಾಗಬೇಕು

ತರತಮಗಳಿಂದ ಹೊರತಾದ ಸಮಾಜವನ್ನು ರೂಪಿಸುವ ಪ್ರಯತ್ನಗಳು ಹೆಚ್ಚು ಹೆಚ್ಚು ನಡೆಯಬೇಕಾದುದು ಈ ಕಾಲಘಟ್ಟದ ಅಗತ್ಯ. ಹಿಂದುಳಿದ ವರ್ಗಗಳು ಪ್ರತ್ಯೇಕವಾಗಿ ಉಳಿದು ನಡೆಸುವ ರಾಜಕೀಯ ಹೋರಾಟಗಳು ದೀರ್ಘ ದಾರಿ ಸವೆಸುವ ಶಕ್ತಿ ಹೊಂದಿರುವುದಿಲ್ಲ. ದಲಿತ ಸಂಘಟನೆಗಳೆಲ್ಲ ಒಂದುಗೂಡಿ ಧ್ವನಿ ಎತ್ತಿದಾಗಷ್ಟೇ ಸರ್ಕಾರದ ಗಮನಸೆಳೆಯುವುದು ಸಾಧ್ಯವಿದೆ. ಈ ದಿಸೆಯಲ್ಲಿ ರಾಜ್ಯದ ದಲಿತ ಸಂಘಟನೆಗಳು ಹೋರಾಟದ ಹಾದಿಯಲ್ಲಿ ಒಟ್ಟಾಗಿ ನಡೆಯಲು ನಿರ್ಧರಿಸಿರುವುದು ಸ್ವಾಗತಾರ್ಹ. ಅವಕಾಶ ವಂಚಿತ ಸಮುದಾಯಗಳಿಗೆ ನ್ಯಾಯ ದೊರಕುವುದು ಸಾಮುದಾಯಿಕ ಪ್ರಯತ್ನಗಳಿಂದಷ್ಟೇ ಸಾಧ್ಯ. ದಲಿತ ಸಂಘಟನೆಗಳ ನಡುವಿನ ಬಿರುಕನ್ನು ರಾಜಕೀಯ ಪಕ್ಷಗಳು ಈವರೆಗೂ ತಮ್ಮ ಹಿತಾಸಕ್ತಿಗೆ ಬಳಸಿಕೊಂಡಿರುವುದೇ ಹೆಚ್ಚು. ಇದರಿಂದಾಗಿ, ದಲಿತರು ಮತಬ್ಯಾಂಕ್‌ಗಳಾಗಿ ಚಲಾವಣೆಯಲ್ಲಿ ಇರುತ್ತಾರೆಯೇ ಹೊರತು, ಅಧಿಕಾರದ ನಿರ್ಣಾಯಕ ಸ್ಥಾನಗಳಿಗೆ ಬರುವುದು ಕಷ್ಟಸಾಧ್ಯ. ದಲಿತ ಸಂಘಟನೆಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಲು ಸಾಧ್ಯವಾದಾಗಷ್ಟೇ ಸಮುದಾಯದ ಅಭಿವೃದ್ಧಿ ಮತ್ತು ರಾಜಕೀಯ ಹಿತಾಸಕ್ತಿ ರಕ್ಷಣೆಯ ಪ್ರಯತ್ನಗಳಿಗೆ ಬಲ ಬರಬಹುದು. ಧರ್ಮನಿರಪೇಕ್ಷತೆಯನ್ನು ಪ್ರತಿಪಾದಿಸುವ ಸಂವಿಧಾನವನ್ನು ಅಣಕ ಮಾಡುವಂತಹ ಘಟನೆಗಳು ದೇಶದಲ್ಲಿ ನಿರಂತರವಾಗಿ ನಡೆಯುತ್ತಿವೆ. ದೇಶದ ವಿವಿಧ ಭಾಗಗಳಲ್ಲಿ ಅಸ್ಪೃಶ್ಯತೆ ಆಚರಣೆಯ ಘಟನೆಗಳು ಆಗಾಗ ವರದಿಯಾಗುತ್ತಲೇ ಇವೆ. ದಲಿತ ಹೆಣ್ಣುಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಅತ್ಯಾಚಾರಗಳು ನಡೆಯುತ್ತಿವೆ. ಆಡಳಿತ ವ್ಯವಸ್ಥೆಯೇ ಕೋಮುವಾದವನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪೋಷಿಸುತ್ತಿದೆ. ಈ ಎಲ್ಲ ಶೋಷಣೆಯನ್ನು ತಡೆಗಟ್ಟಬೇಕಾದ ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನಗಳೂ ನಡೆಯುತ್ತಿವೆ. ಇಂಥ ಸಂದರ್ಭದಲ್ಲಿ, ಸಂವಿಧಾನವನ್ನು ಬಲಪಡಿಸಬೇಕಾದ ಹೊಣೆಗಾರಿಕೆ ಪ್ರಜಾಪ್ರಭುತ್ವವನ್ನು ಹಂಬಲಿಸುವ ಪ್ರತಿಯೊಬ್ಬ ನಾಗರಿಕನದೂ ಆಗಿದೆ. ವಿಶೇಷವಾಗಿ, ದಲಿತ ಸಮುದಾಯಕ್ಕೆ ಸೇರಿದವರು ಸಂವಿಧಾನದ ಸ್ವರೂಪಕ್ಕೆ ಗಾಸಿಯಾಗದಂತೆ ಎಚ್ಚರ ವಹಿಸಬೇಕಾಗಿದೆ.

ಬೆಂಗಳೂರಿನಲ್ಲಿ ನಡೆದ ‘ಐಕ್ಯತಾ ಸಮಾವೇಶ’ ದಲಿತ ಮನಸ್ಸುಗಳು ಜಾಗೃತಗೊಂಡ ಸಂಕೇತದಂತಿದೆ. ಆದರೆ, ಈ ಸಮಾವೇಶವೂ ಟೀಕೆಟಿಪ್ಪಣಿಗಳಿಂದ ಮುಕ್ತವಾಗಿಲ್ಲ ಎನ್ನುವುದನ್ನು ಮರೆಯಬಾರದು. ಎಲ್ಲರನ್ನೂ ಒಳಗೊಳ್ಳುವ ಪ್ರಯತ್ನ ನಡೆದಿಲ್ಲ ಎನ್ನುವುದರ ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅಸಮಾಧಾನದ ನಡುವೆಯೂ ಸಮಾವೇಶ ದೊಡ್ಡ ಯಶಸ್ಸು ಕಂಡಿರುವುದು ಹಾಗೂ ಯುವಜನ ಗಮನಾರ್ಹ ಸಂಖ್ಯೆಯಲ್ಲಿ ಭಾಗವಹಿಸಿರುವುದು, ಇಂಥ ಸಾಮೂಹಿಕ ನಡೆ ಈ ಕಾಲಕ್ಕೆ ಎಷ್ಟು ಅಗತ್ಯ ಎನ್ನುವುದನ್ನು ಸೂಚಿಸುವಂತಿದೆ. ಈ ಯಶಸ್ಸು ಸಂಘಟನೆಗಳ ಮುಖಂಡರ ಮನಸ್ಸುಗಳನ್ನು ಇನ್ನಷ್ಟು ತಿಳಿಯಾಗಿಸಿ, ಮುಂದಿನ ದಿನಗಳಲ್ಲಿ ಎಲ್ಲ ದಲಿತರನ್ನೂ ಒಟ್ಟಿಗೆ ಸಂಘಟಿಸಿ ಕಾರ್ಯನಿರ್ವಹಿಸಲು ಅವರಿಗೆ ಪ್ರೇರಣೆಯಾಗಬೇಕು. ಮನಸ್ಸುಗಳನ್ನು ಬೆಸೆಯುವಂತಹ ಹಾಗೂ ರಾಜಕೀಯ ಎಚ್ಚರ ಮೂಡಿಸುವ ಇಂತಹ ಪ್ರಯತ್ನಗಳಿಗೆ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ಶಕ್ತಿಯಿದೆ. ಆ ಕಾರಣದಿಂದಲೇ ದೇಶದ ವಿವಿಧ ಭಾಗಗಳಲ್ಲೂ ದಲಿತರ ಏಕತಾ ಸಮಾವೇಶಗಳು ನಡೆಯಬೇಕು. ಕರ್ನಾಟಕದ ದಲಿತ ಸಂಘಟನೆಗಳ ಒಗ್ಗಟ್ಟಿನ ಪ್ರಯತ್ನ ಉಳಿದ ರಾಜ್ಯಗಳಿಗೂ ಮಾದರಿಯಾಗಬೇಕು.

ದಿನದ ಟ್ವೀಟ್

ಚಾಲನೆಯಲ್ಲಿ ಎಚ್ಚರವಿರಲಿ



ಪ್ರತಿದಿನ ರಸ್ತೆ ಅಪಘಾತಗಳಲ್ಲಿ ಅಮೂಲ್ಯ ಜೀವಗಳು ಬಲಿ ಆಗುತ್ತಿರುವುದು ನಿಜಕ್ಕೂ ದುಃಖದ ಸಂಗತಿ. ಸಿಂದಗಿಯ ಸಿಪಿಐ ರವಿ ಮತ್ತು ಅವರ ಪತ್ನಿಯ ಆತ್ಮಕ್ಕೆ ಶಾಂತಿ ಸಿಗಲಿ. ರವಿ ಅವರು ನನ್ನೊಟ್ಟಿಗೆ ಪಿಎಸ್‌ಐ ಆಗಿ ಕೆಲಸ ಮಾಡಿದ್ದರು. ಅಸುರಕ್ಷಿತವಾದ ರೀತಿಯಲ್ಲಿ ವಾಹನ ಚಾಲನೆ ಮಾಡುವ ಮೂಲಕ ಅಕಾಲ ಮರಣಕ್ಕೆ ದಯವಿಟ್ಟು ಯಾರೂ ತುತ್ತಾಗಬೇಡಿ.

ಅಲೋಕ್ ಕುಮಾರ್, ಎಡಿಜಿಪಿ, ಕಾನೂನು ಮತ್ತು ಸುವ್ಯವಸ್ಥೆ

ಕಿಡಿನುಡಿ

ವಿಧಾನಸಭೆಯಲ್ಲಿ ಮಂಡನೆಯಾಗಿರುವ ವರದಿಯೊಂದರ ಪ್ರಕಾರ, ರಾಜ್ಯದ 875ಕ್ಕೂ ಹೆಚ್ಚಿನ ಸೌಹಾರ್ದ ಸಹಕಾರ ಸಂಘಗಳು ₹ 20,000 ಕೋಟಿಗೂ ಹೆಚ್ಚು ಹಣವನ್ನು, 50 ಲಕ್ಷಕ್ಕೂ ಹೆಚ್ಚಿನ ಅಮಾಯಕ ಠೇವಣಿದಾರರಿಗೆ ವಂಚಿಸಿವೆ. ಸರ್ಕಾರ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ನ್ಯಾಯ ಸಿಗುವುದು ಯಾವಾಗ?



ಭಾಸ್ಕರ್ ರಾವ್, ಎಎಪಿ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 8-12-1997

- **ಕಾರಂತರ ಸ್ಥಿತಿ ವಿಷಮ: ಮಣಿಪಾಲಕ್ಕೆ ಪಟೇಲ್ ಭೇಟಿ**

ಉಡುಪಿ, ಡಿ. 7– ಶಿವರಾಮ ಕಾರಂತರ ದೇಹಸ್ಥಿತಿ ಇನ್ನಷ್ಟು ವಿಷಮಗೊಂಡಿದೆ. ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಮಣಿಪಾಲಕ್ಕೆ ಭೇಟಿ ನೀಡಿ, ಕಳೆದ ಎರಡು ದಿನಗಳಿಂದ ಸಾವು ಬದುಕಿನ ಮಧ್ಯೆ ಹೋರಾಡುತ್ತಿರುವ ಅವರ ಆರೋಗ್ಯ ವಿಚಾರಿಸಿದರು.

ಬೆಂಗಳೂರಿನಿಂದ ಬಂದಿಳಿದ ಪಟೇಲರು ನೇರವಾಗಿ ಆಸ್ಪತ್ರೆಗೆ ತೆರಳಿ ಕಾರಂತರನ್ನು ಕಂಡು, ರಾಜ್ಯದ ಜನತೆಯ ಪರವಾಗಿ ಅವರು ಶೀಘ್ರ ಗುಣಮುಖರಾಗಲೆಂದು ಹಾರೈಸಿದರು.

- **ಆಂಧ್ರ ಬಾಂಬ್ ಸ್ಫೋಟ ಆರೋಪಿ ಸೂರಿ ಚಿತ್ರದುರ್ಗದಲ್ಲಿ ಬಂಧನ**

ಚಿತ್ರದುರ್ಗ, ಡಿ. 7– ಇತ್ತೀಚೆಗೆ ಹೈದರಾಬಾದ್‌ನ ಚಲನಚಿತ್ರ ಸ್ಟುಡಿಯೊದಲ್ಲಿ ನಡೆದ ಭೀಕರ ಕಾರು ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ಇಬ್ಬರನ್ನು ಪೊಲೀಸರು ಇಲ್ಲಿನ ವಸತಿಗೃಹವೊಂದರಲ್ಲಿ ನಿನ್ನೆ ರಾತ್ರಿ ವಶಕ್ಕೆ ತೆಗೆದುಕೊಂಡಿದ್ದಾರೆ.

ಒಬ್ಬಾತ ಸ್ಫೋಟದ ಸೂತ್ರಧಾರ ಸೂರ್ಯನಾರಾಯಣ ರೆಡ್ಡಿ ಅಲಿಯಾಸ್ ಸೂರಿ ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 8-12-1972

- **ಹತೋಟಿ ರೇಖೆ ಗುರುತಿಸುವ ಹಾದಿ ಸುಗಮ: ಠಾಕೂರ್ ಚೌಕ ಪ್ರಶ್ನೆ– ಉಭಯ ಸೇನಾನಿಗಳ ಮಾತುಕತೆ ಸಫಲ**

ನವದೆಹಲಿ, ಡಿ. 7– ಜಮ್ಮು ಪ್ರದೇಶದಲ್ಲಿ ಹತೋಟಿ ರೇಖೆಯನ್ನು ಗುರುತಿಸುವ ವಿಚಾರದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ಭವಿಸಿದ್ದ ಭಿನ್ನಾಭಿಪ್ರಾಯಗಳು ಬಗೆಹರಿದಿವೆ. ಭಾರತದ ಪ್ರಧಾನ ದಂಡನಾಯಕ ಜನರಲ್ ಮಾಣೆಕ್ ಷಾ ಮತ್ತು ಪಾಕಿಸ್ತಾನದ ಪ್ರಧಾನ ದಂಡನಾಯಕ ಟಿಕ್ಕಾಖಾನ್‌ರ ನಡುವೆ ಇಂದು ಲಾಹೋರಿನಲ್ಲಿ ನಡೆದ ಎರಡನೇ ಸಭೆಯಲ್ಲಿ ಈ ಪ್ರಶ್ನೆ ಕೊನೆಗೂ ಇತ್ಯರ್ಥಗೊಂಡಿತು.

‘ಉಭಯ ದಂಡನಾಯಕರು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು ಭಾರತದ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಭಗತ್ ಮತ್ತು ಪಾಕಿಸ್ತಾನದ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಅಬ್ದುಲ್ ಹಮೀದ್ ಖಾನರು ಸುಚೇತಗಢದಲ್ಲಿ ಡಿಸೆಂಬರ್ 11ರಂದು ಸಭೆ ಸೇರಿ ಹತೋಟಿ ರೇಖೆ ಗುರುತಿಸುವುದನ್ನು ಪೂರ್ಣಗೊಳಿಸಲು ಆದೇಶ ನೀಡಿದ್ದಾರೆ’ ಎಂದು ಜಂಟಿ ಹೇಳಿಕೆ ತಿಳಿಸಿದೆ.

- **ರಾಜ್ಯಗಳ ವಾರ್ಸಿಟಿ ಸೆನೆಟ್‌ಗಳಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯಕ್ಕೆ ಸಮಿತಿ ಶಿಫಾರಸು**

ಬೆಂಗಳೂರು, ಡಿ. 7– ರಾಜ್ಯದ ವಿಶ್ವವಿದ್ಯಾನಿಲಯಗಳ ಸೆನೆಟ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು, ಆ ಸಂಬಂಧದಲ್ಲಿ ರಚಿಸಲಾದ ಸಮಿತಿ ಶಿಫಾರಸು ಮಾಡಿದೆ.

ಪವಾಡಗಳನ್ನು ಬಯಲಿಗೆಳೆಯಬೇಕಾದ ವಿಜ್ಞಾನಿಗಳೇ ಪವಾಡ ಸೃಷ್ಟಿಗೆ ನೆರವಾದರೆ ಹೇಗೆ?

ಶ್ರೀರಾಮನ ಹಣೆಗೆ ವಿಜ್ಞಾನದ ಲೈಟು



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಅಯೋಧ್ಯೆಯ ರಾಮಮಂದಿರ 2024ರಲ್ಲಿ ಪೂರ್ತಿಗೊಳ್ಳಲಿದೆ. ಮುಂದೆ ಪ್ರತಿವರ್ಷವೂ ರಾಮನವಮಿಯ ದಿನ ಅಲ್ಲಿನ ಶ್ರೀರಾಮನ ವಿಗ್ರಹದ ಮೇಲೆ ಸೂರ್ಯ ಕಿರಣಗಳು ಬೀಳುವಂತೆ ಮಾಡಬೇಕೆಂದು ಭಕ್ತಸಮೂಹ ನಮ್ಮ ದೇಶದ ವಿಜ್ಞಾನಿಗಳನ್ನು ಕೇಳಿಕೊಂಡಿದೆ. ಈ ಕೋರಿಕೆಯನ್ನು ಸುಗ್ರೀವಾಜ್ಞೆ ಎಂದೇ ಪರಿಗಣಿಸಿದಂತೆ ಭಾರತದ ಅತಿ ದೊಡ್ಡ ವಿಜ್ಞಾನ ತಂತ್ರಜ್ಞಾನ ಮಂಡಳಿ (ಸಿಎಸ್‌ಐಆರ್) ಅದಾಗಲೇ ಪರಿಣತರ ಒಂದು ತಂಡವನ್ನು ಕಟ್ಟಿ ಕೆಲಸ ಪ್ರಾರಂಭಿಸಿದೆ. ಈ ಮಧ್ಯೆ ಅದಕ್ಕೆ ಆಕ್ಷೇಪಣೆ ಎದ್ದಿದೆ. ಇಂಥ ಕೆಲಸಗಳಲ್ಲಿ ಭಾಗಿಯಾಗುವುದು ವಿಜ್ಞಾನಿಗಳಿಗೆ ತರವಲ್ಲವೆಂದು ಇನ್ನೊಂದು ಬಣದ ವಿಜ್ಞಾನಿಗಳು ಕೆಂಪು ಬಾವುಟ ಎತ್ತಿದ್ದಾರೆ. ಏನಿದರ ಆಳ-ಅಗಲ?

ರಾಮನವಮಿಯ ದಿನ ಶ್ರೀರಾಮನ ಹಣೆಯ ಮೇಲೆ ಸೂರ್ಯನ ಬೆಳಕು ಬಿದ್ದರೆ ಅದೊಂದು ಪವಾಡಸದೃಶ ಚಮತ್ಕಾರವೆಂದೇ ಬಿಂಬಿಸಬಹುದು. ಆದರೆ ಅದು ಸುಲಭದ ಕೆಲಸವಲ್ಲ. ಏಕೆಂದರೆ ಆಕಾಶದಲ್ಲಿ ಸೂರ್ಯನ ಪಥ ಪ್ರತಿವರ್ಷವೂ ತುಸುತುಸುವೇ ಬದಲಾಗುತ್ತಿರುತ್ತದೆ. ಈ ವರ್ಷದ ರಾಮನವಮಿಯ ದಿನ ವಿಗ್ರಹದ ಹಣೆಯ ಮೇಲೆ ಸೂರ್ಯಕಿರಣ ಬಿದ್ದರೆ ಮುಂದಿನ ವರ್ಷ ಅದು ರಾಮನ ಬಿಲ್ಲಿನ ಮೇಲೋ ಅಥವಾ ಗೋಡೆಯ ಮೇಲೋ ಬೀಳಬಹುದು. ವಿಗ್ರಹದ ಹಣೆಯ ಮೇಲೆಯೇ ಪ್ರತಿವರ್ಷ ಬೆಳಕು ಬೀಳುವಂತೆ ಮಾಡಲು ಸುಲಭ ಉಪಾಯ ಇದೆ: ಅದೇನೆಂದರೆ ಗರ್ಭಗುಡಿಯೊಳಗೆ ಬಿಸಿಲು ಬೀಳುವಂತೆ ಮಾಡಿ ಅಲ್ಲಿನ ಒಂದೆರಡು ಕನ್ನಡಿಗಳ ಮೂಲಕ ವಿಗ್ರಹದ ಹಣೆಗೆ ಬೆಳಕನ್ನು ಚೆಲ್ಲಬಹುದು. ಅದಕ್ಕೆಂದೇ ತರಬೇತಿ ಪಡೆದ ಯಾರಿಗಾದರೂ ನಾರು ಮಡಿ ಉಡಿಸಿ ಅಲ್ಲಿ ನಿಲ್ಲಿಸಬಹುದು. ಆದರೆ ಹಾಗೆ ಮಾಡುವುದರಲ್ಲಿ ಏನು ಸ್ವಾರಸ್ಯ? ಯಾರ ಹಸ್ತಕ್ಷೇಪವೂ ಇಲ್ಲದೆ ಸೂರ್ಯರಶ್ಮಿ ತಂತಾನೇ ಬೀಳಬೇಕು. ಅಂದರೆ ಅಲ್ಲೊಂದು ಆಟೊಮ್ಯಾಟಿಕ್ ತಾಂತ್ರಿಕ ವ್ಯವಸ್ಥೆ ಇರಬೇಕು; ಅದಕ್ಕೇ ಖಗೋಳ ವಿಜ್ಞಾನಿಗಳು, ವಾಸ್ತುಶಿಲ್ಪಿಗಳು, ಎಂಜಿನಿಯರ್‌ಗಳು ಸೇರಿ ಸೂರ್ಯ ದೇವರು ಶ್ರೀರಾಮ ದೇವರನ್ನು ಸ್ಪರ್ಶಿಸುವಂತೆ ಮಾಡಬೇಕು.

ಅದು ನಿಜಕ್ಕೂ ಅಷ್ಟು ಕಷ್ಟದ ಕೆಲಸವೆ? ಬೆಂಗಳೂರಿನಲ್ಲಿ ಕ್ರಿ.ಶ. 9ನೇ ಶತಮಾನದಲ್ಲಿ ಸ್ಥಾಪಿಸಲಾದ ಗವಿ ಗಂಗಾಧರೇಶ್ವರನ ವಿಗ್ರಹದ ಮೇಲೆ ಬಿಸಿಲು ಬೀಳುತ್ತದಲ್ಲ? ಆಂಧ್ರಪ್ರದೇಶದ ಶ್ರೀಕಾಕುಲಂ ಬಳಿಯ ಅರಸವಳ್ಳಿಯಲ್ಲಿ ಕ್ರಿ.ಶ. ಏಳನೆಯ ಶತಮಾನದಲ್ಲಿ ನಿರ್ಮಿಸಲಾದ ಸೂರ್ಯನಾರಾಯಣ ದೇವಸ್ಥಾನದಲ್ಲೂ ಈ ವಿದ್ಯಮಾನವನ್ನು ವೀಕ್ಷಿಸಬಹುದು. ಥಾಯ್ಲೆಂಡಿನ ಬುರಿರಾಮ್ ಪ್ರಾಂತದ ಶಿವ ದೇವಾಲಯದಲ್ಲಿ, ಗದುಗಿನ ವೀರನಾರಾಯಣ ದೇಗುಲದಲ್ಲೂ ಈ ವ್ಯವಸ್ಥೆ ಇದೆ.

ಸೂರ್ಯನ ಚಲನೆಯನ್ನು ಆಧರಿಸಿ ಸಾವಿರಾರು ವರ್ಷಗಳ ಹಿಂದೆಯೇ ಜಗತ್ತಿನ ಬಹುತೇಕ ನಾಗರಿಕತೆಗಳಲ್ಲಿ ಪಂಚಾಂಗಗಳನ್ನೂ ಸಿದ್ಧಪಡಿಸಿ ವಾಸ್ತುಶಿಲ್ಪಗಳನ್ನೂ ರಚಿಸಿದ ಬಹಳಷ್ಟು ಉದಾಹರಣೆಗಳಿವೆ. ಟರ್ಕಿಯ ರಾಜಧಾನಿ ಇಸ್ತಾಂಬುಲ್‌ನ ಹೇಯುವಾ ಸೋಫಿಯಾದಲ್ಲಿ ದಕ್ಷಿಣಾಯನದ ಆರಂಭದಲ್ಲಿ ಮತ್ತು ವೆನಿಸ್‌ನ ಸಾಂತಾ ಸೋಫಿಲಾ ಇಗರ್ಜಿಯಲ್ಲಿ ಉತ್ತರಾಯಣದ ಆರಂಭದಲ್ಲಿ ಸೂರ್ಯ ಕಿರಣ ಪ್ರವೇಶ ಮಾಡುತ್ತದೆ. ಇವೆರಡೂ ಹತ್ತನೇ ಶತಮಾನಕ್ಕೂ ಮೊದಲೇ ಕಟ್ಟಲಾದ ವಾಸ್ತುಶಿಲ್ಪಗಳು. ಎರಡು ಸಾವಿರ ವರ್ಷಗಳ ಹಿಂದೆ ಬೌದ್ಧರು ನಿರ್ಮಿಸಿದ ಅಜಂತಾ ಸಂಕೀರ್ಣದ 26ನೇ ಗುಹಾಲಯದಲ್ಲೂ ಈ ವಿದ್ಯಮಾನ ಜರುಗುತ್ತದೆ. ಅಷ್ಟೇಕೆ ಮೂರೂವರೆ ಸಾವಿರ ವರ್ಷಗಳ ಹಿಂದಿನ ಮಾಯನ್ ನಾಗರಿಕತೆಯಲ್ಲಿ, ಐದು ಸಾವಿರ ವರ್ಷಗಳ ಹಿಂದಿನ ಪಿರಮಿಡ್‌ಗಳಲ್ಲೂ ಶಿಲಾಸ್ತಂಭಗಳ ಮೇಲೆ ಬೀಳುವ ಸೂರ್ಯನ ಬೆಳಕನ್ನು ಆಧರಿಸಿದ ಕ್ಯಾಲೆಂಡರ್ ಗೀರುಗಳನ್ನು ಕೊರೆಯಲಾಗಿದೆ. ಹೊಸತೇನು ಬಂತು?

ಸೌರಮಾನ ಪಂಚಾಂಗದಲ್ಲಿ ವರ್ಷದ ಇಂಥ ದಿನ ಸೂರ್ಯ ಎಲ್ಲಿರುತ್ತಾನೆಂದು ನಿರ್ಧರಿಸುವುದು ಸುಲಭ. ರಾಮನವಮಿ ಹಾಗಲ್ಲ. ಅದನ್ನು ಚಾಂದ್ರಮಾನ ಪದ್ಧತಿಯಲ್ಲಿ ನಿರ್ಧರಿಸುವುದರಿಂದ ಅಂದು ಸೂರ್ಯ ಎಲ್ಲಿರುತ್ತಾನೆಂದು ನಿರ್ಧರಿಸಲು ಸೌರಮಾನ ಪದ್ಧತಿಯನ್ನೇ ಆಧರಿಸಬೇಕಾಗುತ್ತದೆ. ರಾಮನವಮಿ ಒಂದೊಂದು ವರ್ಷ ಒಂದೊಂದು ದಿನ ಬರುತ್ತದೆ. 2022ರಲ್ಲಿ ಏಪ್ರಿಲ್ 10, 2021ರಲ್ಲಿ ಏಪ್ರಿಲ್ 21, 2018ರಲ್ಲಿ ಮಾರ್ಚ್ 25, ಬರುವ 2024ರಲ್ಲಿ ಏಪ್ರಿಲ್ 17 ಹೀಗೆ ಬದಲಾಗುತ್ತ ಪ್ರತೀ 19 ವರ್ಷಗಳ ನಂತರ ಮತ್ತೆ ಮೊದಲಿನ ಸ್ಥಾನಕ್ಕೇ ಬರುತ್ತದೆ. ಹೀಗೆ ಚಾಂದ್ರಮಾನ, ಸೌರಮಾನ ಪದ್ಧತಿಗಳನ್ನು ಹೊಂದಿಸಲು ಗಣಿತಸೂತ್ರಗಳು ಬೇಕು. ಅದಕ್ಕೆಂದು 19 ವರ್ಷಗಳ ಒಂದು ಕಾಲಯಂತ್ರವನ್ನು ನಿರ್ಮಿಸಬೇಕು. ಅದರಲ್ಲಿ ಗಿಯರ್ ಮತ್ತು ಚಕ್ರಗಳನ್ನು ಕೂರಿಸಿ ಅದಕ್ಕೆ ಕನ್ನಡಿಗಳನ್ನು ಜೋಡಿಸಬೇಕು. ಅವು ಕರಾರುವಾಕ್ಕಾಗಿ ಇಷ್ಟಿಷ್ಟೇ ಕೋನದಲ್ಲಿ ತಿರುಗುವಂತೆ ಮಾಡಲು ಇಲೆಕ್ಟ್ರಾನಿಕ್ ಸರ್ಕ್ಯೂಟ್‌ಗಳು ಬೇಕು. ನಮ್ಮ ವಿಜ್ಞಾನಿಗಳು ಹಿಂದೆಂದೂ ಇಂಥ ಗಡಿಯಾರವನ್ನು ನಿರ್ಮಿಸಿರಲಿಲ್ಲ. ಅದಕ್ಕೇ ಪುಣೆ, ಬೆಂಗಳೂರಿನ ಖಗೋಲವಿಜ್ಞಾನಿಗಳನ್ನೂ ರೂರ್ಕಿಯಲ್ಲಿನ ವಾಸ್ತುತಜ್ಞರನ್ನೂ ಸೇರಿಸಿ ಒಟ್ಟಾರೆ ವಿನ್ಯಾಸ ಸಿದ್ಧವಾಗಿದೆ. ಮೊದಲ ಪ್ರಾತ್ಯಕ್ಷಿಕೆಯನ್ನು ರಾಮಜನ್ಮಭೂಮಿ ಟ್ರಸ್ಟ್‌ನ ಪದಾಧಿಕಾರಿಗಳಿಗೆ ತೋರಿಸಲಾಗಿದೆ.



ಈ ‘ಸಾಹಸ’ಕ್ಕೆ ಬೆಂಗಳೂರು, ಪುಣೆ, ಮುಂಬೈ, ಕೋಲ್ಕತ್ತ, ಚೆನ್ನೈ ಸೇರಿದಂತೆ ಭಾರತದ ಹನ್ನೆರಡು ನಗರಗಳ ಪ್ರಮುಖ ವಿಜ್ಞಾನ- ಸಂಶೋಧನ ಸಂಸ್ಥೆಗಳ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅವರ ಆಕ್ಷೇಪಣೆ ಏನೆಂದರೆ (1) ಕನ್ನಡಿಯನ್ನು ಕೈಯಲ್ಲಿ ಹೊರಳಿಸಿ ಸಲೀಸಾಗಿ ಮಾಡಬಹುದಾದ ಕೆಲಸಕ್ಕೆ ಅನಗತ್ಯವಾಗಿ ಕ್ಲಿಷ್ಟ ತಾಂತ್ರಿಕ ಸಲಕರಣೆಗಳನ್ನು ಹೂಡಲಾಗುತ್ತಿದೆ. ಇದು ‘ಇರುವೆಯನ್ನು ಕೊಲ್ಲಲೆಂದು ತುಪಾಕಿ ಬಳಸಿದಂತೆ’. (2) ಎಂಜಿನಿಯರಿಂಗ್ ಪದವಿ ಓದುವ ವಿದ್ಯಾರ್ಥಿಗಳು ಸಲೀಸಾಗಿ ಮಾಡಬಹುದಾದ ಈ ಪ್ರಾಜೆಕ್ಟ್‌ನಿಂದ ವಿಜ್ಞಾನಕ್ಕೆ ಹೊಸ ಕೊಡುಗೆಯೇನೂ ಸಿಕ್ಕಂತಾಗುವುದಿಲ್ಲ. ಭಾರತದ ವಿಜ್ಞಾನಿಗಳ ಪ್ರತಿಷ್ಠೆ ಇದರಿಂದ ಇನ್ನಷ್ಟು ಕೆಳಕ್ಕಿಳಿಯುತ್ತದೆ ವಿನಾ ಮೇಲೇರುವುದಿಲ್ಲ. (3) ಸಂವಿಧಾನದ ಆಶಯದಂತೆ ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸುತ್ತ, ಹೊಸ ಸಂಶೋಧನೆಗಳತ್ತ ಸಾಗಬೇಕಾದ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳು ಇಂಥ ‘ಮೂರ್ಖ ಕೆಲಸಗಳಲ್ಲಿ’ ಮಗ್ನವಾಗುವುದು ತರವಲ್ಲ (ಮೂರ್ಖ ಕೆಲಸ, ಇರುವೆ-ತುಪಾಕಿ ಇವೆಲ್ಲವೂ ಈ ವಿಜ್ಞಾನಿಗಳ ಮೂಲ ಹೇಳಿಕೆಯಲ್ಲಿವೆ). ಒಟ್ಟಾರೆ ಇವರ ಆಶಯ ಏನೆಂದರೆ, ವಿಜ್ಞಾನವನ್ನು ಆರಾಧಿಸುವ ಬದಲು ದೈವೀಶಕ್ತಿಯ ಆರಾಧನೆಗೆ ಇನ್ನಷ್ಟು ಪ್ರೇರಣೆ ಕೊಡಬಲ್ಲ ಇಂಥ ಯೋಜನೆಗೆ ವಿಜ್ಞಾನಿಗಳು ಕೈಹಾಕಲೇಬಾರದಿತ್ತು. ತೆರಿಗೆದಾರನ ಹಣವನ್ನು ಹೀಗೆ ಒಂದು ದೇಗುಲದ ಪ್ರತಿಷ್ಠೆಯನ್ನು ಮೇಲೇರಿಸುವ ಕೆಲಸಕ್ಕೆ ಬಳಸಬಾರದಿತ್ತು.

ರಾಮಭಕ್ತರಿಗೆ ಇದರಲ್ಲೇನೂ ತಪ್ಪು ಕಾಣುತ್ತಿಲ್ಲ. ಪುರಾತನ ಕಾಲದಿಂದಲೂ ದೇಗುಲಗಳ ನಿರ್ಮಾಣಕ್ಕೆ ವೈಜ್ಞಾನಿಕ ಚಿಂತನೆಯೇ ಮೂಲಾಧಾರವಾಗಿತ್ತು. ಈಗಿನದು ಅದರ ಮುಂದುವರಿಕೆಯೇ ಆಗಿದೆ. ಇಷ್ಟಕ್ಕೂ ಅಯೋಧ್ಯೆಯ ರಾಮಮಂದಿರದ ಬಳಿ ಭೂಕಂಪನ ಸಾಧ್ಯತೆಯ ಪರಿಶೀಲನೆಯಲ್ಲಿ, ಅಡಿಪಾಯದ ಮಣ್ಣು ಪರೀಕ್ಷೆಯಲ್ಲಿ ಆಗಲೇ ಪ್ರತಿಷ್ಠಿತ ವೈಜ್ಞಾನಿಕ ಸಂಸ್ಥೆಗಳು ತಮ್ಮ ಸಹಯೋಗವನ್ನು ನೀಡಿವೆ. ಆಟೊಮ್ಯಾಟಿಕ್ ಕನ್ನಡಿ ಕೂರಿಸುವುದೂ ಆ ಸಹಯೋಗದ ಭಾಗವೇ ತಾನೆ? ಮೇಲಾಗಿ ಹಿಂದೂ ದೇವಾಲಯಗಳು ಸರ್ಕಾರಕ್ಕೆ ಭಾರೀ ಆದಾಯವನ್ನು ತಂದುಕೊಡುತ್ತಿವೆ, ಅದನ್ನು ಯಂತ್ರನಿರ್ಮಾಣಕ್ಕೆ ಬಳಸಿದರೇನು ತಪ್ಪು?

ಆದಾಯ, ವಿನಿಯೋಗದ ವಿಷಯ ಬಂದಾಗ ಈ ವಿಷಯ ತುಸು ಕ್ಲಿಷ್ಟ ಆಗುತ್ತದೆ. ರಾಮನವಮಿಯ ದಿನ ಸೂರ್ಯ ಕಿರಣ ಬೀಳುತ್ತದೆಂದು ಲಕ್ಷೋಪಲಕ್ಷ ಜನರು ಅದನ್ನು ನೇರವಾಗಿ ನೋಡಲಂತೂ ಸಾಧ್ಯವಿಲ್ಲ. ಸಿ.ಸಿ. ಟಿ.ವಿ. ಕ್ಯಾಮೆರಾದ ಮೂಲಕ ಜಗತ್ತಿಗೆಲ್ಲ ಪ್ರಸಾರ ಮಾಡಲೆಂದು ಯಾರೋ ಪ್ರಾಯೋಜಕತ್ವ ಪಡೆಯುತ್ತಾರೆ; ಯಾವ್ಯಾವುದೋ ಚಾನೆಲ್‌ಗಳು, ಜಾಲತಾಣಗಳು ‘ದೈವೀಪ್ರಭೆ’ಯ ಟಾಂಟಾಂ ಮಾಡುತ್ತವೆ. ಮೂಢನಂಬಿಕೆಯ ಇನ್ನಷ್ಟು ಪ್ರಖರ ಪ್ರಸಾರಕ್ಕೆಂದು ಸೂರ್ಯ-ಚಂದ್ರ ಗ್ರಹಣಗಳ ಚಂದದ ವಿಡಿಯೊ ಬಳಸಿದ ಹಾಗೆ.

ಎಂಥ ವಿಪರ್ಯಾಸ ನೋಡಿ! ನಮ್ಮೆಲ್ಲರ ಹಣೆಯ ಮೇಲೆ ನಿತ್ಯವೂ ಸೂರ್ಯ ಕಿರಣ ಬೀಳುತ್ತಲೇ ಇರುತ್ತದೆ. ಗುಡಿ ಕಟ್ಟಿ ದೇವರನ್ನು ಕತ್ತಲಲ್ಲಿ ಕೂರಿಸಿ ವರ್ಷಕ್ಕೊಮ್ಮೆ ಆತನ ಮೇಲೆ ತುಸು ಬೆಳಕು ಚೆಲ್ಲಲೆಂದು ಕ್ಲಿಷ್ಟ ಯಾಂತ್ರಿಕ ವ್ಯವಸ್ಥೆ ನಿರ್ಮಿಸಿ ಅದೊಂದು ಸಾಧನೆಯೆಂದು ಸಂಭ್ರಮಿಸುವುದು- ಇವೆಲ್ಲ ಯಾವ ದೇವರನ್ನು ಮೆಚ್ಚಿಸಲೆಂದೊ!

ಚುರುಮುರಿ



ಪ್ರಾಣಿ ಪ್ರೀತಿ

• ಮಣ್ಣೆರಾಜು

‘ಕಾಡು- ನಾಡಿನ ಗಡಿ ವಿವಾದವನ್ನು ಬಗೆಹರಿಸಿ, ಕಾಡುಪ್ರಾಣಿಗಳು ಗಡಿ ದಾಟದಂತೆ ಮಾಡಿ ಎಂದು ಪ್ರಾಣಿ ಭಯ ಸಂಘದವರು ಸರ್ಕಾರವನ್ನು ಒತ್ತಾಯಿಸಿದ್ದಾರೆ ಕಣ್ರೀ...’ ಅಂದಳು ಸುಮಿ.

‘ಹಾಗಂತ, ಊರಿನ ಸುತ್ತ ಕೋಟೆ ಕಟ್ಟಿ ಕಾಡುಪ್ರಾಣಿಗಳನ್ನು ತಡೆಯಲಾಗುತ್ತಾ? ಮನುಷ್ಯರು ಕಾಡಿಗೆ ಹೋಗಿ ಪ್ರಾಣಿಗಳಿಗೆ ಕೆಡುಕು ಮಾಡದಂತೆ ಕಾಡಿಗೆ ಬೇಲಿ ಹಾಕಬೇಕಾಗುತ್ತದೆ’ ಅಂದ ಶಂಕ್ರಿ.

‘ಕಾಡಿನಲ್ಲಿರಬೇಕಾದ ಪ್ರಾಣಿಗಳು ಗಡಿ ಮೀರಿ ಊರಿಗೆ ನುಗ್ಗುವುದು ನಿಸರ್ಗ ನಿಯಮದ ಉಲ್ಲಂಘನೆ ಅಲ್ವೇನ್ರೀ?’

‘ಗಡಿ ಮೀರಿರುವುದು ಪ್ರಾಣಿಗಳಲ್ಲ, ನಾವು. ಗಡಿಯ ಗೆರೆ ಎಳೆದರೆ ಅರ್ಧ ಊರು ಕಾಡು ಪಾಲಾಗುತ್ತದೆ. ಕಾಡಿನ ಜಾಗವನ್ನು ತಮ್ಮ ಹೆಸರಿಗೆ ಖಾತೆ, ಪಹಣಿ ಮಾಡಿಕೊಡಿ ಎಂದು ಪ್ರಾಣಿಗಳು ಪಟ್ಟು ಹಿಡಿದರೆ, ಬಂಗಲೆ ಕಟ್ಟಲು ಜಾಗವಿಲ್ಲದೆ ನಾವು ಬೋನು ಕಟ್ಟಿಕೊಂಡು ಬಾಳಬೇಕಾಗುತ್ತದೆ’.

‘ಕಾಡಿನಲ್ಲಿ ಗೆಡ್ಡೆಗೆಣಸು, ಹಸಿ ಮಾಂಸ ತಿಂದು ಬಾಯಿ ಕೆಟ್ಟು, ಉಪ್ಪು ಖಾರದ ರುಚಿ ಬಯಸಿ, ನಮ್ಮ ಒಗ್ಗರಣೆ ಊಟದ ವಾಸನೆಗೆ ಮರುಳಾಗಿ ಪ್ರಾಣಿಗಳು ಊರಿನ ಕಡೆ ಬರುತ್ತಿವೆ ಅನಿಸುತ್ತೆ...’

‘ಕಾಡಿನಲ್ಲಿ ರೆಸಾರ್ಟ್, ಹೋಂಸ್ಟೇಗಳನ್ನು ಕಟ್ಟಿಕೊಂಡು ನಾವು ಕಾಡು ಕಬಳಿಸಿರುವಾಗ ಕಾಡುಪ್ರಾಣಿಗಳು ನಾಡಿಗೆ ಬರಬಾರದೆ?’

‘ವನ್ಯಪ್ರಾಣಿಗಳನ್ನು ನಾಡಿಗೆ ಬಿಟ್ಟುಕೊಂಡು ನಾವು ಬಾಳಲಾಗುತ್ತಾ? ಸಾಧು ಸ್ವಭಾವ ರೂಢಿಸಿಕೊಂಡರೆ ಕಾಡುಪ್ರಾಣಿಗಳೂ ಊರಿನಲ್ಲಿ ಬೀದಿನಾಯಿಗಳಂತೆ ನಮ್ಮ ಜೊತೆ ಬಾಳಬಹುದು’.

‘ಕಾಡನ್ನು ನಾವು ಆಕ್ರಮಿಸಿಕೊಂಡಿರುವುದರಿಂದ ಪ್ರಾಣಿಗಳಿಗೂ ಜಾಗ ಕೊಡಬೇಕು. ಪ್ರಾಣಿಗಳ ಜೊತೆ ಬಾಳಿ ಬದುಕುವುದನ್ನು ನಾವು ಕಲಿಯಬೇಕು...’ ಅಂದ ಶಂಕ್ರಿ.

ಸಂಗತ

ವಿಕಾಸದ ವೇದಿಕೆಯಾಗಲಿ ವಿದ್ಯಾಲಯ

ಯಶಸ್ಸನ್ನು ಅಂಕಗಳಲ್ಲಿ ಮಾತ್ರ ಅಳೆಯುವ ಇಂದಿನ ದಿನಗಳಲ್ಲಿ ಮಕ್ಕಳನ್ನು ಪಠ್ಯದ ಜೊತೆಗೆ ಪಠ್ಯೇತರ ಓದಿನತ್ತಲೂ ಸೆಳೆಯುವ ಅಗತ್ಯವಿದೆ

• ಡಾ. ಮುರಳೀಧರ ಕಿರಣಕೆರೆ

ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನವೊಂದರ ಸಂಪೂರ್ಣ ಕೈಬರಹದ ಪ್ರತಿ ಅದು. ಮಕ್ಕಳ ಈ ಬರವಣಿಗೆಯ ಫೋಟೊ ಪ್ರತಿಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ನೋಡಿ ಆಶ್ಚರ್ಯವಾಗಿತ್ತು! ಕುತೂಹಲವನ್ನು ತಣಿಸುವಂತೆ ಹಿಂದಿನಿಂದಲೆ ದೂರವಾಣಿ ಕರೆಯೂ ಬಂದಿತ್ತು.

‘ಸರ್, ಪ್ರತಿದಿನ ಬೆಳಿಗ್ಗೆ ಪ್ರಾರ್ಥನೆಯ ಅವಧಿಯಲ್ಲಿ ಸರದಿಯಂತೆ ಮಕ್ಕಳು ‘ಪ್ರಜಾವಾಣಿ’ ಪತ್ರಿಕೆಯಲ್ಲಿನ ಮುಖ್ಯಾಂಶಗಳನ್ನು ಓದುತ್ತಾರೆ. ಇದು ನಮ್ಮ ನಿತ್ಯದ ಪದ್ಧತಿ’ ಎಂದು ಹೇಳಿದ ಪ್ರಾಥಮಿಕ ಶಾಲೆಯ ಆ ಶಿಕ್ಷಕರ ಮಾತು ವಿಶೇಷವೆನಿಸಲಿಲ್ಲ. ಹಲವು ಶಾಲೆಗಳಲ್ಲಿ ಹೀಗೆ ಪ್ರಮುಖ ಸುದ್ದಿ ಓದುವ ಪರಿಪಾಟವಿದೆ. ಆದರೆ ಕುತೂಹಲ ಕೆರಳಿಸಿದ್ದು ಅವರು ಮುಂದೆ ಹೇಳಿದ ವಿಚಾರ. ‘ನನ್ನ ತರಗತಿಯಲ್ಲಿ ಪದಬಂಧವನ್ನು ಬಿಡಿಸುವ ಚಟುವಟಿಕೆ ನೀಡುತ್ತೇನೆ. ಪದಗಳನ್ನು ಹುಡುಕುವಾಗ ಮಕ್ಕಳು ಉತ್ಸಾಹದ ಬುಗ್ಗೆ. ಇನ್ನು ಲೇಖನಗಳಲ್ಲಿ ಮಕ್ಕಳ ಅರಿವಿಗೆ ನಿಲುಕುವಂತಹ ವಿಚಾರವಿದ್ದರೆ ಅದನ್ನು ಪೂರ್ಣವಾಗಿ ಬರೆದುಕೊಂಡು ಬರುವಂತೆ ಆಯ್ದ ವಿದ್ಯಾರ್ಥಿಗಳಿಗೆ ಸೂಚಿಸುತ್ತೇನೆ. ಇದೇ ಅವರಿಗೆ ಹೋಮ್‌ವರ್ಕ್. ಮಕ್ಕಳು ಬರೆದು ತಂದ ಅಂತಹ ಒಂದು ಲೇಖನವನ್ನೇ ವಾಟ್ಸ್‌ಆ್ಯಪ್‌ನಲ್ಲಿ ನಿಮಗೆ ಕಳುಹಿಸಿದ್ದು’.


‘ಇದರಿಂದ ವಿದ್ಯಾರ್ಥಿಗಳಿಗೆ ಏನು ಪ್ರಯೋಜನ?’ ಎಂಬ ಪ್ರಶ್ನೆಗೆ ಆ ಮೇಷ್ಟ್ರು ಉದ್ದೇಶ ವಿವರಿಸಿದಾಗ ‘ಶಹಬ್ಬಾಷ್’ ಎಂಬ ಉದ್ಗಾರ ಅರಿವಿಲ್ಲದೇ ಹೊರಬಂದಿತ್ತು!

‘ಇದು ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುವ ಸಣ್ಣ ಮಾರ್ಗ. ಅವರೇ ಓದಿ, ಬರೆದು, ಅರ್ಥವಾಗದ್ದನ್ನು ಕೇಳಿ ತಿಳಿದುಕೊಳ್ಳುತ್ತಾರೆ. ತಿಳಿವೂ ವಿಸ್ತಾರವಾಗುತ್ತದೆ. ಪತ್ರಿಕೆ ಓದಬೇಕೆಂಬ ಆಸಕ್ತಿ ಮೊಳೆಯುತ್ತದೆ. ಜೊತೆಗೆ ಬರವಣಿಗೆಯೂ ಸುಧಾರಿಸುತ್ತದೆ. ತರಗತಿಯಲ್ಲಿ ಪಠ್ಯದ ಹೊರತಾಗಿ ಹೊಸತೊಂದನ್ನು ಓದುವ, ಬರೆಯುವ, ಅರಿಯುವ ಕೌಶಲ ಬೆಳೆದಾಗ ಸಹಜವಾಗಿಯೇ ವಿಶ್ವಾಸ ಮೂಡಿ ಗಟ್ಟಿ ಕಾಳುಗಳಾಗಿ ಪರಿವರ್ತನೆಯಾಗಬಲ್ಲರು’ ಅವರು ಹೇಳುತ್ತಾ ಹೋದರು.

ಕೊರೊನೋತ್ತರ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳ ಮನಃಸ್ಥಿತಿ ಸಂಪೂರ್ಣ ಬದಲಾಗಿದೆ ಎಂಬ ದೂರೀಗ ಸಾರ್ವತ್ರಿಕ. ಯಾವುದಕ್ಕೂ ಬಾಯಿ ಬಿಡರು, ಹೆಚ್ಚು ಹೆಚ್ಚು ಒಂಟಿಯಾಗುತ್ತಿದ್ದಾರೆ, ಅಭ್ಯಾಸದಲ್ಲಿ ಆಸಕ್ತಿಯನ್ನೇ ತೋರರು, ಬರವಣಿಗೆಯನ್ನೇ ಮರೆತಿದ್ದಾರೆ ಎಂದೆಲ್ಲಾ ಹತ್ತಾರು ಆಕ್ಷೇಪಗಳು ಶಿಕ್ಷಕರು, ಹೆತ್ತವರ ಕಡೆಯಿಂದ ಸಾಮಾನ್ಯವಾಗಿವೆ. ಆನ್‌ಲೈನ್ ತರಗತಿಗಾಗಿ ಅನಿವಾರ್ಯವಾಗಿ ಮೊಬೈಲ್ ಹಿಡಿದ ಕೋಮಲ ಕೈಗಳು ಈಗ ಅಗತ್ಯವಿಲ್ಲದಿದ್ದರೂ ಅದನ್ನು ಬಿಡಲು ಒಪ್ಪುತ್ತಿಲ್ಲ. ಓದು, ಬರಹದಲ್ಲಿ ಮನಸ್ಸನ್ನು ತೊಡಗಿಸಲಾಗದ ಒತ್ತಡದಿಂದ ಕುಗ್ಗುತ್ತಿದ್ದಾರೆ. ಮಕ್ಕಳ ಈ ಪರಿಯ ಮಾನಸಿಕ ಸ್ಥಿತಿಯನ್ನು ಸುಧಾರಿಸಲಾಗದೆ ಶಿಕ್ಷಕರು, ಪೋಷಕರು ಆತಂಕಿತರಾಗಿದ್ದಾರೆ. ಎಳೆಯರನ್ನು ಮೊಬೈಲ್ ವ್ಯಸನದಿಂದ ಮುಕ್ತಗೊಳಿಸಿ ಬೌದ್ಧಿಕ ವಿಕಾಸಕ್ಕೆ ಅನುವು ಮಾಡಿಕೊಡುವುದು ಇಂದಿನ ತುರ್ತು ಅಗತ್ಯವೂ ಹೌದು.

‘ಮೊಬೈಲ್ ಬಿಡಿ, ಪುಸ್ತಕ ಹಿಡಿ’ ಎಂಬ ಧ್ಯೇಯದೊಂದಿಗೆ ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುವ ಜೊತೆಗೆ ಅವರ ಜ್ಞಾನವಿಕಾಸದ ದಿಸೆಯಲ್ಲಿ ಬೋಧಕರ ಇಂತಹ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

ಶಾಲೆಗಳು ಪಠ್ಯವನ್ನಷ್ಟೇ ಬೋಧಿಸುವ, ಪರೀಕ್ಷೆಗಾಗಿ ಉರು ಹೊಡೆಸುವ, ಅಂಕಗಳ ರೂಪದಲ್ಲಿ ಉತ್ತಮ ಫಲಿತಾಂಶ ನೀಡಿ ಬೀಗುವ ಕೇಂದ್ರಗಳಾಗಬಾರದು. ಜೀವನ ಕೌಶಲಗಳ ಕಲಿಕೆ ಜೊತೆಗೆ ಸಮಗ್ರ ವಿಕಾಸಕ್ಕೆ ನೆರವಾಗುವ ವೇದಿಕೆಗಳಾಗಬೇಕು. ಇದಕ್ಕೆ ಪೂರಕವಾದ ಚಟುವಟಿಕೆಗಳಲ್ಲಿ ಎಲ್ಲಾ ಮಕ್ಕಳು ಪಾಲ್ಗೊಳ್ಳುವಂತೆ ಹುರಿದುಂಬಿಸಿ ಪ್ರೋತ್ಸಾಹಿಸಿದಾಗಲಷ್ಟೇ ವ್ಯಕ್ತಿತ್ವ ವಿಕಸನ ಸಾಧ್ಯ. ಹೀಗೆ ತರಬೇತಾದ ಮಕ್ಕಳೇ ಮುಂದೆ ಯಶಸ್ಸನ್ನು ಆಲಿಂಗಿಸುವವರು. ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಅಳುಕಿಲ್ಲದೆ ಧೈರ್ಯದಿಂದ ಎದುರಿಸುವವರು. ನಮ್ಮಲ್ಲಿ ಹಲವಾರು ಉತ್ಸಾಹಿ, ಸೃಜನಶೀಲ ಶಿಕ್ಷಕರು ಇಂತಹ ಹತ್ತಾರು ಪ್ರಯೋಗಗಳ ಮೂಲಕ ತಮ್ಮ ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣಕ್ಕೆ ಗಣನೀಯ ಕೊಡುಗೆ ನೀಡುತ್ತಿದ್ದಾರೆ.



ಯಶಸ್ಸನ್ನು ಅಂಕಗಳಲ್ಲಿ ಮಾತ್ರ ಅಳೆಯುವ ಇಂದಿನ ದಿನಗಳಲ್ಲಿ ಮಕ್ಕಳನ್ನು ಪಠ್ಯದ ಜೊತೆಗೆ ಪಠ್ಯೇತರ ಓದಿನತ್ತಲೂ ಸೆಳೆಯುವ ಅಗತ್ಯವಿದೆ. ಸೃಜನಶೀಲ, ಸಾಂಸ್ಕೃತಿಕ, ಸಂಸ್ಕಾರಯುತ, ಸಾಹಿತ್ಯಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳಲು ಇದು ಸಹಕಾರಿ. ಹೋಳು ಹೋಳಾದ ಈ ಹೊತ್ತಿನ ಕುಟುಂಬ ವ್ಯವಸ್ಥೆಯಲ್ಲಿ ಶಾಲೆಗಳಲ್ಲಿ ಮಾತ್ರ ಇಂತಹ ಪ್ರೇರಣೆ ಹೊಮ್ಮಿಸಲು ಸಾಧ್ಯ. ನಮ್ಮ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವಂತಹ ವಾತಾವರಣ ನಿರ್ಮಿಸುವುದು ಅಧ್ಯಾಪಕರದ್ದಷ್ಟೇ ಅಲ್ಲ ಸಮಾಜದ ಹೊಣೆಗಾರಿಕೆಯೂ ಹೌದು. ಹಿಂಜರಿಕೆ, ಮುಜುಗರ, ಕೀಳರಿಮೆ, ಆತ್ಮವಿಶ್ವಾಸದ ಕೊರತೆಯಿಂದ ಬಳಲುತ್ತಿರುವ ಸರ್ಕಾರಿ ಶಾಲೆಯ ಮಕ್ಕಳಿಗೆ ಅಗತ್ಯ ಕೌಶಲಗಳನ್ನು ಕಲಿಸಿದಾಗ ಸ್ಪರ್ಧೆಯಲ್ಲಿ ಮುನ್ನುಗ್ಗಿ ಜಯ ಪಡೆಯುವ ಮನೋದಾರ್ಢ್ಯವನ್ನು ಖಂಡಿತವಾಗಿಯೂ ಬೆಳೆಸಿಕೊಳ್ಳಬಲ್ಲರು.

ಪಾಠ-ಪ್ರವಚನದ ಜೊತೆ ಜೊತೆಗೆ ಮಕ್ಕಳ ಬೌದ್ಧಿಕ ವಿಕಸನಕ್ಕೆ ವಿಶಿಷ್ಟ ರೀತಿಯಲ್ಲಿ ಶ್ರಮಿಸುತ್ತಿರುವ ತುಮಕೂರು ಜಿಲ್ಲೆ, ಮಧುಗಿರಿಯ ಭಕ್ತರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ರಘು ಅವರ ಕಾರ್ಯವೈಖರಿ ನಿಜಕ್ಕೂ ಮಾದರಿ. ಜ್ಞಾನಾರ್ಜನೆಯ ಜೊತೆಗೆ ತಾಯ್ನುಡಿಯನ್ನು ಉಳಿಸಿ, ಬೆಳೆಸುವ ಇಂತಹ ಕ್ರಿಯಾಶೀಲತೆಯನ್ನು ನಿಜಾರ್ಥದಲ್ಲಿ ಶಿಲ್ಪಿಗಳ ಸ್ಥಾನದಲ್ಲಿರುವ ನಮ್ಮೆಲ್ಲಾ ಶಿಕ್ಷಕವೃಂದ ಅಳವಡಿಸಿಕೊಂಡಾಗ ಮಾತ್ರ ಸಂವೇದನಾಶೀಲ ವೈಚಾರಿಕ ನಾಡಿನ ನಿರ್ಮಾಣ ಸಾಧ್ಯ.

ವಾಚಕರ ವಾಣಿ

ಕಿಡಿಗೇಡಿಗಳು ವಾಸ್ತವ ಅರಿಯಲಿ

ಮಹಾರಾಷ್ಟ್ರದ ಕೆಲವು ಪುಂಡರು ಗಡಿಯಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣ ಮಾಡುತ್ತಿರುವುದಕ್ಕೆ ಕಾರಣೀಭೂತರು ಮಹಾರಾಷ್ಟ್ರದ ರಾಜಕಾರಣಿಗಳು. ಚುನಾವಣೆ ಹತ್ತಿರ ಬಂದಾಗ ಗಡಿತಂಟೆ ಕುರಿತು ಕೆದಕುವುದು ಅವರಿಗೆ ಚಾಳಿ ಆಗಿದೆ. ಗಡಿ ವಿವಾದ ಬಗೆಹರಿಸಲು ಆಯೋಗವನ್ನು ರಚಿಸುವಂತೆ ಆಗ್ರಹಿಸಿದವರು ಮಹಾರಾಷ್ಟ್ರದವರೇ. ಆದರೆ ಮಹಾಜನ್ ಆಯೋಗದ ವರದಿ ತಮ್ಮ ಪರವಾಗಿ ಇಲ್ಲ ಎಂಬ ಕಾರಣಕ್ಕೆ ವಿರೋಧ ಮಾಡುತ್ತಿರುವವರೂ ಅವರೇ. ಪ್ರಸ್ತುತ ಗಡಿ ವಿವಾದವು ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಈ ವಿವಾದದ ಬಗ್ಗೆ ಮಾತನಾಡಬಾರದು ಎಂಬ ಕನಿಷ್ಠ ಜ್ಞಾನವೂ ಮಹಾರಾಷ್ಟ್ರದ ರಾಜಕಾರಣಿಗಳಿಗೆ ಇಲ್ಲದಿರುವುದು ಶೋಚನೀಯ.

ಮರಾಠಿ ಭಾಷಿಕರು ಹಾಗೂ ಕನ್ನಡಿಗರು ಗಡಿಭಾಗಗಳಲ್ಲಿ ಸಾಮರಸ್ಯದಿಂದ ವಾಸಿಸುತ್ತಿದ್ದಾರೆ. ಆದರೆ ಕೆಲವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕರ್ನಾಟಕದ ಬಸ್‌ಗಳಿಗೆ ಕಲ್ಲು ತೂರಾಟ ಮಾಡುವುದು, ಅಲ್ಲಿನ ಕನ್ನಡಿಗರಿಗೆ ತೊಂದರೆ ಕೊಡುವಂತಹ ಕಿಡಿಗೇಡಿತನವನ್ನು ಮಾಡುತ್ತಿದ್ದಾರೆ. ಇದು ಸರಿಯಲ್ಲ. ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗ. ಅದು ಎಂದೆಂದೂ ಮಹಾರಾಷ್ಟ್ರಕ್ಕೆ ಸೇರುವುದಿಲ್ಲ. ಈ ಸರಳ ಸತ್ಯವನ್ನು ಅವರು ಅರಿಯಬೇಕು.

ಮಧು ಕೆ. ಕೊಟ್ಟೂರು, ವಿಜಯನಗರ

‘ನಮ್ಮ ಕ್ಲಿನಿಕ್’: ಆಯುರ್ವೇದ ವೈದ್ಯರಿರಲಿ

ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕಾರ್ಯಾರಂಭ ಮಾಡಲಿರುವ ‘ನಮ್ಮ ಕ್ಲಿನಿಕ್’ಗಳಿಗೆ ಅಲೋಪಥಿ ವೈದ್ಯರ ಜೊತೆಗೆ ಆಯುರ್ವೇದ ವೈದ್ಯರನ್ನೂ ನೇಮಕ ಮಾಡಿಕೊಳ್ಳಬೇಕು. ಜನರಲ್ಲಿ ಆಹಾರ ಅಭ್ಯಾಸದ ಬಗ್ಗೆ, ಸಿರಿಧಾನ್ಯಗಳ ಉಪಯೋಗದ ಬಗ್ಗೆ, ಔಷಧೀಯ ಸಸ್ಯಗಳ ಬಗ್ಗೆ, ‘ಆಹಾರವೇ ಔಷಧ, ಅಡುಗೆ ಮನೆಯೇ ಕ್ಲಿನಿಕ್’ ಎನ್ನುವ ಭಾರತೀಯ ಆಹಾರಶಾಸ್ತ್ರದ ಪರಿಕಲ್ಪನೆಯ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ. ಈ ದಿಸೆಯಲ್ಲಿ ತಜ್ಞರ ಸಲಹೆ ಪಡೆದು ಬಿಎಎಂಎಸ್ ಮತ್ತು ಆಯುರ್ವೇದದಲ್ಲಿ ಸ್ನಾತಕೋತ್ತರ ಪದವಿ ಪಡೆದ ವೈದ್ಯರನ್ನು ನೇಮಕ ಮಾಡಿಕೊಳ್ಳಲಿ. ಈ ಮೂಲಕ, ಆಯುರ್ವೇದ ಕಲಿತ ವೈದ್ಯರ ಸೇವೆಯನ್ನು ಸದ್ಬಳಕೆ ಮಾಡಿಕೊಳ್ಳೋಣ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಏಕತೆಯ ಪ್ರಯತ್ನ ಸ್ವಾಗತಾರ್ಹ

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣದ ದಿನವೇ ಸಮಾನಮನಸ್ಕ ದಲಿತ ಸಂಘಟನೆಗಳು ಒಗ್ಗಟ್ಟು ಪ್ರದರ್ಶನ ಮಾಡಿರುವುದರಿಂದ ಅಂಬೇಡ್ಕರ್ ಅವರ ಆಲೋಚನೆ, ಚಿಂತನೆಗೆ ಮರುಹುಟ್ಟು ನೀಡಿದಂತೆ ಆಗಿದೆ ಮತ್ತು ಸಂಘಟನೆಗೆ ಆನೆಬಲ ಬಂದಂತೆ ಆಗಿದೆ. ಅಷ್ಟಲ್ಲದೆ ಈ ಸಮಿತಿಯು ಕೋಮುವಾದಿ ಶಕ್ತಿಗಳು ಹಾಗೂ ರಾಜಕೀಯ ಪಕ್ಷಗಳ ಜೊತೆ ನಂಟು ಹೊಂದಿರುವವರನ್ನು ಹೊರಗಿಟ್ಟಿರುವ ವಿಚಾರ ಅಭಿನಂದನೆಯ ಜೊತೆಗೆ ಸ್ವಾಗತಾರ್ಹ ಸಹ.

ದೇಶವನ್ನು ಆಳುವ ಸರ್ಕಾರಗಳು ಸಂವಿಧಾನವನ್ನೇ ದುರ್ಬಲಗೊಳಿಸುತ್ತಿರುವ ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ಹೊಸ ಚೈತನ್ಯ ಪಡೆಯುತ್ತಿರುವುದು ಹಾಗೂ ಎರಡೂವರೆ ದಶಕಗಳಿಂದಲೂ ಚದುರಿಹೋಗಿದ್ದ ದಲಿತ ಸಂಘಟನೆಗಳು ಒಂದುಗೂಡುತ್ತಿರುವುದು ಖುಷಿಪಡುವ ಸಂಗತಿಯಾಗಿದೆ. ಇಂತಹ ಪ್ರಯತ್ನ ಫಲಿಸಿದರೆ ಸಂವಿಧಾನದ ಆಶಯಗಳನ್ನು ಈಡೇರಿಸಲು ಮತ್ತು ಅಂಬೇಡ್ಕರ್ ಅವರ ವಿಚಾರಗಳನ್ನು ಪಸರಿಸಲು ಬಹುದೊಡ್ಡ ಶಕ್ತಿ ದೊರೆತಂತಾಗುತ್ತದೆ. ‘ಒಗ್ಗಟ್ಟಿನಲ್ಲಿ ಬಲವಿದೆ’ ಎಂಬ ಮಾತು ಇಲ್ಲಿ ನೆನಪಾಗುತ್ತದೆ.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಪೋಷಕರ ನಡವಳಿಕೆಯೇ ಮೊದಲ ಪಾಠ

ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಜವಾಬ್ದಾರಿ ಹೆಚ್ಚು ಎಂದು ಹೇಳಿರುವ ಸದಾಶಿವ್ ಸೊರಟೂರು ಅವರ ಲೇಖನ (ಸಂಗತ, ಡಿ. 6) ಇಂದಿನ ಸ್ಥಿತಿಗೆ ಕನ್ನಡಿ ಹಿಡಿದಂತೆ ಇದೆ. ಮಕ್ಕಳ ಮೇಲಿನ ಕುರುಡು ಪ್ರೀತಿ ಒಂದು ಕಡೆಯಾದರೆ, ಪೋಷಕರು ಮಕ್ಕಳೆದುರು ಮಾದರಿ ಎಂಬಂತೆ ಬದುಕಬೇಕು ಎಂಬ ನೈತಿಕ ಪ್ರಜ್ಞೆ ನಾಪತ್ತೆಯಾಗಿರುವುದು ಮತ್ತೊಂದು ದುರಂತ. ಬಹುತೇಕ ಮಕ್ಕಳಿಗೆ ಅಪ್ಪನೇ ಬಹು ದೊಡ್ಡ ಹೀರೊ. ಅಪ್ಪ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿದರೆ ಮಕ್ಕಳೂ ವೀಕ್ಷಿಸುತ್ತಾರೆ. ಅಪ್ಪ ಬೇಜವಾಬ್ದಾರಿಯಿಂದ ವರ್ತಿಸಿದರೆ ಮಕ್ಕಳೂ ಅದನ್ನೇ ಮೈಗೂಡಿಸಿಕೊಳ್ಳುತ್ತಾರೆ. ಅಪ್ಪ ಸುಳ್ಳು ಸರ್ಟಿಫಿಕೇಟುಗಳನ್ನು ನೀಡಿ ಮೋಸಗಾರನಂತೆ ವರ್ತಿಸಿದರೆ ಮಕ್ಕಳೂ ಅದೇ ಸರಿ ಎಂದು ಭಾವಿಸುತ್ತಾರೆ. ಅಪ್ಪ ತನಗೆ ಗೊತ್ತಿರುವ ಅರೆಬರೆ ಜ್ಞಾನವೇ ವಿಶ್ವರೂಪವೆಂದು ಅಹಂಕಾರದಿಂದ ವರ್ತಿಸಿದರೆ ಮಕ್ಕಳೂ ಅದನ್ನೇ ಅನುಸರಿಸಿ, ಆಳವಾಗಿ ಅಧ್ಯಯನ ಮಾಡುವುದನ್ನೇ ಬಿಡುತ್ತಾರೆ.

ಪೋಷಕರು ತಮ್ಮ ನಡವಳಿಕೆಯಲ್ಲಿ ಪ್ರಾಮಾಣಿಕತೆಯನ್ನು ಹೊಂದಿದ್ದರೆ ಮಕ್ಕಳಿಗೆ ಅದೇ ಮೊದಲ ಪಾಠ. ತಮ್ಮ ಬದುಕಿನಲ್ಲೂ ಶಿಸ್ತು ಅಳವಡಿಸಿಕೊಳ್ಳದೆ ಶಾಲೆಯಲ್ಲಿ ಶಿಕ್ಷಕರು ತಿದ್ದಿದಾಗಲೂ ಕೊಂಕು ತೆಗೆಯುವವರು ತಮ್ಮ ಮಕ್ಕಳ ಭವಿಷ್ಯಕ್ಕೇ ಮಾರಕವಾಗಿ ಇರುತ್ತಾರೆ. ಅದರ ಅರಿವಾಗುವಷ್ಟರಲ್ಲಿ ಕಾಲ ಮಿಂಚಿಹೋಗಿರುತ್ತದೆ.

ಡಾ. ಕೆ.ಎಸ್.ಗಂಗಾಧರ, ಶಿವಮೊಗ್ಗ

ನಿರಂಕುಶ ಆಳ್ವಿಕೆಗೆ ಕೊನೆಯೆಂದು?

ದಕ್ಷಿಣ ಕೊರಿಯಾ ಹಾಗೂ ಅಮೆರಿಕದ ಸಿನಿಮಾಗಳನ್ನು ವೀಕ್ಷಿಸಿದ್ದಕ್ಕಾಗಿ ಉತ್ತರ ಕೊರಿಯಾ ಸರ್ಕಾರವು ಪ್ರೌಢಶಾಲೆಯ ಇಬ್ಬರು ಬಾಲಕರನ್ನು ಗಲ್ಲಿಗೇರಿಸಿದ ಸುದ್ದಿ ತಿಳಿದು ವಿಷಾದವಾಯಿತು. ಉತ್ತರ ಕೊರಿಯಾದಲ್ಲಿ ಈಗ ಎಂಥ ದುಃಸ್ಥಿತಿ ಇದೆ ಎಂಬುದನ್ನು ಇದು ತಿಳಿಸುತ್ತದೆ ಮತ್ತು ಅಲ್ಲಿನ ಅಮಾನವೀಯ ಆಡಳಿತಕ್ಕೆ ಸಾಕ್ಷಿಯಾಗಿದೆ.

ಈ ಪ್ರಕರಣವು ಉತ್ತರ ಕೊರಿಯಾದ ಸರ್ವಾಧಿಕಾರಿ ಆಡಳಿತಕ್ಕೆ ಕೊನೆಯೆಂದು ಎಂದು ವಿಶ್ವ ಸಮುದಾಯವು ಯೋಚಿಸುವಂತೆ ಮಾಡಿದೆ.

ಎಚ್.ಆರ್.ವಸ್ತ್ರದ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಒಳಮೀಸಲಾತಿ ವಿಭಜನೆಯಲ್ಲ
ಅತಿ ಹಿಂದುಳಿದವರ ಪ್ರಾತಿನಿಧ್ಯ



• ಬಿ.ರಾಜಶೇಖರಮೂರ್ತಿ

ಕೆಲವರು ಉನ್ನತ ಶಿಕ್ಷಣ ಪಡೆದಿದ್ದರೂ, ಈ ವರ್ಗದ ಸಮುದಾಯಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಬಲ ಸಮುದಾಯಗಳ ಜೊತೆ ಸ್ಪರ್ಧೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ವರ್ಗದ ಅನೇಕ ಸಣ್ಣ ಜಾತಿಗಳಿಗೆ ಗ್ರಾಮ ಪಂಚಾಯಿತಿ ಸದಸ್ಯರಾಗಿಯೂ ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಾಗಿಲ್ಲ

ಮೀಸಲಾತಿ ಚರ್ಚೆ 8

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯ ಸಂಸ್ಥಾನ ಆಡಳಿತದಲ್ಲಿ ಬ್ರಾಹ್ಮಣೇತರರಿಗೆ ಶೇಕಡ 75ರಷ್ಟು ಮೀಸಲಾತಿಯನ್ನು ನೀಡಲಾಗಿತ್ತು. ಆದರೆ ಯಾವ ಯಾವ ಜಾತಿಗಳಿಗೆ ಎಷ್ಟು ಎಂಬ ವರ್ಗೀಕರಣ ಇರಲಿಲ್ಲ. ಸ್ವಾತಂತ್ರ್ಯಾ ನಂತರ 1947ರಿಂದ 1950ರ ಮಧ್ಯದ ಅವಧಿಯಲ್ಲಿ ಕೇಂದ್ರ ಸರ್ಕಾರವು ಎರಡು ಅಧಿಸೂಚನೆಗಳ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಒಟ್ಟು ಶೇ 17.5ರಷ್ಟು ಮೀಸಲಾತಿಯನ್ನು ನೀಡಿತು. 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ಮರು ವಿಂಗಡಣೆಯ ನಂತರ ಪರಿಶಿಷ್ಟ ಜಾತಿಗಳಿಗೆ ಶೇ 15ರಷ್ಟು ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ 3ರಷ್ಟು ಮೀಸಲಾತಿಯನ್ನು ಪ್ರತ್ಯೇಕವಾಗಿ ನೀಡಲಾಯಿತು. ನಂತರದಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ 17 ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ 7 ರಷ್ಟು ಮೀಸಲಾತಿ ನೀಡಲಾಯಿತು.

ಹಿಂದುಳಿದ ವರ್ಗಗಳಿಗೆ 1958ರಿಂದ ರಾಜ್ಯದಲ್ಲಿ ಮೀಸಲಾತಿಯನ್ನು ನೀಡಲಾಯಿತು. ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸಿ ಪ್ರವರ್ಗ-1ಕ್ಕೆ ಶೇ 2, ಪ್ರವರ್ಗ-2ಎಗೆ ಶೇ 15, ಪ್ರವರ್ಗ-2ಬಿಗೆ ಶೇ 5, ಪ್ರವರ್ಗ-3ಎಗೆ ಶೇ 4 ಮತ್ತು ಪ್ರವರ್ಗ-3ಬಿಗೆ ಶೇ 5 ಎಂಬುದಾಗಿ ಮೀಸಲಾತಿ ನೀಡಲಾಗಿದೆ. ಹೀಗೆ ಕಾಲಕಾಲಕ್ಕೆ ರಾಜ್ಯದಲ್ಲಿ ಒಂದು ರೀತಿಯ ಒಳ ಮೀಸಲಾತಿಯನ್ನು ನೀಡುತ್ತಲೇ ಬರಲಾಗಿದೆ. ಇತ್ತೀಚೆಗೆ ಸಾಮಾನ್ಯ ವರ್ಗದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಕ್ಕೂ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿಯನ್ನು ಜಾರಿಗೆ ತರಲಾಗಿದೆ.

ಹೀಗೆ ಮೀಸಲಾತಿ 75 ವರ್ಷಗಳಿಂದ ಹಂತ ಹಂತವಾಗಿ ವಿಸ್ತಾರವಾಗುತ್ತಾ, ಜಾರಿಯಲ್ಲಿದೆ. ಸಂವಿಧಾನದ ವಿಧಿ 16ರಲ್ಲಿ 'ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ರಾಜ್ಯದ ಸೇವೆಗಳಲ್ಲಿ ಮೀಸಲಾತಿಯನ್ನು ಒದಗಿಸುವುದು' ಎಂದು ಹೇಳಲಾಗಿದೆ. ಇದೇ ರೀತಿಯಲ್ಲಿ 46ನೇ ವಿಧಿ, 243ನೇ ವಿಧಿ, 330ನೇ ವಿಧಿ, 332ನೇ ವಿಧಿಯಲ್ಲಿ ಪ್ರಸ್ತಾಪಿಸಿದಂತೆ, ಈ ವಿಧಿಗಳ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಹಾಗೂ ರಾಜಕೀಯ ಮೀಸಲಾತಿಯನ್ನು ನೀಡಲಾಗಿದೆ. ಈ ಎಲ್ಲ ವಿಧಿಗಳ ಪ್ರಕಾರ ಯಾರಿಗೂ ಯಾವುದೇ ರೀತಿಯ ತಾರತಮ್ಯ ತೋರುವಂತಿಲ್ಲ ಎಂದು ನಿರ್ದೇಶಿಸಿದೆ.



ಹೀಗೆ ಸಂವಿಧಾನಬದ್ಧವಾಗಿರುವ ಮೀಸಲಾತಿಯು 75 ವರ್ಷಗಳಿಂದ ಜಾರಿಯಲ್ಲಿದೆ. ಆದರೂ ಮೀಸಲಾತಿಯ ಸವಲತ್ತು ಪರಿಶಿಷ್ಟ ಜಾತಿಗಳಲ್ಲಿನ ಎಲ್ಲಾ 101 ಜಾತಿ ಸಮುದಾಯಗಳು ಮತ್ತು ಪರಿಶಿಷ್ಟ ಪಂಗಡದ ಎಲ್ಲಾ 52 ಜಾತಿ ಸಮುದಾಯಗಳು ಸೇರಿ ಎಲ್ಲಾ ಜನವರ್ಗಗಳಿಗೆ ತಲುಪಲೇ ಇಲ್ಲ. ಪರಿಶಿಷ್ಟ ಜಾತಿಯ ಒಂದೆರಡು ಬಲಾಢ್ಯ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಂದೆರಡು ಜಾತಿಗಳು ಮಾತ್ರ ಮೀಸಲಾತಿಯಿಂದ ದೊರಕುವ ಶಿಕ್ಷಣ, ಉದ್ಯೋಗ, ಆರ್ಥಿಕ ಮತ್ತು ರಾಜಕೀಯ ಅವಕಾಶವನ್ನು ಪಡೆಯುತ್ತಿವೆ. ಆದ್ದರಿಂದ, 'ನಮ್ಮ ಪಾಲನ್ನು ನಮಗೆ ನೀಡಿ' ಎಂಬ ಕೂಗು ಈ ವರ್ಗದ ತಳ ಸಮುದಾಯಗಳಿಂದ ದಿನೇ ದಿನೇ ಕೇಳಿ ಬರುತ್ತಿದೆ. ಇತರೆ ಹಿಂದುಳಿದ ವರ್ಗಗಳಲ್ಲೂ ಈ ಕೂಗು ಇದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆಮಾರಿ ಸಮುದಾಯಗಳ ಶೇ 65ರಷ್ಟು ಜನರಿಗೆ ವಾಸಿಸಲು ಯೋಗ್ಯವಾದ ವಸತಿ ಸೌಲಭ್ಯಗಳಿಲ್ಲ. ಈ ಜನರು ಇಂದಿಗೂ ಗುಡಿಸಲುಗಳಲ್ಲಿ ಜೀವಿಸುತ್ತಿರುವುದು ವಾಸ್ತವ. ಈ ಸಮುದಾಯಗಳಲ್ಲಿ ಶೇಕಡ 80ರಷ್ಟು ಜನರಿಗೆ ಯಾವುದೇ ರೀತಿಯಾದ ಭೂಮಿಯ ಒಡೆತನವಿಲ್ಲ. ಇವರೆಲ್ಲರೂ ಬಹುತೇಕ ಕೂಲಿ ಕಾರ್ಮಿಕರಾಗಿದ್ದಾರೆ. ಈ ಸಮುದಾಯಗಳಲ್ಲಿ ಶಿಕ್ಷಣ ಪಡೆದಿರುವವರ ಪ್ರಮಾಣ ಅತಿ ಕಡಿಮೆ ಇದೆ. ಉದಾ; ಪರಿಶಿಷ್ಟ ಜಾತಿಯ ದಕ್ಕಲಿಗ, ಸಿಂಧೋಳ್, ಗೋಸಂಗಿ, ಕೊರಚ ಹಾಗೂ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಜೇನು ಕುರುಬ, ಮಲೆಕುಡಿಯ, ಯರವ, ಹಸಲರು ಮುಂತಾದ ಹಲವು ಜಾತಿಗಳ ಸಮುದಾಯಗಳಿಗೆ ಯಾವುದೇ ರೀತಿಯ ಮೀಸಲಾತಿಯ ಸೌಲಭ್ಯಗಳನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯವಿಲ್ಲ.

ಇದೇ ರೀತಿಯಲ್ಲಿ ದೇವದಾಸಿಯರು, ಸಫಾಯಿ ಕರ್ಮಚಾರಿಗಳು ಮತ್ತು ಕೊಳಚೆ ಪ್ರದೇಶ ನಿವಾಸಿಗಳು ಸಹ ಮೀಸಲಾತಿ ಸವಲತ್ತುಗಳನ್ನು ಪಡೆಯಲಾಗುತ್ತಿಲ್ಲ. ಇವರ ಮಕ್ಕಳ ಶೈಕ್ಷಣಿಕ ಮಟ್ಟ ಬಹಳ ಕಡಿಮೆ ಇದೆ. ತತ್ಪರಿಣಾಮವಾಗಿ ಉನ್ನತ ಶಿಕ್ಷಣವಿಲ್ಲ ಮತ್ತು ಸರ್ಕಾರಿ ಉದ್ಯೋಗವಿಲ್ಲ. ಅಪ್ಪಿ ತಪ್ಪಿ ಕೆಲವರು ಉನ್ನತ ಶಿಕ್ಷಣ ಪಡೆದಿದ್ದರೂ, ಈ ವರ್ಗದ ಸಮುದಾಯಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಬಲ ಸಮುದಾಯಗಳ ಜೊತೆ ಸ್ಪರ್ಧೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ವರ್ಗದ ಅನೇಕ ಸಣ್ಣ ಜಾತಿಗಳಿಗೆ ಗ್ರಾಮ ಪಂಚಾಯಿತಿ ಸದಸ್ಯರಾಗಿಯೂ ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಾಗಿಲ್ಲ.

ಕಳೆದ 75 ವರ್ಷಗಳಿಂದ ಮೀಸಲಾತಿ ಜಾರಿಯಲ್ಲಿ ಇದ್ದರೂ ಸಹ ಈ ಸವಲತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿಗಳಿಗೆ, ಅರೆ ಅಲೆಮಾರಿಗಳಿಗೆ, ಆದಿವಾಸಿಗಳಿಗೆ, ದೇವದಾಸಿಯರಿಗೆ, ಕೊಳಚೆ ನಿವಾಸಿಗಳಿಗೆ ಮತ್ತು ಸಫಾಯಿ ಕರ್ಮಚಾರಿಗಳಿಗೆ ಹಾಗೂ ಅನೇಕ ಸಣ್ಣ ಸಣ್ಣ ಹಿಂದುಳಿದ ಜಾತಿಗಳಿಗೆ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಾಗಲೀ, ಕಲ್ಯಾಣ ಕಾರ್ಯಕ್ರಮಗಳಾಗಲೀ, ಮೀಸಲಾತಿಯ ಸೌಲಭ್ಯಗಳಾಗಲೀ ಪೂರ್ಣ ಪ್ರಮಾಣದಲ್ಲಿ ತಲುಪಿಲ್ಲ. ಇಂದಿಗೂ ಅನೇಕರು ಭಿಕ್ಷಾಟನೆ ಮೂಲಕ ಬದುಕನ್ನು ಸಾಗಿಸುತ್ತಿರುವ ದುಸ್ಥಿತಿಯೂ ಇದೆ. ಉದಾಃ ನಗರ ಪ್ರದೇಶಗಳಲ್ಲಿನ ಸಿಗ್ನಲ್‌ಗಳಲ್ಲಿ ವೇಷಧಾರಿಗಳಾಗಿ ಬಿಕ್ಷಾಟನೆಯಲ್ಲಿರುವುದನ್ನು ಕಾಣುತ್ತೇವೆ.

ಹೀಗೆ ಇನ್ನೂ ಸಹಸ್ರಾರು ಜನರು ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗಿ ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದಾರೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಈ ಮೀಸಲಾತಿ ನೀತಿಯಿಂದ ತಮಗೆ ನಿರಂತರವಾದ ಬಡತನವನ್ನು ಬಿಟ್ಟು ಬೇರೇನೂ ಸಿಕ್ಕುವುದಿಲ್ಲ ಎಂಬ ಆತಂಕ ಹೆಚ್ಚಾಗುತ್ತದೆ. ಇಂತಹ ಪರಿಸ್ಥಿತಿಯು ಸಂವಿಧಾನದ ಮೂಲ ಆಶಯಗಳಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವಕ್ಕೆ ವಿರುದ್ಧವಾದದ್ದು. ಇದರಿಂದ ಈ ಜಾತಿಗಳಲ್ಲಿ ಆಂತರಿಕ ಘರ್ಷಣೆಗೆ ಕಾರಣವಾಗಬಹುದು. ಇವರಲ್ಲಿ ಹುಟ್ಟಿಕೊಂಡಿರುವ ಅಸಮಾಧಾನದತ್ತ ಗಮನಹರಿಸದಿದ್ದರೆ ಇವರ ಒಗ್ಗಟ್ಟಿಗೆ ಧಕ್ಕೆಯಾಗುವುದರಲ್ಲಿ ಸಂದೇಹವಿಲ್ಲ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಈ ವರ್ಗದ ಉತ್ತಮ ಸ್ಥಿತಿಯಲ್ಲಿ ಇರುವವರು, ತಮಗಿಂತ ಹೆಚ್ಚು ವಂಚಿತರಾದವರ ಬೇಡಿಕೆಯು ನ್ಯಾಯಯುತವಾದುದೆಂದು ಒಪ್ಪಿಕೊಂಡು ಒಳ ಮೀಸಲಾತಿಗೆ ಸಮ್ಮತಿಯನ್ನು ನೀಡುವ ಮುಖಾಂತರ ಶೋಷಿತ ಸಮುದಾಯಗಳ ಒಗ್ಗಟ್ಟನ್ನು ರಕ್ಷಿಸಬೇಕು.

2012ರಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. 10 ವರ್ಷ ಕಳೆದರೂ ಅಧಿಕಾರಕ್ಕೆ ಬಂದು ಹೋಗುವ ಯಾವ ಸರ್ಕಾರಗಳೂ ಪರಿಶೀಲನೆ ಮಾಡುತ್ತಿಲ್ಲ. ವರದಿ ಕೇವಲ ಪರಿಶಿಷ್ಟ ಜಾತಿಗೆ ಸಂಬಂಧಿಸಿದ್ದಾಗಿದೆ. ಅಲ್ಲದೆ ಹಲವಾರು ಪ್ರಶ್ನೆಗಳಿಗೆ ಎಡೆ ಮಾಡಿಕೊಟ್ಟಿದೆ ಎಂಬ ಅಭಿಪ್ರಾಯವೂ ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಆ ವರಿದಿಯನ್ನು ಪರಿಶೀಲಿಸಿ ತಕ್ಷಣವೇ ಆಳುವ ಸರ್ಕಾರಗಳು ಅಗತ್ಯ ಬಿದ್ದರೆ ನೂತನ ಆಯೋಗವನ್ನು ರಚಿಸಿ ವೈಜ್ಞಾನಿಕವಾಗಿ ಅಧ್ಯಯನ ನಡೆಸುವಂತಾಗಬೇಕು. ಈ ಮುಖಾಂತರವೂ ಕೂಡಾ ಮೀಸಲಾತಿಯ ವ್ಯವಸ್ಥೆಯನ್ನು ಗಟ್ಟಿಗೊಳಿಸುವಂತಹ ರೀತಿಯಲ್ಲಿ ಪುನರ್ ರೂಪಿಸುವ ಅಗತ್ಯವಿದೆ.

ಈ ಎಲ್ಲ ಕಾರಣಗಳಿಂದ 'ಮೀಸಲಾತಿಯೊಳಗೆ ಮೀಸಲಾತಿ' ಅಥವಾ 'ಒಳ ಮೀಸಲಾತಿ'ಯ ಅಗತ್ಯವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೆಲ ಬಲಾಢ್ಯ ಜಾತಿ ರಾಜಕೀಯ ನಾಯಕರು ಸೇರಿದಂತೆ ಅವರ ಬೆಂಬಲಿಗರಾಗಿರುವ ತಾತ್ವಿಕವಾಗಿ ಸ್ಪಷ್ಟತೆ ಇಲ್ಲದ ಕೆಲವರು, ಸ್ವಹಿತ ಶಕ್ತಿಗಳಾದ ಕೆಲ ಪ್ರಗತಿಪರರೆನ್ನಿಸಿಕೊಂಡವರು ಒಳ ಮೀಸಲಾತಿಯನ್ನು ವಿರೋಧಿಸುತ್ತಿದ್ದಾರೆ. ಒಳಮೀಸಲಾತಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಭಜನೆಯಲ್ಲ. ದಲಿತ ಸಮುದಾಯಗಳ ಒಗ್ಗಟ್ಟನ್ನು ಇದು ಹಾಳು ಮಾಡುತ್ತದೆ ಎಂಬುದು ಒಂದು ತಪ್ಪು ಕಲ್ಪನೆ. ಇದು ಮೀಸಲಾತಿ ವಿರೋಧಿಗಳು ಹುಟ್ಟು ಹಾಕಿರುವ ಒಂದು ವಿಕೃತಿ. ಇದರ ಬಗ್ಗೆ ಪ್ರಜ್ಞಾವಂತ ಸಮಾಜ ಗಂಭೀರವಾಗಿ ಚಿಂತಿಸಬೇಕಾಗಿದೆ.

ಈವರೆಗೂ ಮೀಸಲಾತಿಯಿಂದ ವಂಚಿತರಾದವರಿಗೆ ಇನ್ನಾದರೂ ಅದರ ಫಲವನ್ನು ತಲುಪಿಸುವುದಕ್ಕೆ ಮೊದಲನೇ ಆದ್ಯತೆ ಸಿಗಬೇಕಾಗಿದೆ. ಸರ್ಕಾರಗಳು ರಾಜಕೀಯ ಇಚ್ಛಾಶಕ್ತಿಯನ್ನು ತೋರಿ ಈ ದೌರ್ಭಾಗ್ಯರಿಗೆ ಮೀಸಲಾತಿ ಸವಲತ್ತನ್ನು ತಲುಪಿಸುವ ಕಾನೂನುಗಳನ್ನು, ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ. ಈ ಬಗ್ಗೆ ಜನಪರ ಚಳವಳಿಗಳು ಜನಾಂದೋಲನವನ್ನು ರೂಪಿಸುವ ಮುಖಾಂತರ 'ಮೀಸಲಾತಿಯೊಳಗಿನ ಒಳ ಮೀಸಲಾತಿ' ವಿಭಜನೆಯಲ್ಲ, ಅಗೋಚರವಾಗಿಯೇ ಅತಿ ಹಿಂದುಳಿದವರಿಗೆ ಪ್ರಾತಿನಿಧ್ಯ ನೀಡುವ ಮಾರ್ಗ ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗಿದೆ.

ಲೇಖಕ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಹ ಸಂಚಾಲಕ

'ಪ್ರಬಲ ಜಾತಿಗಳ ಲಾಬಿ ಅಡ್ಡಿ'



ಒಳಮೀಸಲಾತಿ ಎಂಬುದು ಯಾರದೋ ಅವಕಾಶಗಳನ್ನು ಕಬಳಿಸುವ ಅಥವಾ ಮತ್ಯಾವುದೋ ಸಮುದಾಯದ ಏಳಿಗೆಗೆ ಕುಂದು ತರುವ ಕ್ರಮವಲ್ಲ. ಅಸಲಿಗೆ ಭಾರತದ ಮೀಸಲಾತಿ ಎಂಬುದು ಜಾತಿ ಜನಸಂಖ್ಯೆಗನುಸಾರವಾಗಿ ಯಾವತ್ತೋ ಹಂಚಿಕೆಯಾಗಬೇಕಿತ್ತು. ಅಸ್ಪೃಶ್ಯತೆಯ ನೋವುಣ್ಣದ ಸಮುದಾಯಗಳೂ ಪರಿಶಿಷ್ಟರ ಮೀಸಲು ಪಟ್ಟಿಯಲ್ಲಿ ನುಸುಳಿರುವುದು ಚಾರಿತ್ರಿಕ ದೋಷ. ಈ ದೋಷವನ್ನು ಪರಿಹರಿಸಲು ಇರುವ ಸರಿಯಾದ ಕ್ರಮವನ್ನು ನ್ಯಾ. ಸದಾಶಿವ ಆಯೋಗದ ವರದಿಯು ತಿಳಿಸುತ್ತದೆ.

ಇದನ್ನು ಜಾರಿಗೊಳಿಸಲು ಆಡಳಿತಕ್ಕೆ ಬರುತ್ತಿರುವ ಎಲ್ಲಾ ಪಕ್ಷಗಳೂ ಹೆದರುತ್ತಿರುವುದರ ಕಾರಣ ಪ್ರಬಲ ಜಾತಿಗಳ ಲಾಬಿ ಅಲ್ಲದೆ ಮತ್ತೇನೂ ಅಲ್ಲ. ಈ ಲಾಬಿ ಬಾಬಾಸಾಹೇಬರು ಪ್ರತ್ಯೇಕ ಚುನಾಯಕ ಅಧಿಕಾರ ಕೇಳಿದ್ದಾಗಲೂ ಹುನ್ನಾರ ನಡೆಸಿತ್ತು; ಈಗಲೂ ನಡೆಸುತ್ತಿದೆ. ಆಂಧ್ರಪ್ರದೇಶದಲ್ಲಿ ಈ ಒಳಮೀಸಲಾತಿ ಜಾರಿಗೊಳಿಸಲು ವಿಫಲವಾದದ್ದನ್ನೇ ಮುಂದಿಟ್ಟುಕೊಂಡು, ಅದರ ಜಾರಿಗೆ ವಿರುದ್ಧವಾದ ವಾದವನ್ನು ಮುನ್ನೆಲೆಗೆ ತರಲಾಗುತ್ತಿದೆ. ಆದರೆ, ತಮಿಳುನಾಡಿನ ಅರುಂಧತಿಯರ್ ಸಮುದಾಯಕ್ಕೆ ನೀಡಲಾದ ಪ್ರತ್ಯೇಕ ಮೀಸಲಾತಿ ಕುರಿತು ಮಾತನಾಡದೆ, ಜಾಣಕಿವುಡು ತೋರಿಸುತ್ತಿರುವುದು ದುರಂತ.

ಕೊರಮ, ಕೊರಚ, ಭೋವಿ, ಲಂಬಾಣಿಗರು ಕರ್ನಾಟಕ ಹೊರತುಪಡಿಸಿ ಭಾರತದ ಯಾವ ರಾಜ್ಯದಲ್ಲೂ ಎಸ್‌ಸಿ ಪಟ್ಟಿಯಲ್ಲಿ ಇಲ್ಲ. ಈ ಅನ್ಯಾಯವನ್ನು ಸದಾಶಿವ ಆಯೋಗ ಸ್ಪಷ್ಟವಾಗಿ ಗುರುತಿಸಿದೆ. ದೇವರಾಜ ಅರಸು ಈ ಸಮುದಾಯಗಳನ್ನು ಎಸ್‌ಸಿ ಪಟ್ಟಿಗೆ ಸೇರಿಸುವ ಮೂಲಕ ಮೂಲ ಅಸ್ಪೃಶ್ಯರ ಮೀಸಲಾತಿ ಅಥವಾ ಪ್ರಾತಿನಿಧ್ಯದ ಉದ್ದೇಶವನ್ನೇ ಬುಡಮೇಲು ಮಾಡಿದರು. ಅಸ್ಪೃಶ್ಯರಲ್ಲದ ಕೊರಮ, ಕೊರಚ, ಭೋವಿ, ಲಂಬಾಣಿಗರು ರಾಜಕೀಯವಾಗಿ ಅಸ್ಪೃಶ್ಯರ ಪಾಲನ್ನು ಕಬಳಿಸಲು ಈ ಜಾತಿವಾದಿ ಸಮಾಜವೂ ಕೈಜೋಡಿಸಿತು.

ಯಾವುದೇ ಚಳವಳಿ, ಬೀದಿ ಹೋರಾಟ ಮಾಡದ ಮೇಲ್ವರ್ಗದವರಿಗೆ ಶೇ 10ರಷ್ಟು ಮೀಸಲಾತಿ ಸೌಲಭ್ಯ ಸುಲಭವಾಗಿ ಸಿಗುತ್ತದೆಂದರೆ ಕರ್ನಾಟಕದ ಜನಸಂಖ್ಯೆಯಲ್ಲಿಯೇ ದೊಡ್ಡದಾಗಿರುವ ಸಮುದಾಯಗಳಿಗೆ, ಜಾತಿ ಜನಸಂಖ್ಯೆಯ ಪದ್ಧತಿಯಲ್ಲಿ ಒಳಮೀಸಲಾತಿ ಜಾರಿಯಾಗದಿರುವುದರ ಹಿಂದಿರುವುದು ಅನ್ಯಾಯದ ಪರಮಾವಧಿ ಎಂದೇ ಬಗೆಯಬೇಕಾಗುತ್ತದೆ.

ವಿ.ಆರ್.ಕಾರ್ಪೆಂಟರ್, ಸಾಹಿತಿ

'ಒಳಮೀಸಲಾತಿ ಆಸರೆ'

'ಒಳಮೀಸಲಾತಿಯಿಂದ ದಲಿತರಲ್ಲಿನ ಒಗ್ಗಟ್ಟು ಒಡೆದು ಹೋಗುತ್ತದೆ. ಪರಿಶಿಷ್ಟ ಜಾತಿ, ವರ್ಗದ ಜನರಿಗೆ ಈಗಿರುವ ಕಿಂಚಿತ್ ಸೌಲಭ್ಯವೂ ಕೈತಪ್ಪಿ ಹೋಗುತ್ತದೆ'- ಎಂಬಿತ್ಯಾದಿ ತಪ್ಪು ಅಭಿಪ್ರಾಯಗಳನ್ನು ರೂಪಿಸುವ ಹುನ್ನಾರಗಳು ಕೂಡ ಕ್ರಿಯಾಶೀಲಗೊಂಡಿವೆ. ದೊಡ್ಡ ಸೌಲಭ್ಯಗಳಿಂದ ಮಾದಿಗ ಸಮುದಾಯ ವಂಚಿತವಾಗಿದೆ. ತನ್ನದೇ ಸೋದರ ಜಾತಿ, ಸಮುದಾಯಗಳಿಂದ ಅನ್ಯಾಯಕ್ಕೊಳಗಾಗುತ್ತ ಬಂದಿರುವ ತಳ ಸಮುದಾಯಗಳಿಗೆ ಒಳ ಮೀಸಲಾತಿ ಆಸರೆಯಾಗಬಲ್ಲದು. ಒಳಮೀಸಲಾತಿಯು ಸಂವಿಧಾನವನ್ನು ವಿಸ್ತರಿಸುವ ಪ್ರಕ್ರಿಯೆಯೇ ಆಗಿದ್ದು, ಸಾಮಾಜಿಕ ನ್ಯಾಯ ಎತ್ತಿಹಿಡಿಯುವ ಬದ್ಧತೆಯನ್ನು ಪ್ರಗತಿಪರ ಸಂಘಟನೆಗಳು ಮಾಡಲಿ ಎಂದು ಆಶಿಸುತ್ತೇನೆ.



ಡಾ. ಚರಿತಾ ಮೈಸೂರು, ಕಲಾವಿದೆ, ಉಪನ್ಯಾಸಕಿ

'ಒಳಮೀಸಲಾತಿ ಅನಿವಾರ್ಯ'



ಸಾಮಾಜಿಕ ಜಾತಿ ವ್ಯವಸ್ಥೆಯ ಶ್ರೇಣಿಯಲ್ಲಿ ತಳಸಮುದಾಯದ ಪ್ರಾತಿನಿಧ್ಯಕ್ಕಾಗಿ ಸಂವಿಧಾನಾತ್ಮಕವಾಗಿ ಸಿಕ್ಕ ಅವಕಾಶವೇ ಮೀಸಲಾತಿ. ಅರ್ಹರೆಲ್ಲರಿಗೂ ಮೀಸಲಾತಿಯ ಅನುಕೂಲ ದೊರೆಯದೇ ಇರುವ ಪರಿಸ್ಥಿತಿಯೇ ಒಳಮೀಸಲಾತಿಯ ಅನಿವಾರ್ಯತೆಯನ್ನು ಸೃಷ್ಟಿಸಿದೆ.

ಮೀಸಲಾತಿಯ ಕಾರಣದಿಂದ ಶಿಕ್ಷಣ ಪಡೆದ ಮೊದಲ ತಲೆಮಾರಿನ ಬಲಗೈ, ಹೊಲೆಯ ಸಮುದಾಯದವರು, ಆರಂಭದಿಂದಲೇ ಮೀಸಲಾತಿಯ ಸಿಂಹಪಾಲನ್ನು ಪಡೆಯುತ್ತಿದ್ದರು. ಶಿಕ್ಷಣದಿಂದ ವಂಚಿತರಾದ ಎಡಗೈ ಮಾದಿಗ ಸಮುದಾಯದವರು ತಮ್ಮ ಮೀಸಲಾತಿ ಪಡೆದುಕೊಳ್ಳುವಲ್ಲಿ ಮೊದಲಿನಿಂದಲೂ ಹಿಂದಿದ್ದರು. ಹೀಗಾಗಿ ಮಾದಿಗರಿಗೆ ಅವರ ಜನಸಂಖ್ಯೆಗನುಗುಣವಾಗಿ ದೊರೆಯಬೇಕಿದ್ದ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಅವಕಾಶಗಳು ದೊರೆಯಲೇ ಇಲ್ಲ. ಒಳಮೀಸಲಾತಿ ಇಲ್ಲದೇ ಇರುವುದರ ಪರಿಣಾಮ ಇದು. ಇದರ ವಿರುದ್ಧ 1980ರ ದಶಕದಲ್ಲೇ ದನಿ ಎತ್ತಲಾಯಿತು ಮತ್ತು ಒಳಮೀಸಲಾತಿಗಾಗಿ ಒತ್ತಾಯಿಸಲಾಯಿತು. ಯಾವ ಸರ್ಕಾರಗಳೂ ಒಳಮೀಸಲಾತಿಯನ್ನು ತರಲು ಉತ್ಸುಕತೆ ತೋರಲಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಉತ್ಸುಕತೆ ತೋರಿತಾದರೂ, ಬಲಗೈ ಸಮುದಾಯದ ವಿರೋಧಕ್ಕೆ ಹೆದರಿ ಕೈತೊಳೆದುಕೊಂಡಿತು. ಈಗಿನ ಸರ್ಕಾರವೂ ಒಳಮೀಸಲಾತಿ ನೀಡುವ ಭರವಸೆ ನೀಡುತ್ತಿದೆಯಾದರೂ, ಕಾದು ನೋಡಬೇಕಿದೆ.

ಈಚೆಗೆ ನಡೆದ ದಲಿತ ಸಂಘರ್ಷ ಸಮಿತಿಯ ಐಕ್ಯತಾ ಸಮಾವೇಶದ ಹಕ್ಕೊತ್ತಾಯಗಳಲ್ಲಿ ಒಳಮೀಸಲಾತಿಗೆ ಜಾಗ ನೀಡಲಾಗಿದೆ. ಬಲಗೈ ಸಮುದಾಯವೂ ಒಳಮೀಸಲಾತಿಗೆ ಒಪ್ಪಿಗೆ ಸೂಚಿಸಿದಂತಾಗಿದೆ. ಪರಿಶಿಷ್ಟ ಪಂಗಡದ ಬೇಡಿಕೆಯ ಹೋರಾಟಕ್ಕೆ ಮಣಿದು ಸುಗ್ರೀವಾಜ್ಞೆ ಮೂಲಕ ಶೇ 7 ಮೀಸಲಾತಿ ಹೆಚ್ಚಿಗೆ ಮಾಡಿರುವ ಹಿನ್ನೆಲೆಯಲ್ಲಿ ಅದಕ್ಕೂ ಮೊದಲಿನಿಂದಲೂ ಹೋರಾಟ ನಡೆಸಿಕೊಂಡು ಬಂದಿರುವ ಒಳಮೀಸಲಾತಿ ಹೋರಾಟದ ಕಾವು ಮತ್ತಷ್ಟು ಹೆಚ್ಚಾಗಿದೆ. ಈಗ ಮೇಲ್ನೋಟಕ್ಕೆ ಒಳಮೀಸಲಾತಿಗೆ ವಿರೋಧವೇ ಇಲ್ಲದಂತಾಗಿದೆ. ಹೀಗಿರುವಾಗ ಮುಂಬರುವ ಅಧಿವೇಶನದಲ್ಲಿ ಪ್ರಸ್ತುತ ಸರ್ಕಾರ ಧೈರ್ಯ ಮಾಡಿ ಒಳಮೀಸಲಾತಿ ತರುತ್ತದೆಯೇ ಎಂಬುದನ್ನು ನೋಡಬೇಕಿದೆ.

ಡಾ.ನಾಗೇಶ್ ಕೆ.ಎನ್. ಚಿತ್ರ ಸಾಹಿತಿ, ಸಾಮಾಜಿಕ ಕಾರ್ಯಕರ್ತ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾಥೆ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು 'ಡೋಂಗಿ ಹಿಂದೂ' ಎಂದು ಕರೆದಿದ್ದಾರೆ ಎನ್ನಲಾದ ವಿಡಿಯೊ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಭಾರತ್ ಜೋಡೋ' ಯಾತ್ರೆಯ ಭಾಗವಾಗಿ ಮಧ್ಯಪ್ರದೇಶದ ಉಜ್ಜೈನಿಗೆ ಭೇಟಿ ನೀಡಿದ್ದ ರಾಹುಲ್, ಮಹಾಕಾಳ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ್ದರು. 'ಸುಪ್ರಿಯಾ ಅವರು ಈಗಲಾದರೂ ಧೈರ್ಯದಿಂದ ತಮ್ಮ ನಾಯಕರ ಬಗ್ಗೆ ಮಾತನಾಡಿದ್ದಾರೆ' ಎಂದು ಜಾಲತಾಣ ಬಳಕೆದಾರರು ಪ್ರಶಂಸಿಸಿದ್ದಾರೆ. ಆದರೆ ಈ ವಿಡಿಯೊವನ್ನು ತಿರುಚಲಾಗಿದೆ.

✅ ಸುಪ್ರಿಯಾ ಅವರು 'ಡೋಂಗಿ ಹಿಂದೂ' ಎಂದು ಕರೆದಿದ್ದು ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಹೊರತು ರಾಹುಲ್ ಗಾಂಧಿ ಅವರನ್ನು ಅಲ್ಲ ಎಂದು 'ಇಂಡಿಯಾ ಟುಡೇ' ವರದಿ ಮಾಡಿದೆ. ಸುಪ್ರಿಯಾ ಅವರು 'ಆಜ್‌ತಕ್' ಟಿ.ವಿ ಸುದ್ದಿವಾಹಿನಿಯ ಚರ್ಚೆಯಲ್ಲಿ ಭಾಗಿಯಾಗಿದ್ದಾಗ ಈ ಕುರಿತು ಮಾತನಾಡಿದ್ದರು. ಚರ್ಚೆಯ ವಿಡಿಯೊದಲ್ಲಿ ರಾಹುಲ್ ಉಲ್ಲೇಖವಿಲ್ಲ. ಮೋದಿ ಅವರು ಇತ್ತೀಚೆಗೆ ದೇವಸ್ಥಾನಕ್ಕೆ ಹೋಗಿದ್ದ ವಿಚಾರವಾಗಿ ನಡೆಯುತ್ತಿದ್ದ ಚರ್ಚೆಯಲ್ಲಿ ಭಾಗಿಯಾಗಿದ್ದ ಸುಪ್ರಿಯಾ, 'ಲೆದರ್‌ಶೂ ಧರಿಸಿ ಪ್ರದಕ್ಷಿಣೆ ಹಾಕುವ ಅವರು ನಮಗೆ ಹಿಂದೂ ಧರ್ಮದ ಪಾಠ ಮಾಡುತ್ತಾರೆ. ಬೆಲೆ ಏರಿಕೆ, ನಿರುದ್ಯೋಗ ವಿಚಾರಗಳನ್ನು ಮರೆಮಾಚಲು ಈ ರೀತಿ ಮಾಡುತ್ತಿದ್ದಾರೆ' ಎಂದು ಹೇಳಿದ್ದ ಮಾತುಗಳು ಮೂಲ ವಿಡಿಯೊದಲ್ಲಿವೆ. ವಿಡಿಯೊದಲ್ಲಿ 'ಮೋದಿ' ಹೆಸರನ್ನು ಅವರು ಉಲ್ಲೇಖಿಸಿದ್ದಾರೆ. ಆದರೆ ಮೋದಿ ಹೆಸರನ್ನು ಕತ್ತರಿಸಿ, ರಾಹುಲ್ ಗಾಂಧಿ ಅವರ ವಿಡಿಯೊ ಜೊತೆ ಜೋಡಿಸಿ ವಿಡಿಯೊವನ್ನು ಮರುಸೃಷ್ಟಿಸಲಾಗಿದೆ ಎಂದು ವರದಿ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಆಸಕ್ತಿ-ವಿರಕ್ತಿ

ಹೊರಗೆ ಲೋಕಾಸಕ್ತಿಯೊಳಗೆ ಸಕಲ ವಿರಕ್ತಿ |
ಹೊರಗೆ ಕಾರ್ಯಧ್ಯಾನವೊಳಗುದಾಸೀನ ||
ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ |
ವರಯೋಗಮಾರ್ಗವಿದು – ಮಂಕುತಿಮ್ಮ ||
773||

ಪದ-ಅರ್ಥ: ಲೋಕಾಸಕ್ತಿಯೊಳಗೆ = ಲೋಕಾಸಕ್ತಿ(ಲೋಕವ್ಯವಹಾರಗಳಲ್ಲಿ ಆಸಕ್ತಿ) + ಒಳಗೆ, ಕಾರ್ಯಧ್ಯಾನವೊಳಗುದಾಸೀನ = ಕಾರ್ಯಧ್ಯಾನ + ಒಳಗೆ + ಉದಾಸಿನ(ನಿರಾಸಕ್ತಿ), ಸಂಸ್ಕೃತಿಭಾರವೊಳಗದರ = ಸಂಸ್ಕೃತಿ(ಸಂಸಾರ) + ಭಾರ + ಒಳಗೆ + ಅ ದರ.

ವಾಚ್ಯಾರ್ಥ: ಹೊರಗೆ ಲೋಕದ ವ್ಯವಹಾರದಲ್ಲಿ ಆಸಕ್ತಿ ಆದರೆ ಫಲದ ಆಸೆಯಲ್ಲಿ ವಿರಕ್ತಿ. ಹೊರಗೆ ಕಾರ್ಯದಲ್ಲಿ ದಕ್ಷ ಆದರೆ ಒಳಗೆ ಅದರ ಬಗ್ಗೆ ಉದಾಸೀನ. ಹೊರನೋಟಕ್ಕೆ ಸಂಸಾರದ ಭಾರವನ್ನು ಹೊತ್ತರೂ ಒಳಗೆ ಅದರ ಬಗ್ಗೆ ತಿರಸ್ಕಾರ. ಇದೆ ಶ್ರೇಷ್ಠ ಯೋಗಮಾರ್ಗ.

ವಿವರಣೆ: ಜಮುನಾಲಾಲ್ ಬಜಾಜ್ ಅನೇಕ ನಾಯಕರಲ್ಲಿ ಪ್ರಮುಖ ಹೆಸರು. ಆಗರ್ಭ ಶ್ರೀಮಂತರು. ರಾವ್‌ಬಹಾದೂರ್ ಪದವಿ ಪಡೆದಿದ್ದವರು. ಗೌರವದ ಮ್ಯಾಜಿಸ್ಟ್ರೇಟ್ ಕೆಲಸವೂ ದೊರೆತಿತ್ತು. ಹಾಗೆಯೇ ಮುಂದುವರೆದಿದ್ದರೆ 'ಸರ್' ಪದವಿ ದೊರಕುವುದು ಕಷ್ಟವಿರಲಿಲ್ಲ. ಆದರೆ ಗಾಂಧೀಜಿಯ ರಣದುಂಧುಬಿ ಅವರನ್ನು ದೇಶಸೇವೆಗೆ ಸೆಳೆಯಿತು. ಅವರನ್ನು ವಿರಕ್ತರನ್ನಾಗಿಸಿತು. ಅಪಾರ ಐಶ್ವರ್ಯ, ಹೊಲಮನೆಗಳ ವ್ಯವಹಾರ, ಹರಡಿದ್ದ ವ್ಯಾಪಾರ ಎಲ್ಲವನ್ನು ಒಂದು ವ್ಯವಸ್ಥೆಗೆ ತಂದು, ಮತ್ತೊಬ್ಬರನ್ನು ವ್ಯವಸ್ಥಾಪಕರನ್ನಾಗಿ ಮಾಡಿ, ನಿರಾಳವಾಗಿ ಹೊರಬಂದು ದೇಶಸೇವೆಗೆ ಕಂಕಣತೊಟ್ಟು ನಿಂತರು. ಮನೆತನದ ಜವಾಬ್ದಾರಿ ಕಳಚಿದರೂ ರಾಷ್ಟ್ರಸೇವೆಯ ಜವಾಬ್ದಾರಿ ಹೆಚ್ಚಾಯಿತು. ದುಡಿತವೆಲ್ಲ ದೇಶಕ್ಕೆ, ತನಗೆ ಏನೂ ಇಲ್ಲ. ಹರಿಜನಸೇವೆಗೆ, ಖಾದೀ ಕಾರ್ಯದ ಕೆಲಸಕ್ಕೆ ದಿನವೆಲ್ಲ ದುಡಿತ. ಆದರೆ ಎಲ್ಲ ರಾಷ್ಟ್ರಕ್ಕೆ ಸಮರ್ಪಿತ. ಸತ್ಯಾಗ್ರಹದ ಮುಂಚೂಣಿಯಲ್ಲಿ ಕೆಲಸ. ಸೆರೆಮನೆಗೆ ಕಳುಹಿಸಿದರೆ ನಗುತ್ತ ಹೋದರು. ಸೆರೆಮನೆಯಲ್ಲಿ ಸುಮಾರು ಹತ್ತು ಸೇರು ದವಸವನ್ನು ಒಬ್ಬರೇ ಬೀಸಿದರು. ದುಡ್ಡು ಎಣಿಸುವ ಕೈ ಬೀಸುಕಲ್ಲನ್ನು ತಿರುಗಿಸಿತು. ಅವರು ಬೇರೆ ಬೇರೆ ವರ್ಣಗಳ ಜನರ ಸಂಬಂಧಗಳನ್ನು ಗಂಟು ಹಾಕಿ ಮದುವೆ ಮಾಡಿಸುವುದರಲ್ಲಿ ಸದಾ ಮುಂದೆ. ಅದಕ್ಕೇ ಅವರಿಗೆ "ಶಾದೀಲಾಲ್" ಎಂಬ ಅಡ್ಡ ಹೆಸರು. ಎಲ್ಲ ಸಂಭ್ರಮಗಳಲ್ಲಿ,ಸಂತೋಷದಲ್ಲಿ ಭಾಗಿಯಾದರೂ ಮನದಲ್ಲಿ ತಾನೊಬ್ಬ ಸನ್ಯಾಸಿಯೇ. ಬದುಕು ಎಷ್ಟು ಸರಳವೋ ಅಷ್ಟೇ ಕಠೋರ. ರಾಜನಾಗಿ ಬದುಕಬಹುದಾಗಿದ್ದರೂ ಆರಿಸಿಕೊಂಡದ್ದು ವಿರಕ್ತ ಜೀವನ. ಈ ಕಗ್ಗ ಇಂಥವರ ಬಗ್ಗೆಯೇ ಹೇಳುತ್ತದೆ. ಹೊರಜಗತ್ತಿಗಾಗಿ ಎಲ್ಲ ಆಸಕ್ತಿ ತೋರಿದರೂ ಸ್ವಂತಕ್ಕಾಗಿ ವಿರಕ್ತಿಮಾರ್ಗವನ್ನೇ ಅಪ್ಪಿಕೊಳ್ಳುವುದು. ಜಗತ್ತಿನಲ್ಲಿ ತೆಗೆದುಕೊಂಡ ಜವಾಬ್ದಾರಿಗಳಿಗಾಗಿ ಸತತವಾದ ಕಾರ್ಯದ ಧ್ಯಾನ. ಆದರೆ ಅಂತರ್ಯದಲ್ಲಿ ಆ ಕಾರ್ಯದ ಫಲಾಫಲದ ಬಗ್ಗೆ ಉದಾಸೀನತೆ. ಹೊರಗೆ ನೋಡಿದರೆ ಸಂಸಾರಕ್ಕಾಗಿ, ಅದು ಸ್ವಂತದ್ದಾಗಬಹುದು, ಒಪ್ಪಿಕೊಂಡ ವ್ಯವಸ್ಥೆಯದಾಗಬಹುದು, ಅದರ ಭಾರವನ್ನು ಹೊರಲು ಸದಾ ಸಿದ್ಧವಾದಂತೆ ತೋರಿದರೂ ಒಳಗೆ ಅದರ ಬಗ್ಗೆ ತಾತ್ಸಾರ. ಹೀಗೆ ನಡೆಯುವುದು ಜ್ಞಾನಿಗಳಮಾರ್ಗ. ಇದೇ ಶ್ರೇಷ್ಠ ಯೋಗಮಾರ್ಗ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ
ಗುರುವಾರ ಡಿಸೆಂಬರ್ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಪೂರ್ಣಿಮಾ ಗಂ. 09-38 ನಕ್ಷತ್ರ: ರೋಹಿಣಿ ಗಂ. 12-33 ಯೋಗ: ಸಾಧ್ಯ ಗಂ. 27-11, ಕರಣ: ಬವ ಗಂ. 09-38, ವೃಶ್ಚಿಕ ಮಾಸದ 21 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 –03-00 ಸೂರ್ಯೋದಯ : 06-45 ಸೂರ್ಯಾಸ್ತ : 06-00 ಮುಸ್ಲಿಂ ದಿನಾಂಕ : 13 ಜುಮಾದುಲ್ಲಾವಲ್
ದಿನ ವಿಶೇಷ : ಹುತ್ತರಿ 3 ದಿನ (ಕೂರ್ಗ್), ಮಾರ್ಗಿಪೂರ್ಣಿಮಾ
ಅದೃಷ್ಟ ಸಂಖ್ಯೆ : 3, 7

ಮೇಷ: ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಅಗತ್ಯ ಪೂರೈಸಿ. ನೂತನ ವಾಹನ ಕೊಳ್ಳುವುದನ್ನು ಸ್ವಲ್ಪ ದಿನಗಳ ಮಟ್ಟಿಗೆ ಮುಂದೂಡುವುದು ಉತ್ತಮ. ಶಿವನ ನಾಮ ಸ್ಮರಣೆ ಅಥವಾ ಧ್ಯಾನ ಮಾಡುವುದು ಒಳ್ಳೆಯದು.

ವೃಷಭ: ಗುರಿಯನ್ನು ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ಯೋಜನೆಗಳು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು. ಈ ದಿನ ಹಸಿರು ಬಣ್ಣ ಅದೃಷ್ಟ ತರುವುದು.

ಮಿಥುನ: ವಿಶೇಷವಾಗಿ ಹೆಂಡತಿಯ ಬಳಗದಲ್ಲಿ ಆದಷ್ಟು ಮೌನವಾಗಿರಲು ನಿಶ್ಚಯಿಸಿ. ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವುದು ಸೂಕ್ತ.

ಕರ್ಕಾಟಕ: ಇಂದಿನ ಕೆಲಸದಲ್ಲಿ ಹತ್ತು ಬಾರಿ ಯೋಚಿಸಿ ನಂತರದಲ್ಲಿ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದು ಉತ್ತಮ. ಅನಾರೋಗ್ಯದ ಕಾರಣದಿಂದಾಗಿ ಹಣಕಾಸಿನ ಅನಿವಾರ್ಯತೆ ಎದುರಿಸಬೇಕಾಗಲಿದೆ.

ಸಿಂಹ: ಮನೆಗೆ ಸಹೋದರಿಯ ಆಗಮನ ಮತ್ತು ಭೇಟಿಯು ಸಂತೋಷಕ್ಕೆ ಕಾರಣವಾಗುತ್ತದೆ ನವಗ್ರಹಾರಾಧನೆಯಿಂದ ಸಮಸ್ಯೆಗೆ ದಾರಿಯು ಮತ್ತು ಮನಸ್ಸಿಗೆ ಹೆಚ್ಚಿನ ನೆಮ್ಮದಿ ಬರುವುದು.

ಕನ್ಯಾ: ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ಬಗೆ ಬಗೆಯ ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ.

ತುಲಾ: ಕೆಲಸ ಕಾರ್ಯದಲ್ಲಿ ಸಮಾನ ಮನಸ್ಕರರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆದು ಕಾರ್ಯಭಾರ ಸುಗಮವಾಗುತ್ತದೆ. ದೇವತಾ ಕಾರ್ಯಗಳನ್ನು ನಡೆಸುವತ್ತ ಗಮನವನ್ನು ನೀಡುವುದರಿಂದ ಶುಭವಾಗಲಿದೆ.

ವೃಶ್ಚಿಕ: ಕುಟುಂಬದವರೊಡನೆ ಮನರಂಜನೆಗಾಗಿ ಅಲ್ಪ ಕಾಲ ಮೀಸಲಿಡಲು ಪ್ರಯತ್ನಿಸಿ. ಶನೈಶ್ಚರನ ಆರಾಧನೆಯಿಂದ ಜಟಿಲ ಸಮಸ್ಯೆಯು ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

ಧನು: ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಆರೋಗ್ಯದ ಬಗ್ಗೆ ಕಾಳಜಿ ಅವಶ್ಯಕವಾಗುತ್ತದೆ. ಮಂಗಳ ಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತದೆ.

ಮಕರ: ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಏಕೆಂದರೆ ನಿಮ್ಮ ಮೇಲಿರುವ ನಂಬುಗೆ ಮತ್ತು ವಿಶ್ವಾಸದಿಂದಾಗಿ ಈ ಅವಕಾಶಗಳು ಸಿಗಲಿದೆ. ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.


ಕುಂಭ: ಹೆಚ್ಚಿನ ವಿದ್ಯಾಭ್ಯಾಸದ ಬಗ್ಗೆ ಚಿಂತನೆ ನಡೆಯುವುದು. ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ, ಸಮಯ ಹಾಳಾಗುವುದು ಎಂದು ತಿಳಿದಿರಲಿ. ತರಕಾರಿ ಮಾರಾಟಗಾರರಿಗೆ ಉತ್ತಮ ದಿನ.

ಮೀನ: ಕಮಿಶನ್ ಏಜೆಂಟ್‌ಗಳಿಗೆ ಮತ್ತು ಸರಕು ಸಾಗಾಣಿಕೆದಾರರಿಗೆ ಉತ್ತಮ ದಿನ. ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿ ವ್ಯವಸ್ಥಿತವಾದ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅವರ ಭವಿಷ್ಯ ಉತ್ತಮವಾಗುವುದು.

ಪದಬಂಧ 5162
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಗುರಿಯನ್ನು ಮುಟ್ಟಲು ಸಂಕಲ್ಪ ಮಾಡಿದವನು (5)
3. ಸಮಾಧಾನದಿಂದಲೇ ನಡೆದಿರುವ ರಾಜಿ (3)
6. ಏನೂ ಇರದೆ ಬರಿದಾದುದುದು (2)
7. ವೀರಾಜಮಾನವಾಗಿ ಕುಳಿತಿರುವ ಒಡೆಯ (4)
10. ವಿದ್ಯಾರ್ಹತೆಯ ಪ್ರಶಸ್ತಿ ನೀಡುವುದು (5)
13. ಮತದೊಳಗೆ ಮೂಡಿರುವ ಅಭಿಪ್ರಾಯ (4)
16. ಅರಿವೆಯೊಳಗಡಗಿದ ಶತ್ರು (2)
17. ಸ್ವಚ್ಛಂದತೆಯನ್ನು ಹೀಗೆನ್ನಿ (3)
18. ಇದು ಕನ್ನಡಿಗನ ಲೈಬ್ರರಿ! (5)

ಮೇಲಿಂದ ಕೆಳಕ್ಕೆ
1. ಕ್ಷಾಮದಿಂದ ಆರಂಭವಾದ ಮುಕ್ತಾಯ! (4)
2. ಮಠದ ಹತ್ತಿರ ಕಾಣಿಸಿದ ಆಮೆ (3)
4. ತುಸುವೇ ಬೀರಿದ ಮಂದಹಾಸ (4)
5. ಗಾಯಕಿಗಾದ ಪೆಟ್ಟು (2)
8. ಜನರ ನಡುವಿರುವ ಸೇವಕ (3)
9. ಈತ ಬಲು ನಿಷ್ಣಾತ (3)
10. ಆತಂಕದಿಂದ ಹಾರುತ್ತಿರುವ ಚಿಟ್ಟೆ (3)
11. ನಿಯಮವಾಗಿಯೇ ಇದು ಮನೋಹರ! (4)
12. ಈ ಪರಿ ನಡೆದಿರುವ ಲಗ್ನ (4)
14. ಕಿರಿಯ ಸಹೋದರ ಇಲ್ಲಿದ್ದಾನೆ (2)
15. ಬಲದ ವಿರುದ್ಧಕ್ಕಿರುವ ರೊಡ್ಡ! (3)



5161ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪಸ್ವರ 3.ವಜ್ರೋತ್ಸವ 5.ಸನ್ಮಾನ 6.ಕಲಹ 8.ಬಾಲಕ 9.ಉತ್ತರ 10.ಕನಕ 12.ಬಿಂದಿಗೆ 14.ಕರಣಿಕ 15.ಹತಬಲ

ಮೇಲಿಂದ ಕೆಳಕ್ಕೆ:
1.ಅಭ್ರಕ 2.ರಸ 3.ವನ 4.ವಲ್ಮೀಕ 7.ಹರಟೆಗಾರ 8.ಬಾಲಬಡುಕ 9.ಉದಕ 11.ಕಲಿಲ 12.ಬಿಂಕ 13.ಗೆಹ

ಸುಡೊಕು 5548

9		3		6				2
							5	
	1	2		5		6		4
	8			1		4		
3		4	2		7		8	
	9		4		3			6
6		5				8		
				7				1
1		8	9		6		4	

5547 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ವಿವಿಧ ರಾಜ್ಯಗಳ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ ಮಂಡನೆ

ನವದೆಹಲಿ(ಪಿಟಿಐ): ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ತರುವ ಉದ್ದೇಶದ ವಿವಿಧ ರಾಜ್ಯಗಳ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ 2022 ಅನ್ನು ಬುಧವಾರ ಲೋಕಸಭೆಯಲ್ಲಿ ಮಂಡಿಸಲಾಯಿತು.

ಈ ಮಸೂದೆಯು ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಕಸಿದುಕೊಳ್ಳಲಿದೆ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಆರೋಪಿಸಿದ ವಿರೋಧ ಪಕ್ಷಗಳ ಸಂಸದರು, ಮಂಡನೆಗೂ ಮೊದಲು ಮಸೂದೆಯನ್ನು ಸ್ಥಾಯಿ ಸಮಿತಿಯ ಪರಿಶೀಲನೆಗೆ ಕಳುಹಿಸಬೇಕು ಎಂದು ಪಟ್ಟು ಹಿಡಿದರು. ಆದರೆ, ಕೇಂದ್ರ ಸರ್ಕಾರ ಈ ಬೇಡಿಕೆಗೆ ಕಿವಿಗೊಡಲಿಲ್ಲ.

ಮಸೂದೆ ಮಂಡಿಸಿದ ಕೇಂದ್ರದ ಸಹಕಾರ ಖಾತೆ ರಾಜ್ಯ ಸಚಿವ ಬಿ.ಎಲ್. ವರ್ಮ ಅವರು, ಈ ಮಸೂದೆಯಿಂದ ಸಹಕಾರಿ ವಲಯದ ಆಡಳಿತ ಬಲಪಡಿಸಲು, ಚುನಾವಣಾ ಪ್ರಕ್ರಿಯೆ ಸುಧಾರಿಸಲು, ಮೇಲ್ವಿಚಾರಣಾ ಕಾರ್ಯವಿಧಾನ ಸುಧಾರಣೆಗೆ ನೆರವಾಗಲಿದೆ. ವಿವಿಧ ರಾಜ್ಯಗಳ ಸಹಕಾರ ಸಂಘಗಳಲ್ಲಿ ನಡೆಸುವ ವ್ಯವಹಾರಗಳನ್ನು ಇದು ಸರಳಗೊಳಿಸಲು ಖಾತ್ರಿ ಇದೆ ಎಂದರು.

'ಸಹಕಾರಿ ಸಂಘಗಳು ರಾಜ್ಯ ಪಟ್ಟಿ ವಿಷಯಗಳ ವ್ಯಾಪ್ತಿಯಲ್ಲಿದೆ. ಆದರೆ, ಈ ಮಸೂದೆಯು ಕೇಂದ್ರವು ರಾಜ್ಯ ಸರ್ಕಾರಗಳ ವ್ಯಾಪ್ತಿಯನ್ನು ಅತಿಕ್ರಮಿಸುತ್ತಿದೆ ಎಂಬುದರ ಸ್ಪಷ್ಟ ಸೂಚನೆಯಾಗಿದೆ. ಅದಕ್ಕಾಗಿಯೇ ದೇಶದಾದ್ಯಂತ ಪ್ರತಿಭಟನೆಗಳು ಹೆಚ್ಚುತ್ತಿವೆ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾದ ಅಧೀರ್ ರಂಜನ್ ಚೌಧರಿ ಹೇಳಿದರು.

ಇದಕ್ಕೆ ದನಿಗೂಡಿಸಿದ ಡಿಎಂಕೆ ನಾಯಕ ಆರ್. ಬಾಲು, ಆರ್‌ಎಸ್‌ಪಿ ನಾಯಕ ಎನ್‌.ಕೆ. ಪ್ರೇಮಚಂದ್ರನ್, ಕಾಂಗ್ರೆಸ್‌ನ ಮನೀಶ್ ತಿವಾರಿ ಅವರು 'ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿರುವ ಈ ಮಸೂದೆಯನ್ನು ತಕ್ಷಣವೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ಬಿಜೆಪಿಯ 15 ವರ್ಷಗಳ ಆಡಳಿತಕ್ಕೆ ತಡೆ • 134 ವಾರ್ಡ್‌ಗಳಲ್ಲಿ ಎಎಪಿ, 104ರಲ್ಲಿ ಬಿಜೆಪಿಗೆ ಜಯ

ಎಎಪಿ ತೆಕ್ಕೆಗೆ ದೆಹಲಿ ಮಹಾನಗರ ಪಾಲಿಕೆ

ನವದೆಹಲಿ(ಪಿಟಿಐ): ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಎಎಪಿ ಇದೇ ಮೊದಲ ಬಾರಿಗೆ ಜಯಭೇರಿ ಬಾರಿಸಿದೆ. 15 ವರ್ಷಗಳಿಂದ ಬಿಜೆಪಿ ತೆಕ್ಕೆಯಲ್ಲಿದ್ದ ಪಾಲಿಕೆಯ ಚುಕ್ಕಾಣಿಯನ್ನು ಎಎಪಿ ಕಸಿದುಕೊಂಡಿದೆ.

ಒಟ್ಟು 272 ವಾರ್ಡ್‌ಗಳಿದ್ದ ಉತ್ತರ ದೆಹಲಿ- ದಕ್ಷಿಣ ದೆಹಲಿ ಮತ್ತು ಪೂರ್ವ ದೆಹಲಿ ನಗರ ಪಾಲಿಕೆಗಳನ್ನು ಇದೇ ಮೇನಲ್ಲಿ ವಿಲೀನ ಮಾಡಲಾಗಿತ್ತು. ವಾರ್ಡ್‌ಗಳ ಸಂಖ್ಯೆ 250ಕ್ಕೆ ಇಳಿಸಲಾಗಿತ್ತು. ವಿಲೀನದ ನಂತರ ನಡೆದ ಮೊದಲ ಚುನಾವಣೆ ಇದು. ಇದರಲ್ಲಿ ಎಎಪಿ 134 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿದೆ. ಬಿಜೆಪಿ 104 ವಾರ್ಡ್‌ಗಳಿಗೆ ತೃಪ್ತಿಪಟ್ಟುಕೊಂಡಿದೆ.

'ಎಎಪಿಯು 150-160 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಲಿದೆ. ಬಿಜೆಪಿಯ ಬಲ 80-90 ವಾರ್ಡ್‌ಗಳಿಗೆ ಕುಸಿಯಲಿದೆ' ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿದ್ದವು.


ಮತಗಟ್ಟೆ ಸಮೀಕ್ಷೆಗಳ ಫಲಿತಾಂಶದಲ್ಲಿ ಬದಲಾವಣೆ ಇಲ್ಲದಿದ್ದರೂ, ಗೆಲುವಿನ ಅಂತರದಲ್ಲಿ ಭಾರಿ ಬದಲಾವಣೆಯಾಗಿದೆ. ಕಳೆದ ಚುನಾವಣೆಯಲ್ಲಿ 31 ವಾರ್ಡ್‌ಗಳಲ್ಲಿ ಗೆದ್ದಿದ್ದ ಕಾಂಗ್ರೆಸ್‌ನ ಬಲ ಈಗ 9 ವಾರ್ಡ್‌ಗಳಿಗೆ ಕುಸಿದಿದೆ. ಮೂವರು ಪಕ್ಷೇತರರು ಮಹಾನಗರ ಪಾಲಿಕೆಗೆ ಚುನಾಯಿತರಾಗಿದ್ದಾರೆ.

ಮೇಯರ್ ಸ್ಥಾನಕ್ಕೆ ಚುನಾವಣೆ ಇನ್ನಷ್ಟೇ ನಡೆಯಬೇಕಿದೆ. ವಾರ್ಡ್ ಸದಸ್ಯರು, ಶಾಸಕರು, ಸಂಸದರ ಒಟ್ಟು ಸಂಖ್ಯಾಬಲದಲ್ಲಿ ಎಎಪಿಯೇ ಮುಂದಿದೆ. ಹೀಗಾಗಿ ಎಎಪಿ ಸದಸ್ಯರೇ ಮೇಯರ್ ಆಗಿ ಆಯ್ಕೆಯಾಗುವುದು ಖಚಿತವಾಗಿದೆ.

ಈಚೆಗಷ್ಟೇ 10ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಂಡ ಎಎಪಿಯು, ಯಾವುದೇ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿದ್ದು ಇದೇ ಮೊದಲು. 2024ರ ಲೋಕಸಭಾ ಚುನಾವಣೆಯ ದೃಷ್ಟಿಯಿಂದ ಎಎಪಿಗೆ ಈ ಗೆಲುವು ಮಹತ್ವದ್ದಾಗಿದೆ ಎಂದು ವಿಶ್ಲೇಷಿಸಲಾಗಿದೆ.


ದೆಹಲಿಯಲ್ಲಿ ಎಎಪಿ ಕಾರ್ಯಕರ್ತರು ಪಕ್ಷದ ಜಯವನ್ನು ಸಂಭ್ರಮಿಸಿದರು –ಪಿಟಿಐ ಚಿತ್ರ

ಫಲಿತಾಂಶ



ಇದು ಕೇವಲ ಗೆಲುವಲ್ಲ, ಅತ್ಯಂತ ದೊಡ್ಡ ಜವಾಬ್ದಾರಿ. ಜಗತ್ತಿನ ಅತಿದೊಡ್ಡ ಹಾಗೂ ಅತಿ ನಕಾರಾತ್ಮಕ ಪಕ್ಷವನ್ನು ದೆಹಲಿಯ ಜನ ಸೋಲಿಸಿದ್ದಾರೆ
ಮನೀಶ್ ಸಿಸೋಡಿಯಾ, ದೆಹಲಿ ಉಪಮುಖ್ಯಮಂತ್ರಿ

ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲರ ಸಹಕಾರವೂ ಬೇಕು. ಮುಖ್ಯವಾಗಿ ಕೇಂದ್ರ ಸರ್ಕಾರ ಮತ್ತು ಪ್ರಧಾನಮಂತ್ರಿ ಅವರ ಆಶೀರ್ವಾದ ಹಾಗೂ ಸಹಾಯ ಬೇಕು
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಸತತ ನಾಲ್ಕನೇ ಬಾರಿ ಬಿಜೆಪಿ ಮೇಲೆ ವಿಶ್ವಾಸವಿಟ್ಟು ನೂರಕ್ಕೂ ಹೆಚ್ಚು ವಾರ್ಡ್‌ಗಳಲ್ಲಿ ಗೆಲುವು ದೊರಕಿಸಿಕೊಟ್ಟ ದೆಹಲಿ ಜನರಿಗೆ ಹಾಗೂ ಪಕ್ಷದ ಕಾರ್ಯಕರ್ತರಿಗೆ ಧನ್ಯವಾದ
ಮನೋಜ್ ತಿವಾರಿ, ಬಿಜೆಪಿ ಸಂಸದ

ಆಮ್ ಆದ್ಮಿ ಪಕ್ಷದಿಂದ ಕಾಂಗ್ರೆಸ್ ಅನ್ನು ಮಾತ್ರ ಸೋಲಿಸಲು ಸಾಧ್ಯ ಎಂದು ಬಿಜೆಪಿ ಪದೇ ಪದೇ ಹೇಳುತ್ತಿತ್ತು. ಇಂದು ಕೇಜ್ರಿವಾಲ್ ಅವರು ಬಿಜೆಪಿಯವರಿಗೆ ಉತ್ತರ ನೀಡಿದ್ದಾರೆ
ಸಂಜಯ್ ಸಿಂಗ್, ಎಎಪಿ ಸಂಸದ

ಮೇಯರ್ ಚುನಾವಣೆಯಲ್ಲಿ ಅಡ್ಡಮತದಾನದ ಸುಳಿವು

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಆಯ್ಕೆಯಾಗಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಮಹಿಳಾ ಸದಸ್ಯರ ಪೈಕಿ ಯಾರು ಮೇಯರ್ ಆಗುತ್ತಾರೆ ಎಂಬ ಕುತೂಹಲ ಮೂಡಿಸಿರುವ ಮಧ್ಯೆಯೇ, ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಮಾಡಿರುವ ಟ್ವೀಟ್ ಆಪರೇಷನ್ ಕಮಲದ ಸೂಚನೆ ನೀಡಿದೆ.

ಮೇಯರ್ ಹುದ್ದೆಯನ್ನು ಮಹಿಳೆಗೆ ನೀಡುವುದಾಗಿ ಎಎಪಿ ಈ ಹಿಂದೆ ಪ್ರಕಟಿಸಿತ್ತು.

ಮೇಯರ್ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಅಡ್ಡಮತದಾನ ನಡೆಯುವ ಸಾಧ್ಯತೆಯಿದೆ ಎಂಬ ಸುಳಿವನ್ನು ಮಾಳವೀಯ ನೀಡಿದ್ದಾರೆ. ಹೀಗಾಗಿ ಮೇಯರ್ ಚುನಾವಣೆಯು ತೀವ್ರ ತುರುಸಿನಿಂದ ಕೂಡಿದ್ದು, ಏನು ಬೇಕಾದರೂ ಆಗಬಹುದು ಎಂದು ವಿಶ್ಲೇಷಿಸಲಾಗಿದೆ.

ಚಂಡೀಗಢ ಪಾಲಿಕೆಯ ಉದಾಹರಣೆಯನ್ನು ಮಾಳವೀಯ ನೀಡಿದ್ದಾರೆ. ಚಂಡೀಗಢ ಪಾಲಿಕೆಯ 35 ಕ್ಷೇತ್ರಗಳ ಪೈಕಿ 14 ಕಡೆ ಗೆದ್ದಿದ್ದ ಎಎಪಿಯು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಬಹುಮತ ಸಿಕ್ಕಿರಲಿಲ್ಲ. ಆದರೆ ಅಲ್ಲಿ ಬಿಜೆಪಿ ಅಭ್ಯರ್ಥಿ ಮೇಯರ್ ಆಗಿ ಆಯ್ಕೆಯಾಗಿದ್ದರು.

ತಮ್ಮ ಪಕ್ಷದವರೇ ಮತ್ತೆ ಮೇಯರ್ ಆಗಲಿದ್ದಾರೆ ಎಂದು ದೆಹಲಿ ಬಿಜೆಪಿ ವಕ್ತಾರ ತೇಜಿಂದರ್ ಪಾಲ್ ಸಿಂಗ್ ಬಗ್ಗಾ ಕೂಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಈಗ ಇರುವ ಸಂಖ್ಯಾಬಲದಲ್ಲಿ ಬಿಜೆಪಿಗೆ ಮೇಯರ್ ಸ್ಥಾನ ಗಿಟ್ಟಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಮಾಳವೀಯ ಅವರ ಹೇಳಿಕೆಯು ಅಡ್ಡಮತದಾನದ ಜೊತೆಗೆ ಆಪರೇಷನ್ ಕಮಲದ ಸುಳಿವನ್ನು ನೀಡುತ್ತದೆ.

ತಲೆಕೆಳಗಾದ ಬಿಜೆಪಿ ಲೆಕ್ಕಾಚಾರ

ನವದೆಹಲಿ: ದೆಹಲಿ ಮಹಾನಗರ ಪಾಲಿಕೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಸಾಧಿಸಿರುವ ಗೆಲುವು ರಾಷ್ಟ್ರ ರಾಜಧಾನಿಯ ರಾಜಕೀಯ ಸಮೀಕರಣವನ್ನು ಬದಲಿಸುವ ಸಾಧ್ಯತೆಯಿದೆ. ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಯ ಓಟವನ್ನು ತಡೆಯುವಲ್ಲಿ ಬಿಜೆಪಿ ಮತ್ತೊಮ್ಮೆ ವಿಫಲವಾಗಿದ್ದು, ಒಂದು ಕಾಲದಲ್ಲಿ ದೆಹಲಿಯನ್ನು ಆಳಿದ್ದ ಕಾಂಗ್ರೆಸ್ ಪಕ್ಷ ಇನ್ನಷ್ಟು ಅಪ್ರಸ್ತುತ ಎನಿಸಿಕೊಂಡಿದೆ.

ಪ್ರಸ್ತುತ ದೆಹಲಿಯಲ್ಲಿ ಮಾತ್ರ ಬಿಜೆಪಿಗೆ ಎಎಪಿಯಿಂದ ನೇರ ಸವಾಲು ಇದ್ದು, ತನ್ನ 15 ವರ್ಷಗಳ ಆಡಳಿತವನ್ನು ಕೇಜ್ರಿವಾಲ್ ಪಕ್ಷಕ್ಕೆ ಒಪ್ಪಿಸಿದೆ. ಮೂರು ಪಾಲಿಕೆಗಳನ್ನು ವಿಲೀನ ಮಾಡುವ ತೀರ್ಮಾನ, ವಾರ್ಡ್ ಮರುವಿಂಗಡಣೆ ಪ್ರಯತ್ನ, ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯ ಮಧ್ಯದಲ್ಲೇ ದೆಹಲಿ ಪಾಲಿಕೆಗೆ ದಿಢೀರ್ ಚುನಾವಣೆ ಘೋಷಿಸಿ ಎಎಪಿ ಓಟಕ್ಕೆ ಕಡಿವಾಣ ಹಾಕಬಹುದು ಎಂಬ ಬಿಜೆಪಿ ಲೆಕ್ಕಚಾರ ಹಾಗೂ ನಿರ್ಧಾರಗಳು ಈ ಚುನಾವಣೆಯಲ್ಲಿ ತಲೆಕೆಳಗಾಗಿವೆ.

ಫಲಿತಾಂಶದ ಸುತ್ತ...

- ಚುನಾವಣೆಗೆ ಸ್ಪರ್ಧಿಸಿದ್ದ ಏಕೈಕ ತೃತೀಯಲಿಂಗಿ ಅಭ್ಯರ್ಥಿ ಬೊಬಿ ಅವರು ಕಾಂಗ್ರೆಸ್ ಅಭ್ಯರ್ಥಿಯನ್ನು ಆರು ಸಾವಿರಕ್ಕೂ ಹೆಚ್ಚು ಮತಗಳಿಂದ ಸೋಲಿಸಿದ್ದಾರೆ. ಇವರು ಎಎಪಿಯಿಂದ ಸ್ಪರ್ಧಿಸಿದ್ದರು
- ಶ್ರೀಮಂತ ಅಭ್ಯರ್ಥಿ ಬಿಜೆಪಿಯ ರಾಮ್‌ದೇವ್ ಶರ್ಮಾ ಅವರು ಎಎಪಿಯ ಮೊಹಮ್ಮದ್ ಸಾದಿಕ್ ವಿರುದ್ಧ ಸೋತಿದ್ದಾರೆ
- ದೆಹಲಿಯ ಮೂವರು ಮಾಜಿ ಮಹಿಳಾ ಮೇಯರ್‌ಗಳು ಗೆದ್ದಿದ್ದಾರೆ; ಗೆದ್ದಿರುವ ಮೂವರು ಪಕ್ಷೇತರರೂ ಮಹಿಳೆಯರು
- ಈ ಬಾರಿ ಒಟ್ಟು 125 ಮಹಿಳೆಯರು ಗೆದ್ದಿದ್ದಾರೆ
- ಕಾಂಗ್ರೆಸ್‌ನ 188 ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ
- 2020ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಎಎಪಿಯ ಮತ ಪ್ರಮಾಣ ಶೇ 53.8ರಿಂದ, ಈ ಚುನಾವಣೆಯಲ್ಲಿ ಶೇ 42.05ಕ್ಕೆ ಇಳಿಕೆಯಾಗಿದೆ. ಬಿಜೆಪಿಯ ಮತ ಪ್ರಮಾಣವು ಶೇ 38.7ರಿಂದ ಶೇ 39.09ಕ್ಕೆ ಏರಿಕೆಯಾಗಿದೆ

ದೆಹಲಿಯಲ್ಲಿ ಎಎಪಿ 134, ಬಿಜೆಪಿ 104 ಹಾಗೂ ಕಾಂಗ್ರೆಸ್ 9 ವಾರ್ಡ್‌ಗಳಲ್ಲಿ ಗೆದ್ದಿದ್ದು, ಎಎಪಿ ಸರಳ ಬಹುಮತ ಪಡೆದು ಅಧಿಕಾರ ಹಿಡಿದಿದೆ. ಮೇಯರ್ ಚುನಾವಣೆಯಲ್ಲಿ 250 ವಾರ್ಡ್‌ಗಳ ಸದಸ್ಯರು, 10 ಮಂದಿ ಸಂಸದರು ಹಾಗೂ ದೆಹಲಿ ವಿಧಾನಸಭೆಯ 70 ಶಾಸಕರ ಪೈಕಿ 14 ಶಾಸಕರು ಭಾಗವಹಿಸಬಹುದು. ನಾಮನಿರ್ದೇಶಿತ ಸದಸ್ಯರಿಗೆ ಮತದಾನಕ್ಕೆ ಅವಕಾಶವಿಲ್ಲ. 14 ಶಾಸಕರನ್ನು ಪ್ರತೀ ವರ್ಷ ಸರದಿಯಂತೆ ಆಯ್ಕೆ ಮಾಡಲಾಗುತ್ತದೆ.

ಸಂಸದರು ಹಾಗೂ ಶಾಸಕರು ಸೇರಿ ಒಟ್ಟು 24 ಜನಪ್ರತಿನಿಧಿಗಳ ಪೈಕಿ 9–10 ಮತಗಳು ಬಿಜೆಪಿಗೆ ಸಿಗಬಹುದು. ಆಗ ಬಿಜೆಪಿ ಬಲ 114 ಆಗುತ್ತದೆ. ಎಎಪಿ ಬಲ 148 ಆಗುತ್ತದೆ. ಎರಡೂ ಪಕ್ಷಗಳ ನಡುವೆ 34 ಮತಗಳ ಅಂತರವಿದೆ.

'ಪ್ರಜಾಪ್ರಭುತ್ವದಲ್ಲಿ ಚುನಾವಣೆಗೆ ತನ್ನದೇ ಪಾವಿತ್ರ್ಯವಿದೆ'

ನವದೆಹಲಿ: 'ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ತಮ್ಮದೇ ಆದ ಪಾವಿತ್ರ್ಯವನ್ನು ಹೊಂದಿವೆ ಮತ್ತು ಅದರ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಉತ್ತರಪ್ರದೇಶದ ರಾಮ್‌ಪುರ ಸದರ್ ವಿಧಾನಸಭಾ ಉಪ ಚುನಾವಣೆಯಲ್ಲಿ ಮತದಾರರನ್ನು ಪೊಲೀಸರು ಥಳಿಸಿದ್ದು, ಅವರಿಗೆ ಮತ ಹಾಕಲು ಬಿಡದೇ ಮನೆಯಲ್ಲಿರುವಂತೆ ಮಾಡಲಾಗಿದೆ ಎಂದು ವಕೀಲರೊಬ್ಬರು ಖುದ್ದಾಗಿ ಹಾಜರಾಗಿ ಆರೋಪಿಸಿದ್ದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರನ್ನೊಳಗೊಂಡ ನ್ಯಾಯಪೀಠವು, ಮತ ಎಣಿಕೆ ಯಾವತ್ತು ನಡೆಯಲಿದೆ ಎಂದು ಪ್ರಶ್ನಿಸಿದಾಗ, ವಕೀಲರು ಗುರುವಾರ ನಡೆಯಲಿದೆ ಎಂದು ಮಾಹಿತಿ ನೀಡಿದರು.

ತಮಿಳುನಾಡು ಕಾರು ಸ್ಫೋಟ: ಮೂವರ ಸೆರೆ

ಕೊಯಮತ್ತೂರು (ಪಿಟಿಐ): ಇಲ್ಲಿನ ಕೊಟ್ಟಾಯ್ ಈಶ್ವರ ದೇಗುಲದ ಹೊರಗೆ ಸಂಭವಿಸಿದ ಕಾರು ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಬುಧವಾರ ಮೂವರನ್ನು ಬಂಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತಿಳಿಸಿದೆ.

ನೀಲಗಿರಿ ಜಿಲ್ಲೆಯ ಉಮರ್ ಫಾರೂಕ್ (39) ಅಲಿಯಾಸ್ ಕೆ.ಶ್ರೀನಿವಾಸನ್, ಮಹಮ್ಮದ್ ತೌಫೀಕ್ (25) ಮತ್ತು ಫೆರೋಸೆ ಖಾನ್ (28) ಬಂಧಿತರು ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ದೀಪಾವಳಿ ಮುನ್ನಾ ದಿನ ಕಾರು ಸ್ಫೋಟಗೊಂಡಿತ್ತು. ಘಟನೆಯಲ್ಲಿ ಐಎಸ್‌ಗೆ ಸೇರಿದ ಭಯೋತ್ಪಾದಕ ಮೃತಪಟ್ಟಿದ್ದ.

ನೋಟು ಅಮಾನ್ಯ: ದಾಖಲೆ ಕೇಳಿದ 'ಸುಪ್ರೀಂ'

ನವದೆಹಲಿ: ಕೇಂದ್ರ ಸರ್ಕಾರವು 2016ರಲ್ಲಿ ₹1 ಸಾವಿರ ಹಾಗೂ ₹ 500ರ ಮುಖಬೆಲೆಯ ನೋಟುಗಳನ್ನು ಅಮಾನ್ಯಗೊಳಿಸಿದ ನಿರ್ಧಾರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡುವಂತೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

2016ರಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ತೀರ್ಪನ್ನು ಕಾಯ್ದಿರಿಸಿರುವ ನ್ಯಾಯಮೂರ್ತಿ ಎಸ್‌.ಎ. ನಜೀರ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು, ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಆರ್‌ಬಿಐ ಪರ ವಕೀಲರಾದ ಪಿ. ಚಿದಂಬರಂ ಮತ್ತು ಶ್ಯಾಮ್ ದಿವಾನ್ ಸೇರಿದಂತೆ ಅರ್ಜಿದಾರರ ಪರ ವಕೀಲರ ಮನವಿಯನ್ನು ಆಲಿಸಿತು.

ಈ ಸಂಬಂಧ ಡಿಸೆಂಬರ್ 10ರೊಳಗೆ ಲಿಖಿತ ದಾಖಲೆಗಳನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಕಕ್ಷಿದಾರರಿಗೆ ಸೂಚಿಸಿದೆ.

'ವಕೀಲರ ವಾದಗಳನ್ನು ಆಲಿಸಲಾಗಿದ್ದು, ತೀರ್ಪನ್ನು ಕಾಯ್ದಿರಿಸಲಾಗಿದೆ. ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರಕ್ಕೆ ದಾಖಲೆ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿದೆ' ಎಂದು ನ್ಯಾಯಮೂರ್ತಿ ಬಿ.ಆರ್. ಗವಾಯಿ, ಎ.ಎಸ್. ಬೋಪಣ್ಣ, ವಿ. ರಾಮಸುಬ್ರಮಣಿಯನ್ ಮತ್ತು ಬಿ.ವಿ. ನಾಗರತ್ನ ಅವರನ್ನೊಳಗೊಂಡ ಸಂವಿಧಾನ ಪೀಠವು ಹೇಳಿದೆ.

2016ರ ನ. 8ರಂದು ಕೇಂದ್ರ ಸರ್ಕಾರ ತೆಗೆದುಕೊಂಡ ನೋಟು ಅಮಾನ್ಯ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ 58 ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ವಿಚಾರಣೆ ನಡೆಸುತ್ತಿದೆ.

ಬಾಬರಿ ಮಸೀದಿ ಧ್ವಂಸ: ಆರೋಪಿಗಳ ಖುಲಾಸೆ ಪ್ರಶ್ನಿಸಿ ಅರ್ಜಿ

ಅಯೋಧ್ಯೆ: ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಎಲ್ಲಾ 32 ಆರೋಪಿಗಳನ್ನು ಖುಲಾಸೆಗೊಳಿಸಿರುವ ಸಿಬಿಐನ ವಿಶೇಷ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ) ಸುಪ್ರೀಂ ಕೋರ್ಟ್ ಮೊರೆ ಹೋಗಲಿದೆ ಎಂದು ಮಂಡಳಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಪ್ರಕರಣದಲ್ಲಿ ಮಾಜಿ ಉಪ ಪ್ರಧಾನಿ ಎಲ್‌.ಕೆ. ಅಡ್ವಾಣಿ ಸೇರಿದಂತೆ ಇತರ ಆರೋಪಿಗಳನ್ನು ಸಿಬಿಐನ ವಿಶೇಷ ನ್ಯಾಯಾಲಯವು ಖುಲಾಸೆಗೊಳಿಸಿತ್ತು. ಇದನ್ನು ಪ್ರಶ್ನಿಸಿ 2021ರ ಜ. 8ರಂದು ಅಯೋಧ್ಯೆಯ ನಿವಾಸಿಗಳಾದ ಹಾಜಿ ಮಹಬೂಬ್ ಮತ್ತು ಸಯ್ಯದ್ ಅಖ್ಲಾಕ್ ಅವರು ಅಲಹಾಬಾದ್ ಹೈಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ಆದರೆ, ಈ ಅರ್ಜಿಯನ್ನು 2022ರ ನ. 9ರಂದು ಅಲಹಾಬಾದ್ ಹೈಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠವು ವಜಾಗೊಳಿಸಿ, 'ಅರ್ಜಿದಾರರು ಈ ಪ್ರಕರಣದ ಬಲಿಪಶುಗಳಲ್ಲದ ಕಾರಣ, ತೀರ್ಪನ್ನು ಪ್ರಶ್ನಿಸಲು ಸಾಧ್ಯವಿಲ್ಲ' ಎಂದೂ ಹೇಳಿತ್ತು.

'ಬಾಬರಿ ಮಸೀದಿ ಧ್ವಂಸವನ್ನು ಕ್ರಿಮಿನಲ್ ಕೃತ್ಯ ಎಂದು ಅಯೋಧ್ಯೆ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ. ಹಾಗಾಗಿ, ಈ ಪ್ರಕರಣದಲ್ಲಿ ಖುಲಾಸೆಗೊಂಡಿರುವವರ ವಿರುದ್ಧ ನಾವು ಖಂಡಿತವಾಗಿಯೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಲಿದ್ದೇವೆ' ಎಂದು ಎಐಎಂಪಿಎಲ್‌ಬಿ ಕಾರ್ಯಕಾರಿ ಸದಸ್ಯ ಮತ್ತು ವಕ್ತಾರ ಸಯ್ಯದ್ ಖಾಸಿಲ್ ರಸೂಲ್ ಇಲ್ಯಾಸ್ ಹೇಳಿದ್ದಾರೆ.

ಮೊಬೈಲ್ ಆ್ಯಪ್ 2.0 ಆರಂಭಿಸಿದ 'ಸುಪ್ರೀಂ'

ನವದೆಹಲಿ: ನ್ಯಾಯಾಲಯ ಕಲಾಪಗಳ ನೇರ ಪ್ರಸಾರ ವೀಕ್ಷಣೆ ಸಾಧ್ಯವಾಗಿಸುವ ಆಂಡ್ರಾಯ್ಡ್ 2.0 ಆವೃತ್ತಿಯ ಮೊಬೈಲ್ ಅಪ್ಲಿಕೇಶನ್ ಅನ್ನು ಸುಪ್ರೀಂ ಕೋರ್ಟ್ ಬುಧವಾರ ಆರಂಭಿಸಿದೆ.

ವಕೀಲರು, ನ್ಯಾಯಾಂಗದ ಅಧಿಕಾರಿಗಳು, ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳ ನೋಡಲ್ ಅಧಿಕಾರಿಗಳು ನ್ಯಾಯಾಲಯ ಕಲಾಪದ ನೇರ ಪ್ರಸಾರವನ್ನು ತಮ್ಮ ಮೊಬೈಲ್‌ಗಳಲ್ಲೇ ಈ ಅಪ್ಲಿಕೇಶನ್ ಮೂಲಕ ವೀಕ್ಷಿಸಬಹುದಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ದಿನದ ಕಲಾಪ ಆರಂಭಿಸುವ ಮೊದಲು, 'ಈ ಮೊಬೈಲ್ ಅಪ್ಲಿಕೇಶನ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ಐಒಎಸ್ ಆವೃತ್ತಿ ಒಂದು ವಾರದೊಳಗೆ ಲಭ್ಯವಾಗಲಿದೆ' ಎಂದು ಪ್ರಕಟಿಸಿದರು.

ಕ್ರೈಸ್ತ –ಮುಸ್ಲಿಂ ದಲಿತರಿಗೆ ಮೀಸಲು: ಜನವರಿಯಲ್ಲಿ ಪರಿಶೀಲನೆ

ನವದೆಹಲಿ: ಕ್ರೈಸ್ತ ಮತ್ತು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ದಲಿತರಿಗೆ ಮೀಸಲಾತಿ ಸೌಲಭ್ಯ ವಿಸ್ತರಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಯನ್ನು 2023ರ ಜನವರಿಯಲ್ಲಿ ಪರಿಶೀಲಿಸುವುದಾಗಿ ಸುಪ್ರೀಂಕೋರ್ಟ್ ಬುಧವಾರ ತಿಳಿಸಿದೆ.

ಈ ಸಂಬಂಧ ಅಹವಾಲುಗಳನ್ನು ಪರಿಶೀಲಿಸಲು ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಅವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿರುವುದಾಗಿ ಕೇಂದ್ರ ಸರ್ಕಾರ ಪ್ರತಿಕ್ರಿಯಿಸಿದೆ ಎಂದು ಪೀಠ ಹೇಳಿದೆ.

'ಈ ಆಯೋಗ ವರದಿ ಸಲ್ಲಿಸುವವರೆಗೂ ಕಾಯಬೇಕಾ ಅಥವಾ ಈ ಸಂಬಂಧ ಲಭ್ಯ ಇರುವ ದಾಖಲೆಗಳ ಆಧಾರದ ಮೇಲೆ ನಿರ್ಧರಿಸಬಹುದಾ ಎಂಬುದನ್ನು ಮೊದಲು ಪರಿಶೀಲಿಸುವುದಾಗಿ' ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಅಭಯ್ ಎಸ್. ಓಕಾ ಮತ್ತು ವಿಕ್ರಂ ನಾಥ್ ಅವರನ್ನೊಳಗೊಂಡ ಪೀಠ ತಿಳಿಸಿದೆ.

ಕೇಂದ್ರದ ಪರ ವಿಚಾರ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕ್ರೈಸ್ತ ಮತ್ತು ಇಸ್ಲಾಂ ಧರ್ಮದಲ್ಲಿ ದಲಿತರನ್ನು ಗುರುತಿಸಲು ಶಿಫಾರಸು ಮಾಡಿದ್ದ ನ್ಯಾಯಮೂರ್ತಿ ರಂಗನಾಥ್ ಮಿಶ್ರಾ ಆಯೋಗವನ್ನು (2007) ಕೇಂದ್ರ ಸರ್ಕಾರ ಅಂಗೀಕರಿಸಿಲ್ಲ. ಈ ಆಯೋಗದ ವರದಿಯು 'ದೋಷಪೂರಿತ' ಎಂದು ಕೇಂದ್ರ ಪರಿಗಣಿಸಿದೆ ಎಂದು ತಿಳಿಸಿದರು.

ಅರ್ಜಿದಾರರೊಬ್ಬರ ಪರ ವಾದಿಸಿದ ವಕೀಲ ಪ್ರಶಾಂತ್ ಭೂಷಣ್, ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುವುದು ಅಸಾಂವಿಧಾನಿಕವಾಗಿದೆ. ಹಿಂದೂ, ಸಿಖ್, ಬೌದ್ಧ ಧರ್ಮದಲ್ಲಿರುವ ದಲಿತರಿಗೆ ಮೀಸಲಾತಿ ಸೌಲಭ್ಯ ನೀಡಲಾಗಿದೆ. ಆದರೆ ಇತರ ಧರ್ಮದಲ್ಲಿರುವ ದಲಿತರಿಗೆ ಈ ಅವಕಾಶ ಒದಗಿಸಲಾಗಿಲ್ಲ ಎಂದು ಅವರು ಹೇಳಿದರು. ಇದು ತಾರತಮ್ಯ ಎಂದು ನ್ಯಾಯಮೂರ್ತಿ ರಂಗನಾಥ್ ಮಿಶ್ರ ಆಯೋಗವೂ ಈಗಾಗಲೇ ಹೇಳಿದೆ ಎಂದು ತಿಳಿಸಿದರು.

'ಕ್ರೈಸ್ತ ಮತ್ತು ಇಸ್ಲಾಂನಲ್ಲಿ ಅಸ್ಪೃಶ್ಯತೆಯಂತಹ ದಬ್ಬಾಳಿಕೆಗಳು ಇಲ್ಲ ಎಂಬುದನ್ನು 1950ರ ಸಂವಿಧಾನ (ಪರಿಶಿಷ್ಟ ಜಾತಿ) ಆದೇಶವು ಈಗಾಗಲೇ ಸಾಬೀತು ಮಾಡಿದೆ. ಆ ಎರಡೂ ಧರ್ಮಗಳಲ್ಲಿ ಅಸ್ಪೃಶ್ಯತೆಯಂತಹ ಆಚರಣೆಗಳು ಇಲ್ಲ ಎಂಬ ಕಾರಣಕ್ಕೇ ಪರಿಶಿಷ್ಟ ಜಾತಿಗೆ ಸೇರಿದ ಜನರು ಆ ಧರ್ಮಗಳಿಗೆ ಮತಾಂತರವಾಗಿದ್ದಾರೆ. ಅಲ್ಲಿ ಅವರು ಅಂತಹ ದೌರ್ಜನ್ಯಕ್ಕೆ ಒಳಗಾಗುತ್ತಿಲ್ಲ. ಈ ಕಾರಣದಿಂದ ಅವರಿಗೆ ಪರಿಶಿಷ್ಟ ಜಾತಿಯ ಸ್ಥಾನಮಾನ ಮತ್ತು ಮೀಸಲಾತಿ ನೀಡಲು ಸಾಧ್ಯವಿಲ್ಲ' ಎಂದು ಕೇಂದ್ರ ಸರ್ಕಾರ ನವೆಂಬರ್‌ನಲ್ಲಿ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿತ್ತು.

ಕುಲಾಧಿಪತಿ ಹುದ್ದೆಗೆ ರಾಜ್ಯಪಾಲರ ಬದಲು ಶಿಕ್ಷಣ ತಜ್ಞರ ನೇಮಕಕ್ಕೆ ಅವಕಾಶ

ಕೇರಳ: ವಿ.ವಿಗಳ ತಿದ್ದುಪಡಿ ಮಸೂದೆ ಮಂಡನೆ

ತಿರುವನಂತಪುರ (ಪಿಟಿಐ): ಕೇರಳದ ವಿಶ್ವವಿದ್ಯಾಲಯಗಳ ಕುಲಾಧಿಪತಿ ಹುದ್ದೆಯಿಂದ ರಾಜ್ಯಪಾಲರನ್ನು ಕೆಳಗಿಳಿಸಿ ಶಿಕ್ಷಣ ತಜ್ಞರನ್ನು ಆ ಹುದ್ದೆಗೆ ನೇಮಿಸಲು ಅವಕಾಶ ನೀಡುವ ವಿ.ವಿಗಳ ಕಾನೂನು (ತಿದ್ದುಪಡಿ) ಮಸೂದೆಯನ್ನು ಸರ್ಕಾರ ಬುಧವಾರ ವಿಧಾನಸಭೆಯಲ್ಲಿ ಮಂಡಿಸಿತು.

ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ನೇಮಕಾತಿ ಸೇರಿ ಹಲವು ವಿಚಾರಗಳ ಸಂಬಂಧ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಮತ್ತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸರ್ಕಾರದ ನಡುವೆ ತಿಕ್ಕಾಟ ನಡೆಯುತ್ತಿರುವ ನಡುವೆಯೇ ಕಾನೂನು ಸಚಿವ ಪಿ. ರಾಜೀವ್ ಈ ಮಸೂದೆ ಮಂಡಿಸಿದರು.

ಈ ಮಸೂದೆ ಪ್ರಕಾರ, ವಿ.ವಿ ಕುಲಾಧಿಪತಿ ಸ್ಥಾನಕ್ಕೆ ಉತ್ತಮ ಹೆಸರು ಹೊಂದಿರುವ ಶಿಕ್ಷಣ ತಜ್ಞರು, ತಂತ್ರಜ್ಞಾನ, ಕೃಷಿ, ವೈದ್ಯಕೀಯ ಸೇರಿ ಇತರ ಕ್ಷೇತ್ರಗಳ ತಜ್ಞರನ್ನು ನೇಮಿಸಬಹುದು. ಕುಲಾಧಿಪತಿಗಳ ಅಧಿಕಾರಾವಧಿ ಐದು ವರ್ಷ ಇರಲಿದೆ. ಎರಡನೇ ಅವಧಿಗೆ ಅವರನ್ನೇ ಮರುನೇಮಿಸಲು ಅವಕಾಶವಿದೆ.

ವಿರೋಧ ಪಕ್ಷಗಳ ಆಕ್ಷೇಪ: ಈ ತಿದ್ದುಪಡಿ ಮಸೂದೆಗೆ ವಿರೋಧ ಪಕ್ಷ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದಕ್ಕೆ ವಿಧಾನಸಭೆಯಲ್ಲಿ ಒಪ್ಪಿಗೆ ನೀಡಿದರೆ ಸಾಕಷ್ಟು ಕಾನೂನು ತೊಡಕುಗಳನ್ನು ಎದುರಿಸ ಬೇಕಾಗುತ್ತಿದೆ ಎಂದು ಎಚ್ಚರಿಸಿದ್ದಾರೆ.

ಈ ಮಸೂದೆ ಅಸ್ಪಷ್ಟವಾಗಿದೆ. ಅಲ್ಲದೆ ವಿಶ್ವವಿದ್ಯಾಲಯಗಳ ಅನುದಾನ ಆಯೋಗದ (ಯುಜಿಸಿ) ಮಾರ್ಗಸೂಚಿಗಳ ಉಲ್ಲಂಘನೆಯಾಗಲಿದೆ. ಇದು ವಿ.ವಿಗಳ ಸ್ವಾಯತ್ತೆಯನ್ನು ಹಾಳುಮಾಡುತ್ತದೆ ಎಂದು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಹೇಳಿದರು.


ಮಸೂದೆಯು ಹಲವಾರು ನ್ಯೂನ್ಯತೆಗಳಿಂದ ಕೂಡಿದೆ. ಹಾಗಾಗಿ, ಇದನ್ನು ಹಿಂಪಡೆದು ಹೊಸ ಮಸೂದೆಯನ್ನು ಸಿದ್ಧಪಡಿಸುವಂತೆ ವಿರೋಧ ಪಕ್ಷಗಳು ಸರ್ಕಾರವನ್ನು ಒತ್ತಾಯಿಸಿವೆ.

ಜಲ್ಲಿಕಟ್ಟು: 'ಸುಪ್ರೀಂ'ನಲ್ಲಿ ವಿಚಾರಣೆ

ನವದೆಹಲಿ (ಪಿಟಿಐ): 'ಜಲ್ಲಿಕಟ್ಟು ಕ್ರೀಡೆಯ ಛಾಯಾಚಿತ್ರಗಳಿಂದ ಪ್ರಭಾವಿತವಾದರೆ ಅದು ಅತ್ಯಂತ ಅಪಾಯದ ಸ್ಥಿತಿ' ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

ತಮಿಳುನಾಡು ಜಲ್ಲಿಕಟ್ಟು ಕ್ರೀಡೆಗೆ ಮತ್ತು ಎತ್ತಿನ ಗಾಡಿ ಓಟದ ಸ್ಪರ್ಧೆಗೆ ಮಹಾರಾಷ್ಟ್ರ ಅವಕಾಶ ಕಲ್ಪಿಸಿರುವುದನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ನೇತೃತ್ವದ ಐವರು ನ್ಯಾಯಮೂರ್ತಿಗಳಿದ್ದ ಸಾಂವಿಧಾನಿಕ ಪೀಠವು ನಡೆಸಿತು.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	18,642
ಇಂದಿನ ಅಂತ್ಯ	18,560
▼	82
ದಿನದ ಕನಿಷ್ಠ	18,528

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1240 (1237)
ಸೂರ್ಯಕಾಂತಿ (ರಿಫೈನ್ಡ್)	₹1400 (1385)
ಪಾಮೋಲಿನ್	₹940 (945)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹140.50
ಆರ್ಎಸ್ಎಸ್-5	₹132.50
ಗುಡ್ ಲಾಟ್	₹125.50

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1400
ಸಣ್ಣ	₹500-1000

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹13100
ಎಸಿ	₹6720
ಆರ್‌ಪಿ	₹8500
ಆರ್‌ಸಿ	₹4530

ಸೋಮವಾರದಿಂದ ಸುಲಾ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈನ್ ತಯಾರಿಕಾ ಕಂಪನಿ 'ಸುಲಾ ವಿನ್ಯಾರ್ಡ್ಸ್ ಲಿಮಿಟೆಡ್' ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಬಂಡವಾಳ ಸಂಗ್ರಹಿಸಲು ಮುಂದಾಗಿದೆ. ಪ್ರತಿ ಷೇರಿಗೆ ₹ 340–₹ 357 ಬೆಲೆ ನಿಗದಿ ಮಾಡಿದೆ.

ಸೋಮವಾರದಿಂದ ಬುಧವಾರದವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ. ಹೂಡಿಕೆದಾರರು ಕನಿಷ್ಠ 42 ಷೇರುಗಳಿಗೆ ಬಿಡ್ ಸಲ್ಲಿಸಬೇಕು.

ಕಂಪನಿಯು 2011ರಿಂದ 2022ರ ನಡುವೆ ಶೇಕಡ 13.3ರ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವನ್ನು ಕಾಯ್ದುಕೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

'ಡಿಜಿಟಲ್ ಕರೆನ್ಸಿ ವಹಿವಾಟು ಗೋಪ್ಯ'

ಮುಂಬೈ (ರಾಯಿಟರ್ಸ್): ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿ (ಸಿಬಿಡಿಸಿ) ಬಳಸಿ ನಡೆಯುವ ವಹಿವಾಟುಗಳು ನಿರ್ದಿಷ್ಟ ಹಂತದವರೆಗೆ ಗೋಪ್ಯವಾಗಿ ಇರುತ್ತವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಟಿ. ರವಿಶಂಕರ್ ಹೇಳಿದ್ದಾರೆ.

ಸಗಟು ಹಾಗೂ ಚಿಲ್ಲರೆ ವಹಿವಾಟುಗಳಲ್ಲಿ ಡಿಜಿಟಲ್ ಕರೆನ್ಸಿಯ ಪ್ರಾಯೋಗಿಕ ಬಳಕೆಯನ್ನು ಆರ್‌ಬಿಐ ಈಗಾಗಲೇ ಆರಂಭಿಸಿದೆ. 'ಗೋಪ್ಯತೆಯನ್ನು ಖಾತರಿಪಡಿಸಲು ಕಾನೂನಿನ ನೆರವು ಪಡೆಯಲು ಸಾಧ್ಯವಿದೆ' ಎಂದು ಅವರು ಹಣಕಾಸು ನೀತಿ ಸಮಿತಿ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಪ್ರಾಯೋಗಿಕ ಬಳಕೆ ಹಂತದಲ್ಲಿರುವ ಡಿಜಿಟಲ್ ಕರೆನ್ಸಿ
- ಗೋಪ್ಯತೆ ಯಾವ ಹಂತದವರೆಗೆ ಎಂಬ ಬಗ್ಗೆ ಇಲ್ಲ ಸ್ಪಷ್ಟತೆ
- ಯುಪಿಐ, ಡಿಜಿಟಲ್ ಕರೆನ್ಸಿ ಭಿನ್ನ ಎಂದ ಆರ್‌ಬಿಐ

'ಗೋಪ್ಯತೆಯು ನಗದು ವಹಿವಾಟಿನಲ್ಲಿ ಇರುವ ಮೂಲ ಲಕ್ಷಣ. ಇದನ್ನು ನಾವು ಡಿಜಿಟಲ್ ಕರೆನ್ಸಿಯಲ್ಲಿಯೂ ಖಾತರಿಪಡಿಸಬೇಕು' ಎಂದಿದ್ದಾರೆ. ಆದರೆ, ಸಿಬಿಡಿಸಿ ವಹಿವಾಟುಗಳು ಎಷ್ಟರಮಟ್ಟಿಗೆ ಗೋಪ್ಯವಾಗಿ ಇರುತ್ತವೆ



ಎಂಬುದನ್ನು ಆರ್‌ಬಿಐ ಸ್ಪಷ್ಟಪಡಿಸಿಲ್ಲ.

ಆದಾಯ ತೆರಿಗೆ ಇಲಾಖೆಯು ನಿರ್ದಿಷ್ಟ ಮೊತ್ತದವರೆಗಿನ ನಗದು ವಹಿವಾಟುಗಳನ್ನು ಯಾವುದೇ ದಾಖಲೆಪತ್ರ ಸಲ್ಲಿಸದೆಯೂ ನಡೆಸಲು ಅವಕಾಶ ನೀಡಿದೆ. ಈ ನಿಯಮಗಳೇ ಸಿಬಿಡಿಸಿ ವಹಿವಾಟಿಗೂ ಅನ್ವಯವಾಗಬಹುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಹಾಗೂ ಸಿಬಿಡಿಸಿ ಒಂದೇ ರೀತಿ ಕಾಣುತ್ತಿವೆ ಎಂಬ ಅಭಿಪ್ರಾಯವು ಕೆಲವು ಬ್ಯಾಂಕರ್‌ಗಳಿಂದಲೇ ಬಂದಿದೆ. ಆದರೆ, ಇವೆರಡೂ ಭಿನ್ನ ಎಂದು ರವಿಶಂಕರ್ ಪ್ರತಿಪಾದಿಸಿದ್ದಾರೆ.


'ಡಿಜಿಟಲ್ ಕರೆನ್ಸಿ ವಹಿವಾಟನ್ನು ನಗದು ಪಾವತಿಗೆ ಹೋಲಿಸಬಹುದು. ಎರಡು ಖಾಸಗಿ ಸಂಸ್ಥೆಗಳು ವಾಲೆಟ್ ಸೌಲಭ್ಯ ನೀಡಿ, ಡಿಜಿಟಲ್ ಕರೆನ್ಸಿಯ ವಹಿವಾಟು ಈ ವಾಲೆಟ್‌ಗಳ ನಡುವೆ ಆಗುವಂತೆ ನೋಡಿಕೊಳ್ಳಬಹುದು. ಆದರೆ ಯುಪಿಐ ವ್ಯವಸ್ಥೆಯಲ್ಲಿ ಇದು ಸಾಧ್ಯವಿಲ್ಲ. ಯುಪಿಐ ಬಳಸಿ ವಹಿವಾಟು ನಡೆಸಲು ಬ್ಯಾಂಕ್ ಖಾತೆ ಬೇಕೇಬೇಕು' ಎಂದು ರವಿಶಂಕರ್ ತಿಳಿಸಿದ್ದಾರೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸ್ಪಷ್ಟನೆ

ಇ–ಕೆವೈಸಿ: ಶಾಖೆಯಲ್ಲಿ ದೃಢೀಕರಣ ಅಗತ್ಯ ಇಲ್ಲ

ಮುಂಬೈ (ಪಿಟಿಐ): ಬ್ಯಾಂಕ್ ಗ್ರಾಹಕರು ಇ-ಕೆವೈಸಿ ಅಥವಾ ಸೆಂಟ್ರಲ್-ಕೆವೈಸಿ ಮಾಡಿದ್ದರೆ ಅಂಥವರಿಗೆ ಶಾಖೆಗೆ ಖುದ್ದು ಹಾಜರಾಗಿ ದೃಢೀಕರಿಸುವಂತೆ ಹೇಳಬಾರದು ಎಂದು ಎಲ್ಲ ಬ್ಯಾಂಕ್‌ಗಳಿಗೆ ಆರ್‌ಬಿಐ ಸೂಚನೆ ನೀಡಿದೆ.

ಆನ್‌ಲೈನ್ ಮೂಲಕ ಕೆವೈಸಿ (ನಿಮ್ಮ ಗ್ರಾಹಕರನ್ನು ಅರಿಯಿರಿ) ಮಾಹಿತಿಗಳನ್ನು ದೃಢೀಕರಿಸಿರುವ ಗ್ರಾಹಕರು ತಮ್ಮ ವೈಯಕ್ತಿಕ ಮಾಹಿತಿಯಲ್ಲಿ ಯಾವುದೇ ಬದಲಾವಣೆ ಅಥವಾ ಅಪ್‌ಡೇಟ್ ಮಾಡಬೇಕಿದ್ದರೆ ಅದನ್ನು ಆನ್‌ಲೈನ್‌ನಲ್ಲಿಯೇ ಮಾಡಬಹುದು. ಈ ಕುರಿತಾಗಿ ಬ್ಯಾಂಕ್ ಶಾಖೆಗೆ ಖುದ್ದು ಹಾಜರಾಗಿ ದೃಢೀಕರಿಸುವಂತೆ ಅಥವಾ ಅಪ್‌ಡೇಟ್ ಮಾಡುವಂತೆ ಗ್ರಾಹಕರನ್ನು ಒತ್ತಾಯಿ-



ಸುವಂತಿಲ್ಲ. ಈ ರೀತಿಯ ಯಾವುದೇ ನಿಯಮವನ್ನು ಆರ್‌ಬಿಐ ರೂಪಿಸಿಲ್ಲ ಎಂದು ಗವರ್ನರ್ ಶಕ್ತಿಕಾಂತ ದಾಸ್ ಸ್ಪಷ್ಟಪಡಿಸಿದ್ದಾರೆ.

ಸಿ-ಕೆವೈಸಿ ಮಾಡಿರುವ ಗ್ರಾಹಕರು ತಮ್ಮ ಅಪ್‌ಡೇಟ್ ಆಗಿರುವ ಮಾಹಿತಿಯನ್ನು ಸಿ-ಕೆವೈಸಿ ಜಾಲತಾಣದಲ್ಲಿ ಪಡೆದುಕೊಳ್ಳುವಂತೆ ಸಂಬಂಧಪಟ್ಟ ಬ್ಯಾಂಕ್ ಶಾಖೆಗೆ ನೋಂದಾಯಿತ ಇ-ಮೇಲ್ ವಿಳಾಸ ಅಥವಾ ಮೊಬೈಲ್ ಮೂಲಕ ಮೇಲ್ ಅಥವಾ ಮೆಸೇಜ್ ಮಾಡಿದರೆ ಸಾಕು ಎಂದು ದಾಸ್ ತಿಳಿಸಿದ್ದಾರೆ.

ಬ್ಯಾಂಕ್‌ಗಳಲ್ಲಿ ತಿಳಿವಳಿಕೆಯ ಕೊರತೆ ಇದೆ ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ರವಿಶಂಕರ್ ಹೇಳಿದ್ದಾರೆ. ಕೆವೈಸಿಗೆ ಸಂಬಂಧಿಸಿದಂತೆ ಗ್ರಾಹಕರಿಗೆ ತೊಂದರೆ ಕೊಡಬೇಡಿ ಎಂದು ಆರ್‌ಬಿಐ ನಿರಂತರವಾಗಿ ಬ್ಯಾಂಕ್‌ಗಳಿಗೆ ಸೂಚನೆ ನೀಡುತ್ತಲೇ ಇರುತ್ತದೆ ಎಂದು ಅವರು ತಿಳಿಸಿದ್ದಾರೆ.

ಕೆವೈಸಿ ಸಂಬಂಧ ಬ್ಯಾಂಕ್‌ಗಳಿಂದ ತೊಂದರೆಗೆ ಒಳಗಾಗಿದ್ದರೆ ಬ್ಯಾಂಕಿಂಗ್ ಒಂಬುಡ್ಸ್‌ಮನ್‌ಗೆ ಪತ್ರ ಬರೆಯುವಂತೆ ಅವರು ಸಲಹೆ ನೀಡಿದ್ದಾರೆ.

ಕೇಂದ್ರೋದ್ಯಮಗಳಿಂದ ಖಾಸಗಿ ಎಂಎಫ್‌ನಲ್ಲಿ ಹೂಡಿಕೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಕೇಂದ್ರೋದ್ಯಮಗಳು (ಸಿಪಿಎಸ್ಇ) ತಮ್ಮಲ್ಲಿ ಇರುವ ಹೆಚ್ಚುವರಿ ನಿಧಿಗಳನ್ನು ಇನ್ನುಮುಂದೆ ಖಾಸಗಿ ವಲಯದ ಮ್ಯೂಚುವಲ್ ಫಂಡ್‌ಗಳ ಡೆಟ್ ಯೋಜನೆಗಳಲ್ಲಿ ಹೂಡಿಕೆ ಮಾಡಬಹುದಾಗಿದೆ.



ಕೇಂದ್ರ ಹಣಕಾಸು ಸಚಿವಾಲಯವು ಈ ಸಂಬಂಧ ಬುಧವಾರ ಒಪ್ಪಿಗೆ ಸೂಚಿಸಿದೆ. ಇದರಿಂದಾಗಿ ಕೇಂದ್ರೋದ್ಯಮಗಳು ತಮ್ಮ ಬಂಡವಾಳವನ್ನು ವಿವಿಧ ಕಡೆಗಳಲ್ಲಿ ಹೂಡಿಕೆ ಮಾಡಲು ನೆರವಾಗಲಿದೆ.

ಈವರೆಗೆ ಕೇಂದ್ರೋದ್ಯಮಗಳು ತಮ್ಮ ಹೆಚ್ಚುವರಿ ನಿಧಿಗಳನ್ನು ಸರ್ಕಾರಿ ವಲಯದ ಮ್ಯೂಚುವಲ್ ಫಂಡ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಲು ಅವಕಾಶ ಇತ್ತು.

ಖಾಸಗಿ ವಲಯದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಕುರಿತು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಪರಿಷ್ಕೃತ ಮಾರ್ಗಸೂಚಿಗಳನ್ನು ನೀಡಿದೆ. ಸಿಪಿಎಸ್ಇಗಳು, ಮ್ಯೂಚುವಲ್ ಫಂಡ್‌ಗಳು ಹಾಗೂ ಖಾಸಗಿ ವಲಯದ ಬ್ಯಾಂಕ್‌ಗಳ ಮನವಿ ಮೇರೆಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗಿದೆ ಎಂದು ಹೇಳಿದೆ.

ಕಾರ್ಯಾಚರಣೆಗೆ ಸಂಬಂಧಿಸಿದ ವೆಚ್ಚಗಳು, ತೆರಿಗೆ ಪಾವತಿ, ದುಡಿಯುವ ಬಂಡವಾಳ, ಸಾಲ ಪಾವತಿ ಮತ್ತು ಬಂಡವಾಳ ವೆಚ್ಚದಂತಹ ಅಗತ್ಯಗಳನ್ನು ಈಡೇರಿಸಿದ ಬಳಿಕ ಉಳಿಯುವ ಮೊತ್ತವೇ ಹೆಚ್ಚುವರಿ ನಿಧಿಯಾಗಿದೆ.

ಮ್ಯೂಚುವಲ್ ಫಂಡ್‌ಗಳಲ್ಲಿ ಅಲ್ಲದೆ, ಟ್ರೆಷರಿ ಬಿಲ್‌ಗಳು ಮತ್ತು ಸರ್ಕಾರಿ ಸಾಲಪತ್ರಗಳು, ವಾಣಿಜ್ಯ ಬ್ಯಾಂಕ್‌ಗಳ ಅವಧಿ ಠೇವಣಿಗಳು, ಬ್ಯಾಂಕ್‌ಗಳು ನೀಡುವ ಠೇವಣಿ ಪತ್ರಗಳು ಅಥವಾ ವಾಣಿಜ್ಯ ಪತ್ರಗಳಲ್ಲಿಯೂ ಹೂಡಿಕೆ ಮಾಡಬಹುದಾಗಿದೆ.

ರೆಪೊ ಏರಿಕೆ ವೇಗ ತಗ್ಗಿಸಿದ ಆರ್‌ಬಿಐ

ಒಂದನೇ ಪುಟದಿಂದ...

ಈ ಹೆಚ್ಚಳದ ಪರಿಣಾಮವಾಗಿ ಗೃಹ, ವಾಹನ ಹಾಗೂ ಇತರ ಸಾಲಗಳ ಮೇಲಿನ ಬಡ್ಡಿ ಮತ್ತೆ ಹೆಚ್ಚಳವಾಗುವ ಸಾಧ್ಯತೆ ಇದೆ. ಹಿಂದಿನ ಮೂರು ಸುತ್ತುಗಳಲ್ಲಿ ಆರ್‌ಬಿಐ ರೆಪೊ ದರವನ್ನು ತಲಾ ಶೇ 0.50ರಷ್ಟು ಹೆಚ್ಚಿಸಿತ್ತು. ಆ ಪ್ರಮಾಣಕ್ಕೆ ಹೋಲಿಸಿದರೆ ಈ ಬಾರಿಯ ಹೆಚ್ಚಳದ ಪ್ರಮಾಣ ಕಡಿಮೆ ಇದೆ. ಈಗಿನ ಏರಿಕೆಯ ನಂತರ ರೆಪೊ ದರವು ಶೇ 6.25ಕ್ಕೆ ತಲುಪಿದೆ. ಇದು ಮೇ ಆರಂಭದಲ್ಲಿ ಶೇ 4ರಷ್ಟು ಇತ್ತು.

'ಹಣದುಬ್ಬರ ಪ್ರಮಾಣವು ಕಡಿಮೆಯಾಗುವ ನಿರೀಕ್ಷೆ ಇದೆ. ಆದರೆ, ಹಣದುಬ್ಬರದ ಮೇಲಿನ ಸಮರ ಕೊನೆ ಗೊಂಡಿಲ್ಲ' ಎಂದು ದಾಸ್ ಹೇಳಿದ್ದಾರೆ.

ಮಾರ್ಚ್‌ಗೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಸರಾಸರಿ ಶೇ 6.7ರಷ್ಟು ಇರಲಿದೆ ಎಂಬ ಅಂದಾಜನ್ನು ಆರ್‌ಬಿಐ ಪುನರುಚ್ಚರಿಸಿದೆ. ಆದರೆ, ಆರ್ಥಿಕ ಬೆಳವಣಿಗೆ ದರವು ಶೇ 7ರಿಂದ ಶೇ 6.8ಕ್ಕೆ ಇಳಿಕೆಯಾಗಲಿದೆ ಎಂದು ಅಂದಾಜಿಸಿದೆ.

ಫೆಬ್ರುವರಿಯಲ್ಲಿ ರೆಪೊ ದರವನ್ನು ಮತ್ತೆ ತುಸು ಜಾಸ್ತಿ ಮಾಡುವ ಸಾಧ್ಯತೆ ಇದೆ. ಮುಂದಿನ ಹಣಕಾಸು ವರ್ಷದ ಆರಂಭದ ಹೊತ್ತಿಗೆ ರೆಪೊ ದರವುಶೇ 6.5ಕ್ಕೆ ತಲುಪುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಚಳಿಗಾಲದಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣವು ಕಡಿಮೆ ಆಗಬಹುದು ಎಂದು ದಾಸ್ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ದರವನ್ನು ಶೇ 6ಕ್ಕಿಂತ ಕಡಿಮೆ ಮಟ್ಟದಲ್ಲಿ ಇರಿಸುವ ಹೊಣೆ ಆರ್‌ಬಿಐ ಮೇಲಿದೆ. ಆದರೆ, ಜನವರಿಯ ನಂತರ ಚಿಲ್ಲರೆ ಹಣದುಬ್ಬರ ದರವು ನಿಯಂತ್ರಣಕ್ಕೆ ಬಂದಿಲ್ಲ.

ಇಎಂಐ ಎಷ್ಟು ಹೆಚ್ಚಾಗಬಹುದು?



ರೆಪೊ ದರ ಶೇ 0.35ರಷ್ಟು ಹೆಚ್ಚಾಗಿರುವುದರಿಂದ ಹಾಲಿ ಮತ್ತು ಹೊಸ ಗೃಹ ಸಾಲಗಳ ಬಡ್ಡಿ ಹೆಚ್ಚಲಿದೆ. ನೀವು ₹ 25 ಲಕ್ಷದ ಗೃಹ ಸಾಲ ಪಡೆದಿದ್ದೀರಿ ಎಂದುಕೊಳ್ಳೋಣ. ಬಡ್ಡಿ ದರ ಈಗ ಶೇ 8.5ರಷ್ಟು ಇದೆ ಎಂದಾದರೆ, 20 ವರ್ಷಗಳ ಗೃಹ ಸಾಲಕ್ಕೆ ಸದ್ಯ ₹ 21,696 ಇಎಂಐ ಕಟ್ಟುತ್ತಿದ್ದೀರಿ. ರೆಪೊ ದರ ಏರಿಕೆಯಿಂದಾಗಿ, ಸಾಲದ ಮೇಲಿನ ಬಡ್ಡಿಯೂ ಶೇ 0.35ರಷ್ಟು ಹೆಚ್ಚಾದರೆ ಇಎಂಐ ಮೊತ್ತ ₹ 22,253ಕ್ಕೆ ಏರಲಿದೆ. ಅಂದರೆ, ತಿಂಗಳಿಗೆ ₹ 557 ಹೆಚ್ಚುವರಿಯಾಗಿ ಪಾವತಿಸಬೇಕಾಗುತ್ತದೆ.

– **ಪ್ರಮೋದ ಶ್ರೀಕಾಂತ ದೈತೋಟ,** ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

'ಅಚ್ಚರಿ ಮೂಡಿಸಿಲ್ಲ'

ರೆಪೊ ಏರಿಕೆ ಅಚ್ಚರಿ ಮೂಡಿಸಿಲ್ಲ. ರೆಪೊ ದರ ಶೇ 6.25ಕ್ಕೆ ತಲುಪಿರುವುದರಿಂದ ಮನೆ ಖರೀದಿ ಮೇಲೆ ಸ್ವಲ್ಪ ಪರಿಣಾಮ ಆಗಬಹುದು. ಹೀಗಿದ್ದರೂ ಗೃಹ ಸಾಲದ ಬಡ್ಡಿದರವು ಒಂದಂಕಿ ಮಟ್ಟದಲ್ಲಿ (ಶೇ 9.5) ಇರುವವರೆಗೆ ಹೆಚ್ಚು ಸಮಸ್ಯೆ ಆಗುವುದಿಲ್ಲ. ಗೃಹ ಸಾಲದ ಬಡ್ಡಿದರವು ಈ ಮಿತಿಯನ್ನು ದಾಟಿದರೆ ಮುಂದಿನ ದಿನಗಳಲ್ಲಿ ಕಡಿಮೆ ಬೆಲೆಯ ಮನೆಗಳ ಮಾರಾಟದ ಮೇಲೆ ಹೆಚ್ಚು ಪರಿಣಾಮ ಉಂಟಾಗಲಿದೆ.

– **ಅನುಜ್ ಪುರಿ,** ಅನರಾಕ್ ಸಮೂಹದ ಅಧ್ಯಕ್ಷ

ಆನ್‌ಲೈನ್ ಪಾವತಿ: ಯುಪಿಐನಲ್ಲಿ ಶೀಘ್ರ ಹೊಸ ವೈಶಿಷ್ಟ್ಯ

ಒಂದನೇ ಪುಟದಿಂದ...

ಈ ರೀತಿ ಮಾಡುವುದರಿಂದ ವಹಿವಾಟಿನಲ್ಲಿ ವಿಶ್ವಾಸ ಹೆಚ್ಚಾಗಲಿದ್ದು, ವ್ಯಾಪಾರಿಗಳಿಗೆ ಸಕಾಲಕ್ಕೆ ಹಣ ಪಾವತಿ ಆಗುತ್ತದೆ. ಆರ್‌ಬಿಐನ ರಿಟೇಲ್ ಡೈರೆಕ್ಟ್ ಯೋಜನೆ ಬಳಸಿಕೊಂಡು ಸರ್ಕಾರಿ ಸಾಲಪತ್ರಗಳನ್ನು ಖರೀದಿ ಮಾಡಲು ಸಹ ಈ ವ್ಯವಸ್ಥೆ ನೆರವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಈ ವೈಶಿಷ್ಟ್ಯವನ್ನು ಜಾರಿಗೊಳಿಸುವ ಕುರಿತು ರಾಷ್ಟ್ರೀಯ ಪಾವತಿ ನಿಗಮಕ್ಕೆ (ಎನ್‌ಪಿಸಿಐ) ಪ್ರತ್ಯೇಕವಾದ ಸೂಚನೆಗಳನ್ನು ನೀಡಲಾಗುವುದು ಎಂದು ದಾಸ್ ತಿಳಿಸಿದ್ದಾರೆ.

ಭಾರತ್ ಬಿಲ್ ಪೇಮೆಂಟ್ಸ್ ಸಿಸ್ಟಮ್‌ನ (ಬಿಬಿಪಿಎಸ್) ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಣೆ ಮಾಡುವುದಾಗಿ ದಾಸ್



ಘೋಷಿಸಿದ್ದಾರೆ. ವೃತ್ತಿಪರ ಸೇವೆಯ ಶುಲ್ಕ ಪಾವತಿ, ಶಿಕ್ಷಣ ಶುಲ್ಕ, ತೆರಿಗೆ ಪಾವತಿ, ಬಾಡಿಗೆ ಸಂಗ್ರಹ ಮಾಡುವುದನ್ನೂ ಇದರ ವ್ಯಾಪ್ತಿಗೆ ತರಲಾಗುವುದು. ಇದರಿಂದಾಗಿ ಪಾರದರ್ಶಕ ಮತ್ತು ಏಕರೂಪದ ವ್ಯವಸ್ಥೆಯು ಲಭ್ಯವಾಗಲಿದೆ ಎಂದು ಅವರು ಹೇಳಿದ್ದಾರೆ.

ಈ ಕುರಿತಾಗಿಯೂ ಎನ್‌ಪಿಸಿಐ, ಭಾರತ್ ಬಿಲ್‌ಪೇ ಲಿಮಿಟೆಡ್‌ಗೆ ಪ್ರತ್ಯೇಕ ಮಾರ್ಗಸೂಚಿ ನೀಡಲಾಗುವುದು ಎಂದಿದ್ದಾರೆ.

ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಸತತ ನಾಲ್ಕನೆಯ ದಿನವೂ ಇಳಿಕೆ ಕಂಡಿದೆ. ಸೆನ್ಸೆಕ್ಸ್ 215 ಅಂಶ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 82 ಅಂಶ ಕುಸಿದಿವೆ.

ರೆಪೊ ದರದಲ್ಲಿನ ಬದಲಾವಣೆಗಳಿಗೆ ತೀವ್ರವಾಗಿ ಸ್ಪಂದಿಸುವ ರಿಯಾಲ್ಟಿ, ಆಟೊಮೊಬೈಲ್ ಮತ್ತು ಬ್ಯಾಂಕಿಂಗ್ ವಲಯಗಳ ಷೇರು ಮೌಲ್ಯವು ಕುಸಿದಿದೆ.

'ಆರ್‌ಬಿಐ ಹೆಚ್ಚೆಚ್ಚು ವಾಸ್ತವವಾದಿ ಆಗುತ್ತಿದೆ. ಅದರ ಗಮನವು ಹಣದುಬ್ಬರ ನಿಯಂತ್ರಿಸುವತ್ತ ಇದೆ. ಮುಂದಿನ ದಿನಗಳಲ್ಲಿ ರೆಪೊ ದರ ಇನ್ನಷ್ಟು ಹೆಚ್ಚಬಹುದು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜರ್ಮನಿ: ಶಸ್ತ್ರಾಸ್ತ್ರ ದಂಗೆ ಸಂಚು, 25 ಜನರ ಬಂಧನ

ಬರ್ಲಿನ್ (ಎಪಿ): ಸಶಸ್ತ್ರ ದಂಗೆಯಲ್ಲಿ ಸರ್ಕಾರವನ್ನು ಉರುಳಿಸಲು ಬಲಪಂಥೀಯ ತೀವ್ರಗಾಮಿಗಳು ಸಂಚು ರೂಪಿಸಿದ ಶಂಕೆ ಮೇಲೆ, ಸಾವಿರಾರು ಪೊಲೀಸರು ಜರ್ಮನಿಯ ಹಲವು ರಾಜ್ಯಗಳಲ್ಲಿ ಬುಧವಾರ ದಾಳಿಗಳನ್ನು ನಡೆಸಿ, 25 ಜನರನ್ನು ಬಂಧಿಸಿದರು.

'ರೀಚ್ ಸಿಟಿಜನ್ಸ್ ಮೂವ್‌ಮೆಂಟ್' ಎಂಬ ಸಂಘಟನೆಗೆ ಸೇರಿದ ಸ್ಥಳಗಳಲ್ಲಿ ದಾಳಿ ನಡೆಯಿತು. ಸುಮಾರು 3,000 ಅಧಿಕಾರಿಗಳು ಜರ್ಮನಿಯ 11 ರಾಜ್ಯಗಳ 130 ಸ್ಥಳಗಳಲ್ಲಿ ಶೋಧ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರ ಪೈಕಿ, 22 ಜನರು ಸಂಘಟನೆಯ ಸದಸ್ಯರು ಎನ್ನಲಾಗಿದೆ. ರಷ್ಯಾದ ಪ್ರಜೆ ಸೇರಿದಂತೆ ಇತರ ಮೂವರು ಈ ಸಂಘಟನೆಯನ್ನು ಬೆಂಬಲಿಸುತ್ತಿದ್ದಾರೆ ಎಂದು ಶಂಕಿಸಲಾಗಿದೆ ಎಂದು ಹೇಳಿದ್ದಾರೆ.

ಖಾಲಿದ್ ಮಧ್ಯಂತರ ಜಾಮೀನು ಅರ್ಜಿ: 12ರಂದು ತೀರ್ಪು

ನವದೆಹಲಿ (ಪಿಟಿಐ): 2020ರಲ್ಲಿ ದೆಹಲಿಯಲ್ಲಿ ನಡೆದಿದ್ದ ಹಿಂಸಾಚಾರ ಪ್ರಕರಣದ ಆರೋಪಿ, ಜೆಎನ್‌ಯುನ ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಮಧ್ಯಂತರ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯ ತೀರ್ಪನ್ನು ದೆಹಲಿ ನ್ಯಾಯಾಲಯ ಇದೇ 12ರಂದು ಪ್ರಕಟಿಸಲಿದೆ. ಸಹೋದರಿಯ ಮದುವೆಗಾಗಿ 2 ವಾರಗಳ ಮಧ್ಯಂತರ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ.

ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿಗೆ 'ಟೈಮ್' ವರ್ಷದ ವ್ಯಕ್ತಿ ಗೌರವ

ನ್ಯೂಯಾರ್ಕ್ (ಪಿಟಿಐ): ಯುದ್ಧ ಪೀಡಿತ ಉಕ್ರೇನ್‌ನ ಸ್ಫೂರ್ತಿ ಎಂದೇ ಪರಿಗಣಿಸಲ್ಪಟ್ಟಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಟೈಮ್ 2022ರ ಸಾಲಿನ 'ವರ್ಷದ ವ್ಯಕ್ತಿ' ಎಂದು ಬುಧವಾರ ಘೋಷಿಸಲಾಗಿದೆ.

'44 ವರ್ಷದ ಝೆಲೆನ್‌ಸ್ಕಿ ಅವರನ್ನು ಉಕ್ರೇನ್ ಮತ್ತು ವಿದೇಶಗಳಲ್ಲಿ ಅನೇಕರು 'ಹೀರೊ' ಆಗಿ ಗುರುತಿಸಿದ್ದಾರೆ. ಪ್ರಜಾಪ್ರಭುತ್ವ ಮತ್ತು ದೇಶ ರಕ್ಷಣೆಯ ಪ್ರತೀಕವಾಗಿ ಅವರು ನಿಂತಿದ್ದಾರೆ. ರಷ್ಯಾದ ಅಪ್ರಚೋದಿತ



ವೊಲೊಡಿಮಿರ್ ಝೆಲೆನ್‌ಸ್ಕಿ

ದಾಳಿಯ ವಿರುದ್ಧ ದೇಶದ ಹೋರಾಟವನ್ನು ಅವರು ಮುನ್ನಡೆಸುತ್ತಿದ್ದಾರೆ. ಅವರು ವರ್ಷದ ವ್ಯಕ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ' ಎಂದು ಟೈಮ್ ವಾಹಿನಿ ಟ್ವೀಟ್ ಮಾಡಿದೆ.

ಕಳೆದ ವರ್ಷ ಈ ಗೌರವ ಜಗತ್ತಿನ ಆಗರ್ಭ ಸಿರಿವಂತ, ಅಮೆರಿಕದ ಸ್ಪೇಸ್ ಎಕ್ಸ್ ಮತ್ತು ಟೆಸ್ಲಾ ಸಿಇಒ ಇಲಾನ್ ಮಸ್ಕ್ ಅವರಿಗೆ ಸಂದಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಹಳೆಚಾಲಿ	36509-40211	ಬಿಳಿಗೋಟು	27319-33889
ಬಂಟ್ವಾಳ		ಹೊಸಚಾಲಿ	30099-33127	ಚಾಲಿ	36009-39499
ಕೋಕ	12500-25000	**ಕುಂದಾಪುರ**		ಕೋಕ	26099-28319
ಹೊಸತು	27500-38000	ಹಳೆಚಾಲಿ	53000-56000	ಕೆಂಪುಗೋಟು	18619-18619
ಹಳತು	48000-54500	ಹೊಸಚಾಲಿ	40000-47500	ರಾಶಿ	41509-43609
ಕಾರ್ಕಳ		**ಶಿವಮೊಗ್ಗ**		ತಟ್ಟಬೆಟ್ಟೆ	31889-34469
ಹೊಸತು	25000-37500	ಬೆಟ್ಟೆ	46419-46419	**ಶಿರಸಿ**	
ಹಳತು	40000-54500	ಗೊರಬಲು	17000-30658	ಬೆಟ್ಟೆ	36699-43018
ಕುಮಟ		ಹೊಸತು	39099-43009	ಬಿಳಿಗೋಟು	18389-35299
ಚಿಪ್ಪು	24869-32089	ರಾಶಿ	40009-44000	ಚಾಲಿ	34069-41322
ಕೋಕ	15019-28019	ಸರಕು	57569-62069	ಕೆಂಪುಗೋಟು	26799-26799
ಫ್ಯಾಕ್ಟರಿ	11019-19200	**ಸಿದ್ದಾಪುರ**		ರಾಶಿ	40369-43700

ಮುಂಬೈ ಧಾರಣೆ

ಶೇಂಗಾ

7–12-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಸೋಯಾ ಕಚ್ಚಾ	1160 (1180)
ಪಾಮ್ ವಾರದ ಡೆಲಿವರಿ	938 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,450 (53,400)
ಬೆಳ್ಳಿ ಕೆ.ಜಿ 64,750 (64,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮನೋಜ್ ನಾಯಕ್, ನೈಶಾ ಪ್ರಶಸ್ತಿ ಡಬಲ್

ಮಂಡ್ಯದಲ್ಲಿ ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಷಿಪ್: ಎನ್‌ಎಸಿಯ ರಾಘವ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಮಂಡ್ಯ: ಬಸವನಗುಡಿ ಈಜುಕೇಂದ್ರದ ಬಿ. ಮನೋಜ್ ನಾಯಕ ಮತ್ತು ಡಾಲ್ಫಿನ್ ಅಕ್ವೆಟಿಕ್ಸ್‌ನ ನೈಶಾ ಶೆಟ್ಟಿ ಇಲ್ಲಿ ನಡೆಯುತ್ತಿರುವ ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಡಬಲ್ ಸಾಧನೆ ಮಾಡಿದರು.

ಬುಧವಾರ ನಡೆದ ಮಹಿಳೆಯರ ಮೊದಲ ಗುಂಪಿನ 200 ಮೀಟರ್ಸ್ ಮೆಡ್ಲೆ ಹಾಗೂ 100 ಮೀಟರ್ಸ್ ಬಟರ್‌ಫ್ಲೈ ವಿಭಾಗಗಳಲ್ಲಿ ನೈಶಾ ಚಿನ್ನದ ಪದಕ ಗೆದ್ದರು. ಅಲ್ಲದೇ ನೂತನ ದಾಖಲೆಯನ್ನೂ ನಿರ್ಮಿಸಿದರು.

ಪುರುಷರ ವಿಭಾಗದ 200 ಮೀ ಮೆಡ್ಲೆ ಹಾಗೂ 50 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದರು. ಬಾಲಕರ ಎರಡನೇ ಗುಂಪಿನಲ್ಲಿ 200 ಮೀಟರ್ಸ್ ಮೆಡ್ಲೆಯಲ್ಲಿ ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್‌ನ ರಾಘವ್ ಸ್ವಚ್ಛಂದಮ್ ಪ್ರಥಮ ಸ್ಥಾನ ಗಳಿಸಿದರು.

ಫಲಿತಾಂಶಗಳು:ಬಾಲಕರು: ಮೂರನೇ ಗುಂಪು: 200 ಮೀ ಮೆಡ್ಲೆ: ಜೆ. ಅರವ್ (ಬಸವನಗುಡಿ ಈಜುಕೇಂದ್ರ; 2ನಿ,38.89ಸೆ)–1, ಅಥರ್ವ ಪಾಲ್ ಸಿಂಗ್ (ಡಾಲ್ಫಿನ್) –2, ಸುಬ್ರಹ್ಮಣ್ಯ ಜೀವಾಂಶ ಮಂಜುನಾಥ್ (ಡಾಲ್ಫಿನ್)–3. 50 ಮೀ ಬ್ಯಾಕ್‌ಸ್ಟ್ರೋಕ್: ವಿ.ಎಂ. ಅದ್ವೈತ (ಬಸವನಗುಡಿ; 34.02ಸೆ)–1, ಗಣಪತಿ ಭಾರದ್ವಾಜ್ (ಗೋಲ್ಡನ್ ಫಿನ್ಸ್)–2, ಎಸ್. ಕ್ರಿಷ್ (ಬಸವನಗುಡಿ)–3

ಎರಡನೇ ಗುಂಪು: 200 ಮೀ ಮೆಡ್ಲೆ: ರಾಘವ್ ಸ್ವಚ್ಛಂದಮ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್ ; 2ನಿ,17.21ಸೆ)–1, ಜೆ.ಟಿ. ಸೂರ್ಯ (ಬಸವನಗುಡಿ)–2, ಅಮನ್ ಸುಣಗಾರ (ಸ್ವಿಮ್ಮರ್ಸ್ ಕ್ಲಬ್, ಬೆಳಗಾವಿ)–3



ರಾಘವ್ ಸ್ವಚ್ಛಂದಮ್

100ಮೀ ಬಟರ್‌ಫ್ಲೈ: ಅಕ್ಷತ್ ಠಾಕೂರಿಯಾ (ಡಾಲ್ಫಿನ್; 1ನಿ,1.64ಸೆ)–1, ಹರಿಕಾರ್ತಿಕ್ ವೇಲು (ಗೋಲ್ಡನ್ ಫಿನ್ಸ್ ಎಸ್‌ಸಿ)–2, ತನವ್ ಕೆ ಭಾರದ್ವಾಜ್ (ಬಸವನಗುಡಿ)–3 50 ಮೀ ಬ್ಯಾಕ್‌ಸ್ಟ್ರೋಕ್: ಅಮನ್ ಸುಣಗಾರ (ಸ್ವಿಮ್ಮರ್ಸ್ ಕ್ಲಬ್, ಬೆಳಗಾವಿ; 28.98ಸೆ)–1, ಜೆ.ಟಿ. ಸೂರ್ಯ (ಬಸವನಗುಡಿ)–2, ಸಾತ್ವಿಕ್ ಪ್ರಸನ್ನ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–3. 200 ಮೀ ಫ್ರೀಸ್ಟೈಲ್: ಕೃಷ್ಣ ನಂದಕುಮಾರ್ (ಪಿಎಂ. ಸ್ವಿಮ್ಮಿಂಗ್ ಸೆಂಟರ್; 2ನಿ, 21.13ಸೆ)–1, ಜೆ. ಅರವ್ (ಬಸವನಗುಡಿ)–2, ಸುಬ್ರಮಣ್ಯ ಜೀವಾಂಶ್ ಮಂಜುನಾಥ (ಡಾಲ್ಫಿನ್)–3.

ಮೊದಲ ಗುಂಪು: 200 ಮೀ ಮೆಡ್ಲೆ: ಒ.ಆರ್. ಸೂರ್ಯ ಜೋಯಪ್ಪ (ಬಸವನಗುಡಿ; 2ನಿ,13.77ಸೆ)–1,ಪವನ್ ಧನಂಜಯ (ಬಸವನಗುಡಿ)–2, ತರುಣ್ ಅರುಣ್ ಗೌಡ (ಬಸವನಗುಡಿ)–3.

100 ಮೀ ಬಟರ್‌ಫ್ಲೈ: ರಿಷಭ್ ಸಿಂಗ್ ಧಡ್ವಾಲ್ (ಡಾಲ್ಫಿನ್; 58.08ಸೆ)–1, ಶ್ರೇಯಸ್ ವೆಂಕಟೇಶ್ (ಬಸವನಗುಡಿ)–2, ಎ.ಸ್ವಯಂ (ಬಸವನಗುಡಿ)–3.

50 ಮೀ ಬ್ಯಾಕ್‌ಸ್ಟ್ರೋಕ್: ಎಂ. ಧ್ಯಾನ್ (ಗ್ಲೋಬಲ್ ಸ್ವಿಮ್ ಸೆಂಟರ್; 26.77ಸೆ)–1, ಆಕಾಶಮಣಿ (ಬಸವನಗುಡಿ)–2, ಎ. ಸ್ವಯಂ (ಬಸವನಗುಡಿ)–3. 200 ಮೀ ಫ್ರೀಸ್ಟೈಲ್: ತರುಣ್ ಅರುಣ್ ಗೌಡ (ಬಸವನಗುಡಿ; 1ನಿ,57.66ಸೆ)–1, ಜೆ. ಸಂಜೀತ್ (ಬಸವನಗುಡಿ)–2, ಸುಯೋಗ ಎಲ್ ಗೌಡ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–3

ಪುರುಷರು(18 ವರ್ಷ ಮೇಲಿನವರು); 200 ಮೀ ಮೆಡ್ಲೆ: ಬಿ. ಮನೋಜ್ ನಾಯಕ(ಬಸವನಗುಡಿ; 2ನಿ,19.39ಸೆ) –1, ಎಸ್. ದರ್ಶನ್ (ಬಸವನಗುಡಿ)–2, ಸ್ವರೂಪ್ ಸತೀಶ್ ಧನಂಚೆ (ಬಸವನಗುಡಿ)–3.

100 ಮೀ ಬಟರ್‌ಫ್ಲೈ: ಸ್ವರೂಪ್ ಸತೀಶ್ ಧನುಂಚೆ (ಬಸವನಗುಡಿ; 59.95ಸೆ)–1, ಎಸ್. ದರ್ಶನ್ (ಬಸವನಗುಡಿ)–2, ಎಸ್. ಶಶಿಕರಣ್ (ಸೌಂದರ್ಯಾ ಎಸಿ)–3.50 ಮೀ ಬ್ಯಾಕ್‌ಸ್ಟ್ರೋಕ್: ಬಿ. ಮನೋಜ್ ನಾಯಕ (ಬಸವನಗುಡಿ; 29.12ಸೆ)–1, ಸ್ವರೂಪ್ ಸತೀಶ್ ಧನುಂಚೆ (ಸೌಂದರ್ಯ ಎಸಿ)–3.

ಬಾಲಕಿಯರು:ಮೂರನೇ ಗುಂಪು: 200 ಮೀ ಮೆಡ್ಲೆ: ಧನ್ಯಾ ನಾಯಕ ನಟರಾಜ್ (ಡಿಕೆವಿ; 2ನಿ,50.86ಸೆ)–1, ಜನನಿ ವೆಂಕಟೇಶ್ವರಪೆರುಮಾಳ್(ಡಾಲ್ಫಿನ್)–2, ಧೃತಿ ಕರಿಬಸವೇಶ್ವರ (ಝೀ ಈಜು ಅಕಾಡೆಮಿ)–3, ಶಿವಾನಿ ಶೆಣೈ ಕರ್ಕಿ (ಬಸವನಗುಡಿ)–3. 50 ಮೀ ಬ್ಯಾಕ್‌ಸ್ಟ್ರೋಕ್: ಧನ್ಯಾ ನಾಯಕ್ ನಟರಾಜ್ (ಡಿಕೆವಿ; 35.29ಸೆ)–1, ಲಾಸ್ಯಾ ಕಿಶನ್ (ಪುತ್ತೂರು ಅಕ್ವೆಟಿಕ್ ಕ್ಲಬ್)–2, ಮೀರಾ ನಂಬಿಯಾರ್ (ಡಾಲ್ಫಿನ್)–3.

200 ಮೀ ಫ್ರೈಸ್ಟೈಲ್: ಮೀರಾ ನಂಬಿಯಾರ್ (ಡಾಲ್ಫಿನ್;2ನಿ,29.58ಸೆ)–1, ತನ್ವಿ ಗೌರವ್ (ವಿಜಯನಗರ)–2, ಸ್ಪರ್ಷ್ ಎಸ್ ಹರೀಶ (ಪಿಎಂ ಸ್ವಿಮ್ಮಿಂಗ್)–3.

ಎರಡನೇ ಗುಂಪು: 200 ಮೀ ಮೆಡ್ಲೆ: ನೈಶಾ (ಬಸವನಗುಡಿ; 2ನಿ, 30.41ಸೆ)–1, ತೈಶಾ ಸೋನಾರ್ (ಬಸವನಗುಡಿ)–2, ಎಸ್ ತಾನ್ಯಾ (ಡಾಲ್ಫಿನ್)–3.

100 ಮೀ ಬಟರ್‌ಫ್ಲೈ: ಸುಹಾಸಿನಿ ಘೋಷ್ (ಡಾಲ್ಫಿನ್; 1ನಿ, 05.35ಸೆ)–1, ತನೀಷಾ ವಿನಯ್ (ಬಸವನಗುಡಿ)–2, ಮೊನ್ಯಾ ಕೌಸುಮಿ ಕೆ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–3.

50 ಮೀ ಬ್ಯಾಕ್‌ಸ್ಟ್ರೋಕ್ : ನಕ್ಷತ್ರ ಗೌತಮ್ (ಬಸವನಗುಡಿ; 32.47ಸೆ)–1, ತನ್ಮಯಿ ಧರ್ಮೇಶ (ಡಿಕೆವಿ)–2, ಎಂ.ಎನ್. ತಾನ್ಯಾ (ಬಸವನಗುಡಿ)–3.

ಮಹಿಳೆಯರು: ಮೊದಲ ಗುಂಪು: 200ಮೀ ಮೆಡ್ಲೆ: ನೈಶಾ ಶೆಟ್ಟಿ (ಡಾಲ್ಫಿನ್; ನೂತನ ದಾಖಲೆ 2ನಿ,30.73ಸೆ)–1, ಅನ್ನು ದೇಶಪಾಂಡೆ (ಡಾಲ್ಫಿನ್)–2, ವಿ. ಹಿತೈಷಿ (ವಿಜಯನಗರ ಎಸಿ)–3.

100 ಮೀ ಬಟರ್‌ಫ್ಲೈ: ನೈಶಾ ಶೆಟ್ಟಿ (ಡಾಲ್ಫಿನ್; ನೂತನ ದಾಖಲೆ 1ನಿ,6.77ಸೆ)–1, ಅನ್ನು ದೇಶಪಾಂಡೆ (ಡಾಲ್ಫಿನ್)–2, ಅವನಿ ವಿಶ್ವಾಸ್ (ಬಸವನಗುಡಿ)–3 50 ಮೀ ಬ್ಯಾಕ್‌ಸ್ಟ್ರೋಕ್: ಆರುಷಿ ಅಗರವಾಲ್ (ಡಾಲ್ಫಿನ್; 30.71)–1, ನೈಷಾ ಶೆಟ್ಟಿ (ಡಾಲ್ಫಿನ್)–2, ಅಂಬರ್ ಜೆ ಸಿಂಗ್ (ಡಾಲ್ಫಿನ್)–3.

200ಮೀ ಫ್ರೀಸ್ಟೈಲ್: ಅದಿತಿ ಎನ್ ಮೂಲ್ಯಾ (2ನಿ,13.18ಸೆ)–1, ಲಕ್ಷ್ಮೀ ತ್ರಿವಿಕ್ರಮ ನಿಕ್ಕಂ –2, ಆಶ್ನಾ ಎ ಮಟ್ಟೂರ್ –3 (ಎಲ್ಲರೂ ಬಸವಗುಡಿ ಈಜುಕೇಂದ್ರ)

ಕಬಡ್ಡಿ: ಬುಲ್ಸ್ ಜಯಭೇರಿ

ಹೈದರಾಬಾದ್ (ಪಿಟಿಐ): ಭರತ್ ಗಳಿಸಿದ ಅಮೋಘ 20 ಪಾಯಿಂಟ್ಸ್ ಬಲದಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಇಲ್ಲಿಯ ಗಚಿಬೌಲಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ 57-44ರಿಂದ ಪಟ್ನಾ ಪೈರೇಟ್ಸ್ ವಿರುದ್ಧ ಗೆದ್ದಿತು.

ಬೆಂಗಳೂರು ಪರ ನೀರಜ್ ನರ್ವಾಲ್ (10 ಪಾಯಿಂಟ್ಸ್) ಮತ್ತು ಸಚಿನ್ ನರ್ವಾಲ್ (7) ಕೂಡ ಮಿಂಚಿದರು. ಪಟ್ನಾ ತಂಡಕ್ಕಾಗಿ ರೋಹಿತ್ ಗುಲಿಯಾ (10) ಮತ್ತು ಆನಂದ್ ತೋಮರ್ ಆಟ ವ್ಯರ್ಥವಾಯಿತು.

ಇನ್ನೊಂದು ತಮಿಳ್ ತಲೈವಾಸ್ 43–28ರಿಂದ ಯುಪಿ ಯೋಧಾಸ್ ತಂಡವನ್ನು ಸೋಲಿಸಿತು.

ಇಂದಿನ ಪಂದ್ಯಗಳು:
ಬೆಂಗಾಲ್ ವಾರಿಯರ್ಸ್– ದಬಾಂಗ್ ಡೆಲ್ಲಿ. ಹರಿಯಾಣ ಸ್ಟೀಲರ್ಸ್– ತೆಲುಗು ಟೈಟನ್ಸ್

ಪಾಯಿಂಟ್ಸ್ ಪಟ್ಟಿ

(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	21	15	6	0	79
ಪುಣೇರಿ	21	14	5	2	79
ಬೆಂಗಳೂರು	21	13	7	1	73
ಯುಪಿ	21	11	8	2	66
ತಲೈವಾಸ್	21	10	7	4	66
ಡೆಲ್ಲಿ	21	10	10	1	60

ಬ್ಯಾಡ್ಮಿಂಟನ್: ಪ್ರಣಯ್‌ಗೆ ಸೋಲು

ಬ್ಯಾಂಕಾಕ್ (ಪಿಟಿಐ): ಜಿದ್ದಾಜಿದ್ದಿ ಹೋರಾಟ ನಡೆಸಿದ ಭಾರತದ ಎಚ್.ಎಸ್. ಪ್ರಣಯ್ ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಪಂದ್ಯದಲ್ಲಿ ಸೋಲನುಭವಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ 'ಎ' ಗುಂಪಿನ ಹಣಾಹಣಿಯಲ್ಲಿ ಪ್ರಣಯ್ 11-21, 21-9, 17-21ರಿಂದ ಜಪಾನ್‌ನ ಕೊಡಾಯ್ ನರವೊಕಾ ಎದುರು ಪರಾಭವ ಗೊಂಡರು.

ಮೊದಲ ಗೇಮ್ ಕೈಚೆಲ್ಲಿದ ಬಳಿಕ ಮರುಹೋರಾಟ ನಡೆಸಿದ ಪ್ರಣಯ್ ಎರಡನೇ ಗೇಮ್‌ನಲ್ಲಿ ಪ್ರಾಬಲ್ಯ ಮೆರೆದರು. ಆದರೆ ಮೂರು ಅನಗತ್ಯ ತಪ್ಪುಗಳು ನಿರ್ಣಾಯಕ ಗೇಮ್‌ನಲ್ಲಿ ಅವರ ಸೋಲಿಗೆ ಕಾರಣವಾದವು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 12ನೇ ಸ್ಥಾನದಲ್ಲಿರುವ ಪ್ರಣಯ್ ಮುಂದಿನ ಪಂದ್ಯದಲ್ಲಿ ಚೀನಾದ ಲು ಗುವಾಂಗ್ ಜು ಅವರನ್ನು ಎದುರಿಸುವರು.



ಲಯೊನೆಲ್ ಮೆಸ್ಸಿ (ಅರ್ಜೆಂಟೀನಾ)	
ಗೋಲು	3
ಅಟೆಂಪ್ಟ್	19
ಅಸಿಸ್ಟ್	1



ಕ್ರಿಸ್ಟಿಯಾನೊ ರೊನಾಲ್ಡೊ (ಪೋರ್ಚುಗಲ್)	
ಗೋಲು	1
ಅಟೆಂಪ್ಟ್	9



ಲುಕಾ ಮ್ಯಾಡ್ರಿಚ್ (ಕ್ರೊವೇಷ್ಯಾ)	
ಕ್ರಾಸ್	22
ಅಟೆಂಪ್ಟ್ಸ್	113
ಲೈನ್ ಬ್ರೇಕ್ಸ್	84



ರಿಚಾರ್ಲಿಸನ್ (ಬ್ರೆಜಿಲ್-ಫಾರ್ವರ್ಡ್)	
ಗೋಲು	3
ಡಿಫೆನ್ಸಿವ್ ಪ್ರೆಷರ್	151



ಕೈಲಿಯನ್ ಎಂಬಾಪೆ (ಫ್ರಾನ್ಸ್)	
ಗೋಲು	5
ಅಟೆಂಪ್ಟ್	20
ಅಸಿಸ್ಟ್	2

ಎಂಟರ ಘಟ್ಟ; ತಾರೆಗಳ ತೋಟ

ಕತಾರ್ ದೇಶದ ಆತಿಥ್ಯದಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಟೂರ್ನಿ ಹತ್ತಾರು ರೋಚಕ ಸಂಗತಿಗಳನ್ನು ದಾಖಲಿಸಿದೆ. ನವೆಂಬರ್ 20ರಿಂದ ಇಲ್ಲಿಯವರೆಗೆ ನಡೆದ ಒಟ್ಟು 56 ಪಂದ್ಯಗಳಲ್ಲಿಯೂ ಒಂದಿಲ್ಲೊಂದು ವಿಶೇಷಗಳಿದ್ದವು. ಏಷ್ಯಾ ಖಂಡದ ತಂಡಗಳೂ ಈ ಬಾರಿ ತಮ್ಮ ಶಕ್ತಿ ಮೆರೆದವು. ಅದರಲ್ಲೂ ಜಪಾನ್, ದಕ್ಷಿಣ ಕೋರಿಯಾ ಮತ್ತು ಸೌದಿ ಅರೇಬಿಯಾ ತಂಡಗಳು ವಿಶ್ವದ ಘಟಾನುಘಟಿ ತಂಡಗಳಿಗೇ ಸೋಲಿನ ಕಹಿ ಉಣಿಸಿದ್ದು ವಿಶೇಷ. ಈ ಎಲ್ಲ ಕ್ಲಿಷ್ಟ ಸವಾಲುಗಳನ್ನು ದಾಟಿಯೂ ಫುಟ್‌ಬಾಲ್ ಕ್ಷೇತ್ರದ ಸಮಕಾಲೀನ ದಿಗ್ಗಜ ಆಟಗಾರರು ಇರುವ ಪ್ರಮುಖ ತಂಡಗಳು ಎಂಟರ ಘಟ್ಟಕ್ಕೆ ಬಂದು ನಿಂತಿವೆ. ಹೋದ ಬಾರಿಯ ಚಾಂಪಿಯನ್ ಫ್ರಾನ್ಸ್, ರನ್ನರ್ಸ್ ಅಪ್ ಕ್ರೊವೇಷ್ಯಾ, ಬ್ರೆಜಿಲ್, ಅರ್ಜೆಂಟೀನಾ, ಮೊರಕ್ಕೊ, ಪೋರ್ಚುಗಲ್, ಇಂಗ್ಲೆಂಡ್ ಮತ್ತು ನೆದರ್ಲೆಂಡ್ಸ್ ತಂಡಗಳು ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಲಿವೆ. ಈ ಎಲ್ಲ ತಂಡಗಳ ತಾರಾಮಣಿಗಳು ಇಲ್ಲಿ ಕಂಗೊಳಿಸಲು ಸಿದ್ಧರಾಗಿದ್ದಾರೆ.

ಅದರಲ್ಲೂ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಮತ್ತು ಪೋರ್ಚುಗಲ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ಅವರಿಗೆ ಬಹುತೇಕ ಇದು ಕೊನೆಯ ವಿಶ್ವಕಪ್ ಟೂರ್ನಿಯಾಗಿದೆ. ಒಂದೊಮ್ಮೆ ಈ ಎರಡೂ ತಂಡಗಳೂ ಕ್ವಾರ್ಟರ್‌ಫೈನಲ್ ಮತ್ತು ಸೆಮಿಫೈನಲ್‌ಗಳಲ್ಲಿ ಜಯಿಸಿದರೆ ಫೈನಲ್‌ನಲ್ಲಿ ಮುಖಾಮುಖಿಯಾಗುವ ಸಾಧ್ಯತೆ ಇದೆ. ಸಮಕಾಲೀನ ಫುಟ್‌ಬಾಲ್ ರಂಗದ 'ಸಾರ್ವಕಾಲಿಕ ಶ್ರೇಷ್ಠ' ಆಟಗಾರರಿಬ್ಬರ ಹಣಾಹಣಿ ನಡೆಯಲಿ ಎಂದು ಫುಟ್‌ಬಾಲ್ ಪ್ರೇಮಿಗಳು ಆಶಿಸುತ್ತಿದ್ದಾರೆ. ಈ ಎಂಟು ತಂಡಗಳಲ್ಲಿರುವ ತಾರಾವರ್ಚಸ್ಸಿನ ಆಟಗಾರರು ಈ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಇದುವರೆಗೆ ಮಾಡಿರುವ ಸಾಧನೆ ಇಲ್ಲಿದೆ;

ಹಕೀಂ ಝಿಯೆಚ್ (ಮೊರಕ್ಕೊ)	
ಗೋಲು	1
ಕ್ರಾಸ್	15
ಅಟೆಂಪ್ಟ್	7
ಅಸಿಸ್ಟ್	1





ಕೋಡಿ ಗಾಕ್ಪೊ (ನೆದರ್ಲೆಂಡ್ಸ್-ವಿಂಗರ್)	
ಗೋಲು	3
ಕ್ರಾಸ್	24



ಮಾರ್ಕಸ್ ರ್‍ಯಾಷ್‌ಫೋರ್ಡ್ (ಇಂಗ್ಲೆಂಡ್)	
ಗೋಲು	3
ಅಟೆಂಪ್ಟ್	10

ಏಡನ್ ಹಜಾರ್ಡ್ ವಿದಾಯ



ಬ್ರಸೆಲ್ಸ್ (ಎಪಿ): ಬೆಲ್ಜಿಯಂ ತಂಡದ ಫಾರ್ವರ್ಡ್ ಆಟಗಾರ ಏಡನ್ ಹಜಾರ್ಡ್ ಅವರು ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಬುಧವಾರ ವಿದಾಯ ಘೋಷಿಸಿದ್ದಾರೆ.

ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಬೆಲ್ಜಿಯಂ ತಂಡವು ಗುಂಪುಹಂತದಲ್ಲೇ ನಿರ್ಗಮಿಸಿತ್ತು. ಹಜಾರ್ಡ್ ಅವರಿಗೆ ಗೋಲು ಗಳಿಸಲು ಸಾಧ್ಯವಾಗಿರಲಿಲ್ಲ.

31 ವರ್ಷದ ಹಜಾರ್ಡ್ 2008ರಲ್ಲಿ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 126 ಪಂದ್ಯಗಳಿಂದ 33 ಗೋಲು ಗಳಿಸಿದ್ದರು. ರಿಯಲ್ ಮ್ಯಾಡ್ರಿಡ್ ಕ್ಲಬ್ ತಂಡಕ್ಕೆ ಆಡುವ ಹಜಾರ್ಡ್, ಇನ್‌ಸ್ಟಾಗ್ರಾಂನಲ್ಲಿ ಈ ವಿಷಯ ತಿಳಿಸಿದ್ದಾರೆ.



ಗೋಲು ಗಳಿಸಿದ ಗೊನ್ಸಾಲೊ ರಾಮೋಸ್ ಸಂಭ್ರಮ– ಎಎಫ್‌ಪಿ ಚಿತ್ರ

ಕ್ವಾರ್ಟರ್‌ಫೈನಲ್‌ಗೆ ಪೋರ್ಚುಗಲ್: ಸ್ವಿಟ್ಜರ್ಲೆಂಡ್ ತಂಡದ ಕನಸು ಭಗ್ನ

ರಾಮೋಸ್ ಹ್ಯಾಟ್ರಿಕ್‌ಗೆ ಒಲಿದ ಜಯ

ದೋಹಾ (ಎಎಫ್‌ಪಿ): ತಾರಾ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ಹೊರಗಿಟ್ಟು ಆಡಲಿಳಿದ ಪೋರ್ಚುಗಲ್ ತಂಡದ ನಿರ್ಧಾರವನ್ನು ಯುವ ಆಟಗಾರ ಗೊನ್ಸಾಲೊ ರಾಮೋಸ್ ಸಮರ್ಥಿಸಿಕೊಂಡರು. ಅವರು ಸಾಧಿಸಿದ ಸೊಗಸಾದ ಹ್ಯಾಟ್ರಿಕ್ ಬಲದಿಂದ ತಂಡವು ಸ್ವಿಟ್ಜರ್ಲೆಂಡ್‌ಗೆ ಸೋಲುಣಿಸಿ ವಿಶ್ವಕಪ್ ಟೂರ್ನಿಯ ಎಂಟರಘಟ್ಟ ಪ್ರವೇಶಿಸಿತು.

ಲುಸೈಲ್ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಪೋರ್ಚುಗಲ್ 6–1ರಿಂದ ಸ್ವಿಸ್ ತಂಡದ ವಿರುದ್ಧ ಗೆದ್ದಿತು.

ಈ ವಿಶ್ವಕಪ್‌ನಲ್ಲಿ ಮೊದಲ ಹ್ಯಾಟ್ರಿಕ್ ಇದು.

21 ವರ್ಷದ ರಾಮೋಸ್ ಅವರು ರೊನಾಲ್ಡೊ ಬದಲಿಗೆ ಕಣಕ್ಕಿಳಿದಿದ್ದರು. ದಿಗ್ಗಜ ಪೆಲೆ ಅವರ ಬಳಿಕ ವಿಶ್ವಕಪ್ ಟೂರ್ನಿಯ ನಾಕೌಟ್ ಹಂತದಲ್ಲಿ ಹ್ಯಾಟ್ರಿಕ್ ಸಾಧಿಸಿದ ಅತಿ ಕಿರಿಯ ಆಟಗಾರ ಎಂಬ ಹಿರಿಮೆ ಗಳಿಸಿದರು. 1958ರಲ್ಲಿ ಪೆಲೆ ಫ್ರಾನ್ಸ್ ಎದುರಿನ ಸೆಮಿ ಪಂದ್ಯದಲ್ಲಿ ಬ್ರೆಜಿಲ್ ಪರ ಹ್ಯಾಟ್ರಿಕ್ ಗೋಲು ದಾಖಲಿಸಿದ್ದರು. ಆಗ ಅವರಿಗೆ 17 ವರ್ಷ ವಯಸ್ಸಾಗಿತ್ತು.

ಜೊವಾ ಫೆಲಿಕ್ಸ್ ನೀಡಿದ ಪಾಸ್‌ನಲ್ಲಿ ರಾಮೋಸ್ ಅತ್ಯಂತ ವೇಗವಾಗಿ ಚೆಂಡನ್ನು ಗೋಲುಪೋಸ್ಟ್‌ಗೆ ಸೇರಿಸಿ ತಮ್ಮ ಮೊದಲ ಗೋಲು ದಾಖಲಿಸಿದರು.

ಇದಾದ ಬಳಿಕ 39 ವರ್ಷದ ಪೆಪೆ ಸೊಗಸಾದ ಹೆಡರ್ ಮೂಲಕ ಸ್ವಿಸ್ ಕೋಟೆಯನ್ನು ಭೇದಿಸಿದರು. ಮೊದಲಾರ್ಧ ಕೊನೆಗೊಂಡ ಆರು ನಿಮಿಷಗಳ ಬಳಿಕ ಗೋಲ್‌ಪೋಸ್ಟ್‌ನ ಹತ್ತಿರದಿಂದ ಡಿವೊಗೊ ಡ್ಯಾಲೊಟ್ ಕ್ರಾಸ್ ನೆರವಿನಿಂದ ರಾಮೋಸ್ ತಮ್ಮ ಎರಡನೇ ಗೋಲು ಗಳಿಸಿದರು. ಇದಾದ ನಾಲ್ಕು ನಿಮಿಷಗಳ ಬಳಿಕ ಗೆರೆರೊ ಅವರು ಗೋಲು ಹೊಡೆದರು.

ಈ ಹಂತದಲ್ಲಿ ಸತತ ಪ್ರಯತ್ನ ನಡೆಸಿದ್ದ ಸ್ವಿಸ್ ತಂಡಕ್ಕೆ ಫಲ ಲಭಿಸಿತು. ಕಾರ್ನರ್ ಕಿಕ್‌ನಲ್ಲಿ ಅಕಾಂಜಿ ಚೆಂಡನ್ನು ಸುಲಭವಾಗಿ ಗೋಲ್‌ಪೋಸ್ಟ್‌ಗೆ ಸೇರಿಸಿದರು.

67ನೇ ನಿಮಿಷದಲ್ಲಿ ರಾಮೊಸ್ ತಮ್ಮ ಮೂರನೇ ಗೋಲು ದಾಖಲಿಸಿದರು. 74ನೇ ನಿಮಿಷದಲ್ಲಿ ಸಬ್‌ಸ್ಟಿಟ್ಯೂಟ್ ಆಟಗಾರನಾಗಿ ರೊನಾಲ್ಡೊ ಕಣಕ್ಕಿಳಿದರು. ಒಂದು ಬಾರಿ ಅವರು ಚೆಂಡನ್ನು ಗೋಲ್‌ಪೋಸ್ಟ್‌ಗೆ ಸೇರಿಸಿದರೂ ಅದು ಆಫ್‌ಸೈಡ್ ಆಗಿತ್ತು.

ಇಂಜುರಿ ಅವಧಿಯಲ್ಲಿ ಲೆಯಾವೊ ಅವರು ಪೋರ್ಚುಗಲ್ ತಂಡದ ಆರನೇ ಗೋಲು ದಾಖಲಿಸಿದರು.

ಪೋರ್ಚುಗಲ್ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ ಮೊರೊಕ್ಕೊ ಸವಾಲು ಎದುರಿಸಲಿದೆ.

ಈ ಸೋಲಿನೊಂದಿಗೆ 1954ರ ಬಳಿಕ ಮೊದಲ ಬಾರಿ ಕ್ವಾರ್ಟರ್ ತಲುಪುವ ಸ್ವಿಸ್ ತಂಡದ ಆಸೆ ಈಡೇರಲಿಲ್ಲ. ಸತತ ಮೂರನೇ ವಿಶ್ವಕಪ್‌ನಲ್ಲಿ 16ರ ಘಟ್ಟದಲ್ಲಿ ಎಡವಿತು.

ಗೋಲು ವಿವರ

ಪೋರ್ಚುಗಲ್ 6
- ಗೊನ್ಸಾಲೊ ರಾಮೋಸ್ (17, 51, 67ನೇ ನಿ.)
- ಪೆಪೆ (33ನೇ ನಿ.)
- ರಫಾಯಿಲ್ ಗೆರೆರೊ (55ನೇ ನಿ.)
- ರಫೆಲ್ ಲೆಯಾವೊ (90+2ನೇ ನಿ.)

ಸ್ವಿಟ್ಜರ್ಲೆಂಡ್ 1
- ಮ್ಯಾನ್ಯುಯೆಲ್ ಅಕಾಂಜಿ (58ನೇ ನಿ.)

ಕ್ವಾರ್ಟರ್‌ಫೈನಲ್ಸ್

ಡಿಸೆಂಬರ್ 9	
ಕ್ರೊವೇಷ್ಯಾ Vs ಬ್ರೆಜಿಲ್	ರಾತ್ರಿ 8.30
ನೆದರ್ಲೆಂಡ್ಸ್ Vs ಅರ್ಜೆಂಟೀನಾ	ತಡರಾತ್ರಿ 12.30
ಡಿಸೆಂಬರ್ 10	
ಮೊರೊಕ್ಕೊ Vs ಪೋರ್ಚುಗಲ್	ರಾತ್ರಿ 8.30
ಇಂಗ್ಲೆಂಡ್ Vs ಫ್ರಾನ್ಸ್	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ವಿಶ್ವ ವೇಟ್‌ಲಿಫ್ಟಿಂಗ್: ಮೀರಾಗೆ ಬೆಳ್ಳಿ

ಬೊಗೊಟಾ, ಕೊಲಂಬಿಯಾ(ಪಿಟಿಐ): ಮಣಿಕಟ್ಟಿನ ನೋವನ್ನು ಸಹಿಸಿಕೊಂಡ ಭಾರತದ ಮೀರಾಬಾಯಿ ಚಾನು ಅವರು ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು.

ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಮೀರಾ, ಕೊಲಂಬಿಯಾದ ಬೊಗೊಟಾದಲ್ಲಿ ನಡೆದ ಚಾಂಪಿಯನ್‌ಷಿಪ್‌ನ 49 ಕೆಜಿ ವಿಭಾಗದಲ್ಲಿ ಒಟ್ಟು 200 ಕೆಜಿ ಭಾರ ಎತ್ತಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಸ್ನ್ಯಾಚ್‌ನಲ್ಲಿ 87 ಕೆಜಿ ಮತ್ತು ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ 113 ಕೆಜಿ ಭಾರ ಸಾಧನೆ ಮಾಡಿದರು.

ಮಂಗಳವಾರ ತಡರಾತ್ರಿ ನಡೆದ ಸ್ಪರ್ಧೆಯಲ್ಲಿ ಒಟ್ಟು 206 ಕೆ.ಜಿ ಭಾರ ಎತ್ತಿದ (93 ಕೆಜಿ +113 ಕೆಜಿ) ಚೀನಾದ ಜಿಯಾಂಗ್ ಹುವೈ, ಚಿನ್ನದ ಪದಕ ಜಯಿಸಿದರು. ಟೋಕಿಯೊ ಒಲಿಂಪಿಕ್ ಚಾಂಪಿಯನ್ ಚೀನಾದವರೇ ಆದ ಹೋವ್ ಜಿಹುವಾ ಕಂಚುಗೆದ್ದರು.



ಪದಕದೊಂದಿಗೆ ಮೀರಾಬಾಯಿ

'ಐದು ವರ್ಷಗಳ ಬಳಿಕ ಮತ್ತೊಂದು ವಿಶ್ವ ಚಾಂಪಿಯನ್‌ಷಿಪ್ ಪದಕ ಜಯಿಸುತ್ತಿರುವುದು ಭಾವನಾತ್ಮಕ ಕ್ಷಣ' ಎಂದು ಮೀರಾ ಹೇಳಿದ್ದಾರೆ.

ಸೆಪ್ಟೆಂಬರ್ ತಿಂಗಳಲ್ಲಿ ಗಾಯದ ಸಮಸ್ಯೆಗೆ ಒಳಗಾಗಿದ್ದರೂ ಅವರು ಅಕ್ಟೋಬರ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ್ದರು.

2017ರ ಆವೃತ್ತಿಯಲ್ಲಿ ಚಿನ್ನ ಗೆದ್ದಿದ್ದ ಮಣಿಪುರದ ಮೀರಾ ಅವರಿಗೆ ಇದು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಪದಕ.

ಸಂಕ್ಷಿಪ್ತ ಸುದ್ದಿ

ಎಲ್‌ಟಿಎಗೆ ₹ 8.23 ಕೋಟಿ ದಂಡ

ಲಂಡನ್: ರಷ್ಯಾ ಮತ್ತು ಬೆಲಾರಸ್‌ನ ಟೆನಿಸ್ ಆಟಗಾರರಿಗೆ ಹುಲ್ಲುಹಾಸಿನ ಅಂಗಣಗಳ ಟೂರ್ನಿಗಳಲ್ಲಿ ಆಡಲು ನಿಷೇಧ ಹೇರಿದ್ದ ಬ್ರಿಟನ್ ಲಾನ್ ಟೆನಿಸ್ ಸಂಸ್ಥೆಗೆ (ಎಲ್‌ಟಿಎ) ಎಟಿಪಿ ಬುಧವಾರ ₹ 8.23 ಕೋಟಿ ದಂಡ ವಿಧಿಸಿದೆ.

ಉಕ್ರೇನ್ ಮೇಲಿನ ರಷ್ಯಾ ದಾಳಿಯ ಹಿನ್ನೆಲೆಯಲ್ಲಿ ಆಟಗಾರರಿಗೆ ನಿಷೇಧ ಹೇರಲಾಗಿತ್ತು. ವಿಂಬಲ್ಡನ್ ಟೂರ್ನಿಗೂ ಮುನ್ನ ಈ ಕ್ರಮ ಕೈಗೊಳ್ಳಲಾಗಿತ್ತು.

ಎಟಿಪಿಯ ಈ ಕ್ರಮ ನಿರಾಶೆ ತರಿಸಿದೆ ಎಂದು ಎಲ್‌ಟಿಎ ತಿಳಿಸಿದೆ.

'ಅಂಧರ ಕ್ರಿಕೆಟ್: ಪಾಕಿಸ್ತಾನ ತಂಡ ಆಗಮಿಸುವುದಿಲ್ಲ'

ನವದೆಹಲಿ (ಪಿಟಿಐ): ಸದ್ಯ ನಡೆಯುತ್ತಿರುವ ಅಂಧರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ಭಾರತಕ್ಕೆ ಬರುತ್ತಿಲ್ಲ ಎಂದು ಭಾರತ ಅಂಧರ ಕ್ರಿಕೆಟ್ ಸಂಸ್ಥೆಯ (ಸಿಎಬಿಐ) ಅಧ್ಯಕ್ಷ ಮಹಾಂತೇಶ್ ಜಿ.ಕೆ. ತಿಳಿಸಿದ್ದಾರೆ.

'ಪಾಕಿಸ್ತಾನ ಆಟಗಾರರಿಗೆ ವೀಸಾ ಸಿಕ್ಕಿಲ್ಲ' ಎಂದು ಅವರು ಬುಧವಾರ ತಿಳಿಸಿದ್ದಾರೆ.

ಎರಡನೇ ಏಕದಿನ ಪಂದ್ಯದಲ್ಲಿ ರೋಚಕ ಜಯ ಸಾಧಿಸಿದ ಆತಿಥೇಯರು; ರೋಹಿತ್ ಆಟ ವ್ಯರ್ಥ

ಮಿರಾಜ್ ಮಿಂಚು: ಬಾಂಗ್ಲಾಕ್ಕೆ ಸರಣಿ ಕೈವಶ

ಮೀರ್‌ಪುರ್ (ಪಿಟಿಐ): ಕೈಬೆರಳಿನ ಗಾಯದ ನೋವಿನಲ್ಲೂ ಅಬ್ಬರಿಸಿದ ರೋಹಿತ್ ಶರ್ಮಾ ಅಭಿಮಾನಿಗಳ ಮನ ಗೆದ್ದರು. ಆದರೆ ಆತಿಥೇಯ ಬಾಂಗ್ಲಾ ತಂಡದ ಮೆಹದಿ ಹಸನ್ ಮಿರಾಜ್ ಅವರ ಆಲ್‌ರೌಂಡ್ ಆಟಕ್ಕೆ ಗೆಲುವು ಒಲಿಯಿತು.

ಬುಧವಾರ ಶೇರ್ ಎ ಬಾಂಗ್ಲಾ ಕ್ರೀಡಾಂಗಣದಲ್ಲಿ ನಡೆದ ಸರಣಿಯ ಎರಡನೇ ಪಂದ್ಯದಲ್ಲಿ ಬಾಂಗ್ಲಾ 5 ರನ್‌ಗಳ ರೋಚಕ ಜಯ ಸಾಧಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ತನ್ನ ಕೈವಶ ಮಾಡಿಕೊಂಡಿತು.


ಟಾಸ್ ಗೆದ್ದ ಬಾಂಗ್ಲಾದೇಶ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮಿರಾಜ್ (ಅಜೇಯ 100; 83ಎ, 4X8, 6X4) ಮತ್ತು ಮೆಹಮೂದುಲ್ಲಾ (77; 96ಎ, 4X7) ಏಳನೇ ವಿಕೆಟ್ ಜೊತೆಯಾಟದಲ್ಲಿ 148 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 271 ರನ್ ಗಳಿಸಿತು. 69 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಉತ್ತಮ ಮೊತ್ತ ಗಳಿಸಿಕೊಟ್ಟರು. ಸರಣಿಯ ಮೊದಲ ಪಂದ್ಯದಲ್ಲಿಯೂ ಭಾರತದ ಸೋಲಿಗೆ ಕಾರಣರಾಗಿದ್ದ ಮಿರಾಜ್ ಇಲ್ಲಿಯೂ ಕಾಡಿದರು. ಇನಿಂಗ್ಸ್‌ನ ಕೊನೆಯ 4 ಓವರ್‌ಗಳಲ್ಲಿ ಮಿರಾಜ್ ಅಬ್ಬರದಿಂದಾಗಿ ಬಾಂಗ್ಲಾ ತಂಡಕ್ಕೆ 54 ರನ್ ಹರಿದುಬಂದವು.

ಗಾಯದಲ್ಲೂ ರೋಹಿತ್ ಆಟ: ಗುರಿ ಬೆನ್ನಟ್ಟಿದ ಭಾರತ ತಂಡದ ಬ್ಯಾಟರ್‌ಗಳಾದ ಶಿಖರ್ ಧವನ್, ವಿರಾಟ್ ಕೊಹ್ಲಿ, ವಾಷಿಂಗ್ಟನ್ ಸುಂದರ್ ಮತ್ತು ಕೆ.ಎಲ್. ರಾಹುಲ್ ಅವರು ವಿಫಲರಾದರು. ಆದರೆ ಮಧ್ಯಮ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್ (82; 102ಎ) ಹಾಗೂ ಅಕ್ಷರ್ ಪಟೇಲ್ (56; 56ಎ) ಹೋರಾಟದಿಂದಾಗಿ ಜಯದ ಆಸೆ ಚಿಗುರಿತು.

ಆದರೆ ಫೀಲ್ಡಿಂಗ್ ಮಾಡುವಾಗ ಕೈಬೆರಳಿಗೆ ಆದ ಗಾಯದಿಂದಾಗಿ ಚಿಕಿತ್ಸೆಗೆ ತೆರಳಿ ವಿಶ್ರಾಂತಿ ಪಡೆದಿದ್ದ ರೋಹಿತ್ ಒಂಬತ್ತನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದರು. ತಂಡವನ್ನು ಗೆಲುವಿನಂಚಿಗೆ ತಂದರು.

ಐದು ಸಿಕ್ಸರ್ ಮತ್ತು ಮೂರು ಬೌಂಡರಿಗಳನ್ನೂ ಸಿಡಿಸಿ ಇನಿಂಗ್ಸ್‌ನ ಕೊನೆಯ ಎಸೆತದವರೆಗೂ ತಂಡದ ಜಯದ ಆಸೆಯನ್ನು ಜೀವಂತವಾಗಿಟ್ಟರು. ಮುಸ್ತಫಿಜುರ್ ಹಾಕಿದ ಕೊನೆಯ ಓವರ್‌ನ ಅಂತಿಮ 2 ಎಸೆತಗಳಲ್ಲಿ ಭಾರತದ ಗೆಲುವಿಗೆ 12 ರನ್‌ಗಳ ಅಗತ್ಯವಿತ್ತು. ಓವರ್‌ನ ಐದನೇ ಎಸೆತವನ್ನು ಸಿಕ್ಸರ್‌ಗೆತ್ತಿದರು ರೋಹಿತ್. ಆದರೆ, 6ನೇ ಎಸೆತವನ್ನು ಯಾರ್ಕರ್ ಮಾಡಿದ ಮುಸ್ತಫಿಜುರ್ ಚಾಣಾಕ್ಷತೆ ಮೆರೆದರು. ಇದರಿಂದ ರೋಹಿತ್‌ಗೆ ಮತ್ತೊಂದು ಸಿಕ್ಸರ್ ಹೊಡೆಯಲು ಆಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 271 (ಶಾಂತೊ 21, ಮೆಹಮುದುಲ್ಲಾ 77, ಮೆಹದಿ ಹಸನ್ ಮಿರಾಜ್ ಔಟಾಗದೆ 100, ಮೊಹಮ್ಮದ್ ಸಿರಾಜ್ 73ಕ್ಕೆ2, ಉಮ್ರಾನ್ ಮಲಿಕ್ 58ಕ್ಕೆ2, ವಾಷಿಂಗ್ಟನ್ ಸುಂದರ್ 37ಕ್ಕೆ3) ಭಾರತ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 266 (ಶ್ರೇಯಸ್ ಅಯ್ಯರ್ 82, ಅಕ್ಷರ್ ಪಟೇಲ್ 56, ರೋಹಿತ್ ಶರ್ಮಾ ಔಟಾಗದೆ 51, ಮೆಹದಿ ಹಸನ್ ಮಿರಾಜ್ 46ಕ್ಕೆ2, ಇಬಾದತ್ ಹುಸೇನ್ 45ಕ್ಕೆ3, ಶಕೀಬ್ ಅಲ್ ಹಸನ್ 39ಕ್ಕೆ2) ಫಲಿತಾಂಶ: ಬಾಂಗ್ಲಾದೇಶಕ್ಕೆ 5 ರನ್‌ಗಳ ಜಯ. 2–0ಯಿಂದ ಮುನ್ನಡೆ.



ಮೆಹದಿ ಹಸನ್ ಶತಕ ಸಂಭ್ರಮ– ಎಎಫ್‌ಪಿ ಚಿತ್ರ

ಟೆಸ್ಟ್ ಸರಣಿಗೆ ರೋಹಿತ್ ಅಲಭ್ಯ?

ಮೀರ್‌ಪುರ್ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಗಾಯಗೊಂಡಿರುವುದರಿಂದ ಬಾಂಗ್ಲಾದೇಶದ ಎದುರಿನ ಮೂರನೇ ಏಕದಿನ ಮತ್ತು ಟೆಸ್ಟ್ ಸರಣಿಗೆ ಅಲಭ್ಯರಾಗುವ ಸಾಧ್ಯತೆ ಇದೆ. ಅವರು ತವರಿಗೆ ಮರಳಲಿದ್ದಾರೆ. ಬುಧವಾರ ನಡೆದ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವಾಗ ಅವರ ಕೈಬೆರಳಿಗೆ ಚೆಂಡು ಬಡಿದು ಪೆಟ್ಟಾಗಿತ್ತು. ಅವರನ್ನು ಆಸ್ಪತ್ರೆಗೆ ಕರೆದೊಯ್ದು ಸಿಬ್ಬಂದಿ ಸ್ಕ್ಯಾನಿಂಗ್ ಮಾಡಿಸಿದ್ದರು.

'ರೋಹಿತ್, ಕುಲದೀಪ್ ಸೇನ್ ಮತ್ತು ದೀಪಕ್ ಚಾಹರ್ 3ನೇ ಏಕದಿನ ಪಂದ್ಯದಲ್ಲಿ ಆಡುವುದಿಲ್ಲ. ರೋಹಿತ್ ಚಿಕಿತ್ಸೆ ಪಡೆಯಲು ಮುಂಬೈಗೆ ಮರಳುವರು. ಆದರೆ ಅವರು ಟೆಸ್ಟ್ ಸರಣಿಗೆ ಮರಳುವ ಕುರಿತು ಈಗಲೇ ಹೇಳುವುದು ಕಷ್ಟ' ಎಂದು ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದರು.